# ಅಧ್ಯಾಯ–೬

# ಬ್ಯಾಂಕಿಂಗ್, ಹಣಕಾಸು ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ

ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳವನ್ನು ಪೂರೈಸುವಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬ್ಯಾಂಕಿಂಗ್ ವ್ಯವಹಾರವೆಂದರೆ ಬಂಡವಾಳದ ಸಂಗ್ರಹಣೆ ಮತ್ತು ವಿತರಣೆ. ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಸಂಸ್ಥೆಗಳು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾಗುವ ಬಂಡವಾಳವನ್ನು ಒದಗಿಸುವ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ, ಕೃಷಿ, ವ್ಯಾಪಾರ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಸಾಲವನ್ನು ಪೂರೈಸಿದರೆ, ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಪರಿವರ್ತನೆಗೊಳ್ಳುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಕೂಡ ಸಾಲನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ್ ವ್ಯವಸ್ಥೆ ಸಹಾಯಕವಾಗುತ್ತಿದೆ. ರಾಜ್ಯದ ಇತರೇ ಭಾಗಗಳಲ್ಲಿ ಕಾಣುತ್ತಿರುವಂತೆ, ಮಂಡ್ಯ ಜಿಲ್ಲೆಯಲ್ಲಿಯೂ ಸಹ ಬ್ಯಾಂಕಿಂಗ್ ವ್ಯವಸ್ಥೆಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಪ್ರಧಾನವಾದ ಪಾತ್ರ ವಹಿಸಿರುವುದನ್ನು ಕಾಣಬಹುದು.

## ಬ್ಯಾಂಕಿಂಗ್ ಮತ್ತು ಹಣಕಾಸು

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪುಗೊಳ್ಳುವ ಪೂರ್ವದಲ್ಲೂ, ವ್ಯವಸಾಯ ಅಭಿವೃದ್ಧಿ ಮತ್ತು ಸುಧಾರಣೆ ಹಾಗೂ ವ್ಯಾಪಾರ ವಾಣಿಜ್ಯ ಸಂಬಂಧದ ಚಟುವಟಿಕೆಗಳಿಗೆ ಸಾಲ ನೀಡುವ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿತ್ತು. ಗ್ರಾಮೀಣ ಜನಸಂಖ್ಯೆಯಲ್ಲಿ ಹೆಚ್ಚಿನವರು ಕೃಷಿಕರಿದ್ದು, ಸಾಮಾನ್ಯವಾಗಿ ತಮಗೆ ಅಗತ್ಯವಿದ್ದ ಸಾಲಕ್ಕಾಗಿ ಅವರು ನಿರ್ದಿಷ್ಟ ಬಡ್ಡಿದರದ ಮೇಲೆ ಸಾಲವನ್ನು ನೀಡುತ್ತಿದ್ದ

ಹಳ್ಳಿಯ ಸಾಹುಕಾರರು ಮತ್ತು ದಲ್ಲಾಳಿಗಳನ್ನೇ ಅವಲಂಬಿಸಿದ್ದರೆಂದು ಹೇಳಬಹುದು. ಈ ದಲ್ಲಾಳಿಗಳು ಮತ್ತು ಸಾಹುಕಾರರು ನೀಡುತ್ತಿದ್ದ ಸಾಲದ ಮೊತ್ತ ಕಡಿಮೆ ಇದ್ದು ಬಡ್ಡಿಯ ದರ ದುಬಾರಿಯಾಗಿರುತ್ತಿತ್ತು. ಇಂತಹ ಸಾಲದ ವ್ಯವಹಾರಗಳನ್ನು ನಿಯಂತ್ರಿಸಲು ಅಂದಿನ ಆಡಳಿತ ವ್ಯವಸ್ಥೆ ಯಾವುದೇ ಕಾನೂನನ್ನು ರೂಪಿಸದ ಕಾರಣ, ಸಣ್ಣ ಬಂಡವಾಳದಾರರೂ ಲೇವಾದೇವಿ ವ್ಯವಹಾರದಿಂದ ದುರ್ಲಾಭ ಪಡೆಯುತ್ತಿದ್ದರು. ಬೇಸಾಯಕ್ಕಾಗಿ ಅಗತ್ಯವಿದ್ದ ಸಾಲಕ್ಕಾಗಿ ಸಾಮಾನ್ಯವಾಗಿ ಕೃಷಿಕರು ಜಮೀನಿನಂತಹ ಸ್ಥಿರಾಸ್ತಿ ಮತ್ತು ಆಭರಣ ಮುಂತಾದವನ್ನು ಹಳ್ಳಿಯ ಸಾಹುಕಾರರ ಬಳಿ ಒತ್ತೆಯಿಟ್ಟು ಸಾಲವನ್ನು ಪಡೆಯಬೇಕಾಗಿತ್ತು. ರೈತರು ತಮ್ಮ ಅಗತ್ಯಗಳ ಪೂರೈಕೆಗಾಗಿ ಹಣವನ್ನು ಪಡೆಯಲು ಸ್ಥಳೀಯ ಸಾಹುಕಾರರ ಬಳಿಗೆ ಹೋಗುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು.

ಪ್ರತಿಯೊಂದು ಹಳ್ಳಿಯಲ್ಲೂ ಸ್ಥಳೀಯರಿಗೆ ಪರಿಚಯವಿದ್ದ ಮೂರ್‍ನಾಲ್ಕಾದರೂ ಲೇವಾದೇವಿಗಾರರಿದ್ದರು. ಸ್ಥಳೀಯರ ನಡತೆ ಮತ್ತು ಅವರ ಸೊತ್ತಿನ ಬಗ್ಗೆ ಸ್ಪಷ್ಟ ಅರಿವು ಹೊಂದಿರುತ್ತಿದ್ದ ಈ ಲೇವಾದೇವಿಗಾರರು ನಿಗದಿತ ಬಡ್ಡಿದರದ ಮೇಲೆ ಸಾಲವನ್ನು ನೀಡುತ್ತಿದ್ದು, ಅಸಲು ಮತ್ತು ಬಡ್ಡಿಯ ವಸೂಲಿಗಾಗಿ ಸಾಲಗಾರರ ಮನೆ ಬಾಗಿಲಿಗೂ ಹೋಗುತ್ತಿದ್ದರು. ಸಾಲವನ್ನು ತೀರಿಸಲಾಗದವರು ತಮ್ಮ ಒತ್ತೆಯ ಸ್ವತ್ತನ್ನು ಕಳೆದುಕೊಳ್ಳಬೇಕಿತ್ತು. ಬಹುಪಾಲು ರೈತರು ಅನಕ್ಷರಸ್ಥರಾಗಿದ್ದ ಕಾರಣ ಲೇವಾದೇವಿಗಾರರ ವಂಚನೆಗೆ ಸುಲಭವಾಗಿ ಬಲಿಯಾಗುತ್ತಿದ್ದರು. ಹಣದ ತುರ್ತು ಅಗತ್ಯವಿದ್ದ ರೈತರಿಗೆ ಸಾಲ ನೀಡುವುದೇ ಲೇವಾದೇವಿಗಾರರ ವೃತ್ತಿಯಾಗಿತ್ತು. ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದ ಕೆಲ ಶ್ರೀಮಂತ ಲೇವಾದೇವಿಗಾರರೂ ಸಹ ಹಳ್ಳಿಯ ರೈತರಿಗೆ ಆಗಾಗ ಸಾಲವನ್ನು ನೀಡುತ್ತಿದ್ದು, ಸಾಲ ವಸೂಲಿಗೆ ಅವರು ಒತ್ತಾಯ, ಒತ್ತಡ ಮತ್ತು ಶೋಷಣೆಯ ವಿಧಾನಗಳನ್ನು ಅನುಸರಿಸುತ್ತಿದ್ದರು. ಯಾವಾಗಲೂ ನಗದು ಹಣವನ್ನು ಯಥೇಚ್ಛವಾಗಿ ಹೊಂದಿರುತ್ತಿದ್ದ ಇವರು ಅದರಿಂದ ಹೆಚ್ಚು ಲಾಭಗಳಿಸಲು ಮುಂದಾಗುತ್ತಿದ್ದರು. ಸುಗ್ಗಿಯ ಕಾಲದಲ್ಲಿ ಇವರು ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ದೊಡ್ಡ ಪ್ರಮಾಣದಲ್ಲಿ ಖರೀದಿಸಿದ ದವಸಧಾನ್ಯಗಳನ್ನು ತಮ್ಮ ಉಗ್ರಾಣಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಮಾರುಕಟ್ಟೆಯಲ್ಲಿ ದವಸಧಾನ್ಯಗಳ ಕೊರತೆಯುಂಟಾಗಿ ಧಾರಣೆ ಹೆಚ್ಚಿದಾಗ ತಮ್ಮ ಸಂಗ್ರಹದಲ್ಲಿದ್ದ ಮಾಲನ್ನು ಹೆಚ್ಚಿನ ಬೆಲೆಗೆ ಮಾರಿ ಅಧಿಕ ಲಾಭ ಗಳಿಸುತ್ತಿದ್ದರು.

ಮಂಡ್ಯ ಜಿಲ್ಲೆಯ ರೈತರು ಹಾಗೂ ವ್ಯಾಪಾರಿಗಳಿಗೆ ಅಗತ್ಯವಿದ್ದ ಬಹು ಪಾಲು ಸಾಲವನ್ನು ಮೈಸೂರು ನಗರದ ಶ್ರೀಮಂತ ವ್ಯಾಪಾರಿಗಳೇ ಒದಗಿಸುತ್ತಿದ್ದು, ಮೈಸೂರಿನಿಂದ ಅವರು ಸಾಲ ನೀಡಲೆಂದೇ ಗಂಜಾಂ, ಮಂಡ್ಯ, ಹಿರೋಡೆ (ಪಾಂಡವಪುರ) ಮತ್ತು ಅತ್ತಿಗುಪ್ಪೆ (ಕೃಷ್ಣರಾಜಪೇಟೆ)ಮುಂತಾದೆಡೆಗಳಿಗೆ ಬಂದು ಸ್ವಲ್ಪ ದಿನ ವಾಸ್ತವ್ಯ ಹೂಡಿ, ಭದ್ರತೆ ಪಡೆದು ಸಾಲ ನೀಡುತ್ತಿದ್ದರು. ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣದ ಗಂಜಾಂ ಗ್ರಾಮವನ್ನು ದೊಡ್ಡ ಕೈಗಾರಿಕಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿದಾಗ ಹೇರಳ ಹಣ ಹೊಂದಿದ್ದ ಅನೇಕ ಶ್ರೀಮಂತರು ಗಂಜಾಂನಲ್ಲಿ ನೆಲೆ ನಿಂತು, ಟಿಪ್ಪುವು ಶಿರಾದಿಂದ ಬರಮಾಡಿಕೊಂಡ ಅಲ್ಲಿನ ಕುಶಲಕರ್ಮಿಗಳಿಗೆ ಹಣಕಾಸಿನ ಸಾಲ ಒದಗಿಸುತ್ತಿದ್ದರು. ಮೈಸೂರು ಯುದ್ಧಗಳಿಂದಾಗಿ ಸ್ವಲ್ಪಕಾಲ ಪ್ರಾಮುಖ್ಯತೆಯನ್ನು ಕಳೆದುಕೊಂಡ ಗಂಜಾಂ ೧೮೦೪ರ ನಂತರ ಮತ್ತೆ ಅದನ್ನು ಗಳಿಸಿಕೊಳ್ಳಲಾರಂಭಿಸಿತು. ಈ ಸಮಯದಲ್ಲಿ ಗಂಜಾಂ, ಹಿರೋಡೆ ಹಾಗೂ ನಾಗಮಂಗಲಗಳಲ್ಲಿ ಶ್ರೀಮಂತ ಲೇವಾದೇವಿಗಾರರಿದ್ದರು. ಸಾಲಗಾರರು ನಿರಂತರವಾಗಿ ಬಡ್ಡಿ ನೀಡುತ್ತಿದ್ದು, ಹೆಚ್ಚಿನ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಬಡ್ಡಿಯೇ ಸಾಲದ ಹಣಕ್ಕಿಂತ ಹೆಚ್ಚಾಗಿರುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಪ್ರಾಂತಾಧಿಕಾರಿಯಾಗಿ ಶ್ರೀರಂಗರಾಯನು ಶ್ರೀರಂಗಪಟ್ಟಣದಲ್ಲಿ ಆಡಳಿತ ನಿರ್ವಹಿಸುತ್ತಿದ್ದ ಕಾಲದಲ್ಲಿ ಹೆಚ್ಚುಹೆಚ್ಚು ಬಂಜರು ಭೂಮಿಯನ್ನು ಬೇಸಾಯಕ್ಕೊಳಪಡಿಸಲು ರೈತರನ್ನು ಪ್ರೋತ್ಸಾಹಿಸಲು ಸರ್ಕಾರ ಜಾನುವಾರು, ಕೃಷಿ ಪರಿಕರಗಳು, ಮುಂತಾದವನ್ನು ಹೊಂದಲು ಅವರಿಗೆ ಹಣಕಾಸನ್ನು ಸಾಲವಾಗಿ ನೀಡುವ

ವ್ಯವಸ್ಥೆ ಮಾಡಿತ್ತು. ವಿವಿಧ ವಾಣಿಜ್ಯ ಉತ್ಪನ್ನಗಳ ಉತ್ಪಾದನೆ ಮತ್ತು ತಯಾರಿಕೆಯಲ್ಲಿ ಆರಂಭದ ವೆಚ್ಚ, ಬಿತ್ತನೆ ಬೀಜ, ಸಸಿ ಮುಂತಾದವುಗಳನ್ನು ಒದಗಿಸುವುದರ ಮೂಲಕ ಕೃಷಿ ಮತ್ತು ವಾಣಿಜ್ಯ ಅಭಿವೃದ್ಧಿಗೆ ಸರ್ಕಾರ ಉತ್ತೇಜನ ನೀಡುತ್ತಿತ್ತು. ವಿದೇಶಿ ವರ್ತಕರಿಗೆ ಹಣದ ಸಹಾಯ ಒದಗಿಸುವ ಮೂಲಕ ಹೊಸದಾಗಿ ನಿರ್ಮಿಸಿದ ಪೇಟೆ ಮತ್ತು ಮಾರುಕಟ್ಟೆಗಳಲ್ಲಿ ಅವರು ನೆಲೆಸುವಂತೆ ಮಾಡಿ ಅಮೂಲ್ಯ ಮತ್ತು ಸ್ಥಳೀಯವಾಗಿ ಹೆಚ್ಚು ಬೇಡಿಕೆ ಇದ್ದ ವಸ್ತುಗಳನ್ನು ದೂರದ ದೇಶಗಳಿಂದ ತಂದು ಮಾರುವುದಕ್ಕೆ ಮತ್ತು ಸ್ಥಳೀಯ ವಸ್ತುಗಳನ್ನು ಬೇಡಿಕೆ ಇರುವ ಪ್ರದೇಶಗಳಿಗೆ ರಫ್ತು ಮಾಡುವುದಕ್ಕೆ ಅವರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಮುಂದೆ ಆಂತರಿಕ ಕಲಹ ಮತ್ತು ಯುದ್ಧದ ಕಾರಣದಿಂದಾಗಿ ಸರ್ಕಾರ ಮೇಲಿನ ಸವಲತ್ತುಗಳನ್ನು ನಿಲ್ಲಿಸಿದ್ದರಿಂದ, ಆ ಪ್ರದೇಶಗಳಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದವರು ಹೆಚ್ಚು ಶ್ರೀಮಂತರಾದರು. ಪರಸ್ಪರ ನಂಬಿಕೆ ಮತ್ತು ವಿಶ್ವಾಸದ ಮೇಲೆ ಲೇವಾದೇವಿಗಾರರು ಸಾಲಗಾರರಿಗೆ ಸರಳವಾಗಿ ಸಾಲ ನೀಡುತ್ತಿದ್ದುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಲೇವಾದೇವಿ ವೃತ್ತಿಯು ಜನಪ್ರಿಯತೆಯನ್ನು ಗಳಿಸಿತ್ತು. ಸಾಲದ ಚಿರಪರಿಚಿತ ವಿಧಾನ 'ಕೈಸಾಲ'ವಾಗಿತ್ತು.

ಅಂದಿನ ಕೇಂದ್ರ ಸರ್ಕಾರ ೧೮೮೦ರಲ್ಲಿ ಭೂಸುಧಾರಣಾ ಸಾಲ ಕಾನೂನನ್ನು ಜಾರಿಗೊಳಿಸಿತು. ಇದರಿಂದಾಗಿ ಕೃಷಿ ಚಟುವಟಿಕೆಗಳ ಪ್ರಗತಿಗೆ ರೈತರು ಸರಳ ನಿಯಮಗಳಡಿಯಲ್ಲಿ ಸಾಲವನ್ನು ಪಡೆಯಲು ಸಾಧ್ಯವಾಯಿತು. ರೈತರ ಸಾಲ ಪರಿಹಾರಕ್ಕಾಗಿ ಕೈಗೊಳ್ಳಲಾದ ಸರ್ಕಾರದ ಮುಂದಿನ ಹಲವಾರು ಕ್ರಮಗಳಿಗೆ ಇದು ಪ್ರೇರಣೆಯಾಯಿತು. ಸಣ್ಣ ಮತ್ತು ಬಡ ರೈತರಿಗೆ ಸಾಲ ಒದಗಿಸುವ ಉದ್ದೇಶದಿಂದ ೧೮೯೪ರಲ್ಲಿ ಅಂದಿನ ದಿವಾನರು ಕೃಷಿ ಬ್ಯಾಂಕುಗಳ ಸ್ಥಾಪನೆಗೆ ಆದೇಶಿಸಿದರು. ಸರ್ಕಾರ ಕೈಗೊಂಡ ಒಂದು ಮಾದರಿ ವ್ಯವಸ್ಥೆ ಇದಾಗಿತ್ತೆಂದು ಆ ದಿನಗಳಲ್ಲಿ ನಂಬಲಾಗಿತ್ತು. ೧೯೦೧ ರ ವೇಳೆಗೆ ಆಗಿನ ಮೈಸೂರು ಸಂಸ್ಥಾನದಲ್ಲಿ ಇಂತಹ ಹಲವಾರು ಬ್ಯಾಂಕುಗಳಿದ್ದವಾದರೂ, ಅವು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಸರ್ಕಾರ ೧೯೦೫ರಲ್ಲಿ ಜಾರಿಗೆ ತಂದ ಸಹಕಾರಿ ಸಂಘಗಳ ಕಾಯ್ದೆ (ರೆಗ್ಯುಲೇಷನ್ III)ಇಂದಾಗಿ ರಾಜ್ಯದಲ್ಲಿ ಸಹಕಾರಿ ಆಂದೋಲನಕ್ಕೆ ಚಾಲನೆ ದೊರೆಯಿತು. ಇದರೊಂದಿಗೆ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ಸ್ಥಾಪನೆಗೆ ವ್ಯವಸ್ಥಿತ ಪ್ರಯತ್ನ ಆರಂಭವಾಯಿತು. ಈ ರೀತಿಯ ವ್ಯವಸ್ಥಿತ ಸಾಲ ಸೌಲಭ್ಯ ನೀಡುವ ಯತ್ನ ಆರಂಭಗೊಂಡ ನಂತರವೂ ಲೇವಾದೇವಿಗಾರರ ಹಾವಳಿ ಕಡಿಮೆಯಾಗಲಿಲ್ಲ. ಮೈಸೂರು ಸಂಸ್ಥಾನದಲ್ಲಿನ ಸಹಕಾರಿ ಬ್ಯಾಂಕುಗಳು ಕೆಲ ಷರತ್ತಿನ ಮೇಲೆ ಸಾಲ ನೀಡುತ್ತಿದ್ದವಾದರೂ, ಸಾಲ ನೀಡುವಲ್ಲಿ ಅವು ಅನುಸರಿಸುತ್ತಿದ್ದ ವಿಧಿವಿಧಾನಗಳು ಮತ್ತು ಆಗುತ್ತಿದ್ದ ವಿಳಂಬಗಳು, ಹಣದ ತುರ್ತು ಅಗತ್ಯವಿದ್ದವರನ್ನು, ಪ್ರಾಮಿಸರಿ ಪತ್ರಗಳ ಆಧಾರದ ಮೇಲೆ ಸರಳವಾಗಿ ಸಾಲವನ್ನು ನೀಡುತ್ತಿದ್ದ ಲೇವಾದೇವಿಯವರತ್ತಲೇ ದೂಡುತ್ತಿದ್ದುದು ಸಾಮಾನ್ಯವಾಗಿತ್ತು. ಮಿಗಿಲಾಗಿ ಇಂತಹ ವ್ಯವಸ್ಥಿತ ಸಾಲ-ಸೌಲಭ್ಯ ನೀಡುವ ಹಣಕಾಸು ಸಂಸ್ಥೆಗಳು ಜಿಲ್ಲಾ ಕೇಂದ್ರ ಮತ್ತು ದೊಡ್ಡ ಪಟ್ಟಣಗಳಲ್ಲಿ ಮಾತ್ರ ಇದ್ದವು. ಗ್ರಾಮೀಣ ಪ್ರದೇಶಗಳಲ್ಲಿನ ರೈತರು ತಮ್ಮ ತುರ್ತು ಹಣದ ಅಗತ್ಯಕ್ಕೆ ಹೆಚ್ಚಾಗಿ ಹಳ್ಳಿಯ ಸಾಹುಕಾರರನ್ನೇ ಮೊರೆಹೋಗುವಂತಾಗಿತ್ತು.

## ಗ್ರಾಮೀಣ ಋಣಗ್ರಸ್ತತೆ

ಋಣಗ್ರಸ್ತತೆ ಕೇವಲ ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ, ರಾಜ್ಯದಲ್ಲಿನ ಬಹುತೇಕ ಕೃಷಿಕರು ಒಂದಲ್ಲ ಒಂದು ರೀತಿಯಲ್ಲಿ ಸಾಲವಂದಿಗರಾಗಿದ್ದರು. ರೈತರು ಮಾಡುವ ಕೃಷಿ ಸಾಲ ಬಹಳ ಹಿಂದಿನಿಂದಲೂ ನಡೆದು ಬಂದ ಪದ್ಧತಿ. ರೈತರು ಇಂತಹ ಸಾಲ ಪಡೆಯುವುದಕ್ಕೆ ಹಲವಾರು ಕಾರಣಗಳಿದ್ದವು. ಸಾಲಗಾರನು ತನ್ನ ಪ್ರತಿ ವರ್ಷದ ಆದಾಯದಲ್ಲಿ ಹೆಚ್ಚಿನ ಭಾಗ ಸಾಲದ ಬಾಬ್ತಿಗೆ ನೀಡುತ್ತಿದ್ದುದರಿಂದ, ಉಳಿದ ಹಣದಿಂದ ಆತನ ಜೀವನ ನಿರ್ವಹಣೆ ದುರ್ಭರವಾಗಿತ್ತು. ಸಣ್ಣ ಹಿಡುವಳಿ, ಅದರ ಮರುವಿಭಜನೆ, ಕ್ಷಾಮ ಮತ್ತು ರೋಗರುಜಿನಗಳಿಂದಾಗುತ್ತಿದ್ದ

ಜಾನುವಾರುಗಳ ಸಾವು, ಕೃಷಿ ಬೆಳೆಯ ಅನಿಶ್ಚಿತತೆ, ಮುಂತಾದ ಸಮಸ್ಯೆಗಳೂ ಸಹ ರೈತರ ಬವಣೆಗೆ ಕಾರಣಗಳಾಗಿ ಅವರನ್ನು ಸಾಲದ ಮೊರೆ ಹೋಗುವಂತೆ ಮಾಡಿತ್ತು. ರೈತರಿಗೆ ಮತ್ತವರ ಕುಟುಂಬದ ಸದಸ್ಯರಿಗೆ ಬಿಡುವಿನ ವೇಳೆಯಲ್ಲಿ ಉಪಕಸಬನ್ನು ಒದಗಿಸುತ್ತಿದ್ದ ಗೃಹ ಕೈಗಾರಿಕೆಗಳು ಯಂತ್ರ ನಿರ್ಮಿತ ವಸ್ತುಗಳು ಒಡ್ಡಿದ ಸವಾಲಿನಿಂದಾಗಿ ಕುಂಠಿತಗೊಂಡ ಪರಿಣಾಮವೂ ರೈತರ ಬದುಕನ್ನು ಕಂಗೆಡಿಸಿತ್ತು.

ಜಿಲ್ಲೆಯಲ್ಲಿದ್ದ ಗ್ರಾಮೀಣ ಸಾಲ ಮತ್ತು ಅದರ ವ್ಯಾಪ್ತಿಯನ್ನು ನಿಖರವಾಗಿ ನೀಡಲು ಸಾಧ್ಯವಾಗದಾದರೂ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚಿನವರು ಸಾಲವಂದಿಗರಾಗಿದ್ದರೆಂದು ಹಿಂದಿನ ಸಮೀಕ್ಷಾ ವರದಿಗಳು ತಿಳಿಸುತ್ತವೆ. ಭೂಮಿಯನ್ನೇ ಅವಲಂಬಿಸಿದವರ ಸಂಖ್ಯೆಯಲ್ಲಾದ ತೀವ್ರ ಹೆಚ್ಚಳ, ಕಡಿಮೆ ಆದಾಯ, ಬರಗಾಲ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ನೆರವಾಗಬಲ್ಲ ಉಳಿತಾಯದ ಕೊರತೆ, ಇವೂ ಗ್ರಾಮೀಣ ಋಣಗ್ರಸ್ತತೆಗೆ ಕಾರಣಗಳಾಗಿದ್ದವು. ಕೇವಲ ಜೀವನ ನಿರ್ವಹಣೆಗಾಗಿ ರೈತರು ದುಡಿಯುವಂತಾಗಿತ್ತು. ಮನೆತನದ ಇತರ ವೆಚ್ಚಕ್ಕಾಗಿ ಅಥವಾ ವಿವಾಹ, ಅಂತ್ಯಕ್ರಿಯೆ, ಸಮಾರಂಭಗಳು, ಮುಂತಾದ ಆಗಾಗಿನ ಅನುತ್ಪಾದಕ ವೆಚ್ಚಗಳಿಗೂ ಸಹ ರೈತರು ಸಾಲ ಮಾಡಬೇಕಾಗುತ್ತಿತ್ತು. ರೈತರನ್ನು ಸಾಲಗಾರರನ್ನಾಗಿಸುವಲ್ಲಿ ಅವರಿಗೆ ಕೃಷಿಯಿಂದ ಬರುತ್ತಿದ್ದ ಅಲ್ಪ ಆದಾಯವು ಸಹ ಬಹು ಹಿಂದಿನಿಂದಲೂ ಕಾರಣವಾಗಿತ್ತು. ಮಂಡ್ಯವೂ ಸೇರಿದಂತೆ ಮೈಸೂರು ಸಂಸ್ಥಾನದ ತಲಾ ಆದಾಯವು ೧೯೧೨-೧೩ರಲ್ಲಿ ರೂ. ೪೭-೯-೧೦ ಅಥವಾ ಸುಮಾರು ೪೮ ರೂ. ಇದ್ದಿತು. ೧೯೨೨-೨೩ ರಲ್ಲಿ ಇದು ರೂ.೬೮-೭-೧೦ ಅಥವಾ ಸುಮಾರು ೬೮ ರೂ. ಇದ್ದಿತು. ಇದನ್ನು ೧೯೧೪ರಲ್ಲಿನ ರೂ.೪೪ ಮತ್ತು ೧೯೨೨ರಲ್ಲಿನ ರೂ.೭೨ ಇದ್ದ ಸಮಸ್ತ ಭಾರತದ ತಲಾದಾಯದೊಂದಿಗೆ ಹೋಲಿಸಬಹುದಾಗಿದೆ. 'ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿನ ಶೇ.೮೦ರಷ್ಟು ಜನ ತಮ್ಮ ಜೀವನ ನಿರ್ವಹಣೆಗಾಗಿ ಪ್ರಧಾನವಾಗಿ ಕೃಷಿ ಭೂಮಿಯನ್ನೇ ಅವಲಂಬಿಸಿದ್ದರೆಂದು ಪರಿಗಣಿಸಿ, ಒಟ್ಟು ಕೃಷಿ ಉತ್ಪನ್ನಗಳ ಮೌಲ್ಯವನ್ನು ೧೮ ಕೋಟಿ ರೂ.ಗಳೆಂದು ಅಂದಾಜಿಸಿದರೆ, ಆಗ ರಾಜ್ಯದ ಜನತೆಯ ವಾರ್ಷಿಕ ತಲಾ ವರಮಾನವು ಕೇವಲ ೩೫ ರೂ.ಗಳಾಗುವುದೆಂದು' ೧೯೨೬ರ ಸುಮಾರಿನ ವರದಿಯೊಂದು ತಿಳಿಸುತ್ತದೆ. ೧೯೬೧ರಲ್ಲಿ ಮಂಡ್ಯ ಜಿಲ್ಲೆಯ ತಲಾ ವರಮಾನವು ೩೧೭ರೂ. ಇದ್ದಾಗ ರಾಜ್ಯದ ಸರಾಸರಿ ತಲಾವರಮಾನ ೨೮೯ ರೂ.ಗಳಾಗಿತ್ತು. ೧೯೩೬ರಲ್ಲಿ ಮಂಡ್ಯಜಿಲ್ಲೆ ಸೇರಿದಂತೆ ಮೈಸೂರು ಸಂಸ್ಥಾನದಲ್ಲಿ ರೈತರ ಸರಾಸರಿ ತಲಾವಾರು ಸಾಲವು ೫೦ ರೂ.ಗಳಾಗಿತ್ತೆಂದು ಅಂದಾಜಿಸಲಾಗಿತ್ತು.

**ವರಮಾನವಾರು ಸಾಲಗಾರರು** : ೧೯೬೧ರ ಜನಗಣತಿಗೆ ಪೂರಕವಾಗಿ ಕೈಗೊಂಡ ಕಿಕ್ಕೇರಿ ಗ್ರಾಮದ ಸಮೀಕ್ಷೆಯ ವರದಿಯನ್ವಯ ಮಂಡ್ಯ ಜಿಲ್ಲೆಯ ಕಿಕ್ಕೇರಿ ಗ್ರಾಮದಲ್ಲಿದ್ದ ವಿವಿಧ ಮಾಸಿಕ ಆದಾಯ ಗುಂಪುಗಳಿಗೆ ಸೇರಿದ ಕುಟುಂಬಗಳ ಸರಾಸರಿ ಋಣಗ್ರಸ್ತತೆಯನ್ನು ಈ ರೀತಿಯಲ್ಲಿ ಅಂದಾಜಿಸಲಾಗಿತ್ತು.

| ವಿವಿಧ ಆದಾಯದ ಗುಂಪುಗಳು | ಪ್ರತಿ ಕುಟುಂಬ ಹೊಂದಿದ್ದ ಸರಾಸರಿ ಸಾಲ |
|---|---|
| ರೂ. ೧೦೦ ಮತ್ತು ನೂರಕ್ಕಿಂತ ಹೆಚ್ಚು | ರೂ. ೧,೦೬೨ |
| ರೂ. ೭೬ ರಿಂದ ರೂ.೧೦೦ | ರೂ. ೪೦೩ |
| ರೂ. ೫೧ ರಿಂದ ರೂ. ೭೫ | ರೂ. ೨೮೯ |
| ರೂ. ೨೬ ರಿಂದ ರೂ. ೫೦ | ರೂ. ೨೪೭ |
| ರೂ. ೨೫ ಮತ್ತು ಅದಕ್ಕಿಂತ ಕಡಿಮೆ | ರೂ. ೧೪೦ |

೧೯೪೧ರಲ್ಲಿ ಈ ಗ್ರಾಮದ ಒಟ್ಟು ೪೧೪ ಕುಟುಂಬಗಳಲ್ಲಿ, ೨೨೮ ಕುಟುಂಬಗಳ ೨,೦೦೪ ಸದಸ್ಯರು ಸಾಲಗಾರರಾಗಿದ್ದರು. ಅವರು ಪಡೆದ ಸಾಲದ ಮೊತ್ತ ಒಟ್ಟು ೬೧,೮೯೩ ರೂ.ಗಳಾಗಿತ್ತು. ಅದೇ ರೀತಿ ೧೯೬೨ರಲ್ಲಿ ಸಮೀಕ್ಷೆ ನಡೆಸಿದಾಗ ಕಂಡುಬಂದಂತೆ ೫೩೬ ಕುಟುಂಬಗಳಲ್ಲಿ, ೫೨೬ ಕುಟುಂಬಗಳ ೨,೮೪೭ ಸದಸ್ಯರು ಪಡೆದಿದ್ದ ಒಟ್ಟು ಸಾಲದ ಮೊತ್ತ ೨,೪೦,೪೨೨ ರೂ.ಗಳಾಗಿತ್ತು. ಈ ಅಂಶಗಳು ಸಾಲದ ಹೊರೆ ಹೆಚ್ಚಾದಂತೆ ಸೂಚಿಸುತ್ತಾದರೂ, ಆರ್ಥಿಕ ಅಭ್ಯುದಯಕ್ಕಾಗಿ ಗ್ರಾಮೀಣರಲ್ಲಿ ಉಂಟಾದ ಜಾಗೃತಿಯಿಂದಾಗಿ, ಅವರು ಹೆಚ್ಚಾಗಿ ಉತ್ಪಾದನಾ ಉದ್ದೇಶಗಳಿಗಾಗಿಯೇ ಸಾಲವನ್ನು ಪಡೆದಿದ್ದರೆಂಬುದು ಗಮನಾರ್ಹವಾಗಿದೆ. ಇದರಿಂದಾಗಿ ಗ್ರಾಮೀಣ ಜನರ ಆರ್ಥಿಕ ಸ್ಥಿತಿಯು ಸುಧಾರಿಸುವಂತಾಯಿತು.

ಈಗಾಗಲೇ ಗಮನಿಸಿರುವಂತೆ ಲೇವಾದೇವಿ ವ್ಯವಹಾರವು ಬಹು ಹಿಂದಿನಿಂದಲೂ ರೂಢಿಯಲ್ಲಿತ್ತು. ಹೈದರ್ ಆಲಿಯ ಕಾಲದಲ್ಲೂ, ಶ್ರೀರಂಗಪಟ್ಟಣದಲ್ಲಿ ಸಾಹುಕಾರರು ಮತ್ತು ಗ್ರಾಮ ಲೇವಾದೇವಿಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರು ಸ್ಥಳೀಯ ಇಲ್ಲವೇ ಬೇರೆಡೆಯಿಂದ ಬಂದು ಬಹಳ ಹಿಂದೆಯೇ ನೆಲೆಸಿದವರಾಗಿದ್ದರು. ಬೇರೆಡೆಯಿಂದ ಬಂದವರಲ್ಲಿ ಹೆಚ್ಚಿನವರು ಗುಜರಾತ್‌ನವರಾಗಿದ್ದು, ಅದರಿಂದಾಗಿ ಅವರನ್ನು ಗುಜರಾತಿಗಳೆಂದೇ ಕರೆಯಲಾಗುತ್ತಿತ್ತು. ಅವರು ವ್ಯಕ್ತಿಗತ ವಿಶ್ವಾಸದ ಮೇಲೆಯೇ ಹೆಚ್ಚಾಗಿ ಸಾಲ ನೀಡುತ್ತಿದ್ದರು. ಪ್ರಾಮಾಣಿಕತೆ ಮತ್ತು ವ್ಯಾವಹಾರಿಕ ಚತುರತೆಗೆ ಹೆಸರಾಗಿದ್ದ ಅವರು ಸಮಾಜದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದರು. ಸ್ವತಃ ಹೈದರಾಲಿಯೇ ಬ್ಯಾಂಕರ್ ಆಗಿದ್ದನೆಂದು ಸಹ ಹೇಳಲಾಗುತ್ತದೆ. ಆತ ತನ್ನ ನೌಕರರಿಗೆ ಸಾಲವನ್ನೇನಾದರೂ ನೀಡಿದಲ್ಲಿ ಸಾಲದ ಹಣ ಪಾವತಿ ಮಾಡುವವರಿಗೆ ನೌಕರನ ವೇತನದ ೧/೩ ಭಾಗವನ್ನು ತಡೆಹಿಡಿಯುತ್ತಿದ್ದನೆಂದು ಹೇಳಲಾಗುತ್ತದೆ. ಲೇವಾದೇವಿಗಾರರು ಒದಗಿಸುತ್ತಿದ್ದ ಸೇವೆಯು ಸ್ವಲ್ಪ ಮಟ್ಟಿಗೆ ಉಪಯುಕ್ತವಾಗಿದ್ದರೂ, ಅವರು ವಿಧಿಸುತ್ತಿದ್ದ ದುಬಾರಿ ಬಡ್ಡಿ ಮತ್ತು ವ್ಯವಹಾರದಲ್ಲಿ ಅನುಸರಿಸುತ್ತಿದ್ದ ಮಾರ್ಗಗಳು ಸಾಮಾನ್ಯವಾಗಿ ಸಾಲಗಾರರನ್ನು ಸಂಕಷ್ಟಕ್ಕೆ ತಳ್ಳುತ್ತಿದ್ದವು.

### ಲೇವಾದೇವಿ ನಿಯಂತ್ರಣ

ದುಬಾರಿ ಬಡ್ಡಿ ತೆತ್ತು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಿದ್ದ ಸಾಲಗಾರರ ಶೋಚನೀಯ ಸ್ಥಿತಿ ಸರ್ಕಾರದ ಗಮನ ಸೆಳೆಯುವಂತಾಯಿತು. ಈ ಅನಿಷ್ಟ ಪದ್ಧತಿಯನ್ನು ತೊಡೆದುಹಾಕುವಂತೆ ಮೈಸೂರು ಸಂಸ್ಥಾನದ ಅಂದಿನ ಪ್ರಜಾ ಪ್ರತಿನಿಧಿಗಳು ಸರ್ಕಾರವನ್ನು ಒತ್ತಾಯಿಸತೊಡಗಿದರು. ಅಂದಿನ ದಿನಗಳಲ್ಲಿ ರೂಢಿಯಲ್ಲಿದ್ದ ವಿಪರೀತ ಬಡ್ಡಿಯ ಸಾಲಪದ್ಧತಿ ಮತ್ತು ಸುಲಭವಾಗಿ ದೊರೆಯುತ್ತಿದ್ದ ಸಾಲವನ್ನು ಅನುತ್ಪಾದಕ ಉದ್ದೇಶಗಳಿಗೂ ಬಳಸುತ್ತಿದ್ದುದರಿಂದ ಸಾಲಗಾರರು ತಾವು ಪಡೆದ ಸಾಲವನ್ನು ವಾಪಸ್ಸು ಮಾಡುವಲ್ಲಿ ಅಸಮರ್ಥರಾಗುತ್ತಿದ್ದರು. ಮನೆ-ಮಾರು ಕಳೆದುಕೊಂಡ ಸಾಲಗಾರರು, ಗೇಣಿದಾರರಾಗಿಯೋ, ಜೀತದಾಳುಗಳಾಗಿಯೋ ದುಡಿಯುವಂತಾದರು. ಹೆಚ್ಚೆಚ್ಚು ಭೂಮಿಯ ಒಡೆತನವನ್ನು ಗಳಿಸಿದ ಲೇವಾದೇವಿಗಾರರು ಒಂದು ರೀತಿಯ ಅನಿಯಂತ್ರಿತ ಅಧಿಕಾರ ಹೊಂದುವಂತಾದರು. ಅನೇಕ ಸಲ ಸಾಲವಂದಿಗ ಕೃಷಿಕ ರೈತರು ತಮ್ಮ ಫಸಲನ್ನು ಅನಿವಾರ್ಯವಾಗಿ ಸಾಲಿಗನಿಗೆ ಮಾರುಕಟ್ಟೆಯ ದರಕ್ಕಿಂತ ಕಡಿಮೆ ಬೆಲೆಗೆ ಮಾರಬೇಕಿತ್ತು. ಸಾಲಗಾರರ ಶೋಚನೀಯ ಸ್ಥಿತಿಯನ್ನು ಗಮನಿಸಿದ ಸರ್ಕಾರ ಅಗತ್ಯ ಕಾಯ್ದೆಗಳ ಮೂಲಕ ಈ ಅನಿಷ್ಟ ಪದ್ಧತಿಯನ್ನು ನಿಯಂತ್ರಿಸಲು ಮೇಲಿಂದಮೇಲೆ ಪ್ರಯತ್ನಿಸತೊಡಗಿತು. ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸಲು ನೆರೆಹೊರೆಯ ಪ್ರಾಂತಗಳಲ್ಲಿ ಜಾರಿಯಲ್ಲಿದ್ದ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ ಅದರಂತೆ ಸರ್ಕಾರ ಲೇವಾದೇವಿಗಾರರ ನೋಂದಣಿ ಮತ್ತು ಪರವಾನಿಗಿ ಪದ್ಧತಿಯೇ ಲೇವಾದೇವಿ

ವ್ಯವಹಾರದ ನಿಯಂತ್ರಣಕ್ಕೆ ಸೂಕ್ತ ಕ್ರಮವೆಂದು ಭಾವಿಸಿ ೧೯೩೯ರಲ್ಲಿ ಮೈಸೂರು ಲೇವಾದೇವಿಗಾರರ ಕಾಯ್ದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯನ್ವಯ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಮತ್ತು ವ್ಯವಹಾರವನ್ನು ನಡೆಸಲು ಪರವಾನಿಗಿಯನ್ನು ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಯಿತು. ಅಗತ್ಯಾನುಸಾರ ೧೯೫೫ ಮತ್ತು ೧೯೫೬ರಲ್ಲಿ ಈ ಕಾನೂನಿಗೆ ತಿದ್ದುಪಡಿಗಳನ್ನು ಮಾಡಲಾಯಿತು.

ರಾಜ್ಯ ಪುನರ್ ವಿಂಗಡಣೆಯ ನಂತರ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗುವಂತೆ ಕರ್ನಾಟಕ ಲೇವಾದೇವಿ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬, ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆ ೧೯೬೧ ಹಾಗೂ ನಿಯಮಗಳು ೧೯೬೬, ಇವುಗಳನ್ನು ರಾಜ್ಯಾದ್ಯಂತ ೧೯೬೬ರಿಂದ ಜಾರಿಗೆ ತರಲಾಯಿತು. ಈ ಕಾನೂನಿನನ್ವಯ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಸಂಘಗಳ ನಿಬಂಧಕರನ್ನು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಜನರಲ್ ಎಂದೂ ನೇಮಿಸಲಾಯಿತು. ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಲೇವಾದೇವಿಗಾರರ ರಿಜಿಸ್ಟ್ರಾರ್ ಎಂದೂ ನೇಮಿಸಿ ಅವರಿಗೆ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನೂ ವಹಿಸಲಾಯಿತು. ಈ ಕಾನೂನು ಜಾರಿಗೆ ಬರುವ ಪೂರ್ವದಲ್ಲಿ ವಿವಿಧ ತಾಲೂಕುಗಳಲ್ಲಿನ ಸಹಕಾರ ಇಲಾಖೆಯ ಉಪ-ನೋಂದಣಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಪ್ರಸ್ತುತ ಮೇಲಿನ ಕಾನೂನಿನನ್ವಯ ಜಿಲ್ಲೆಯಲ್ಲಿ ಲೇವಾದೇವಿ ವ್ಯವಹಾರವನ್ನು ನಡೆಸಲು ಜಿಲ್ಲೆಯ ಲೇವಾದೇವಿಗಾರರ ರಿಜಿಸ್ಟ್ರಾರ್‌ರಿಂದ ಪರವಾನಿಗಿಯನ್ನು ಪಡೆಯಬೇಕಿದೆ. ಪರವಾನಿಗಿ ಇಲ್ಲದೇ ಲೇವಾದೇವಿ ವ್ಯವಹಾರವನ್ನು ಕೈಗೊಳ್ಳುವುದು ಕಾನೂನಿನನ್ವಯ ಅಪರಾಧವಾಗಿದೆ.

೧೯೬೩ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪರವಾನಿಗಿ ಪಡೆದ ೯೯ ಲೇವಾದೇವಿಗಾರರಿದ್ದರು. ಸಹಕಾರ ಸಂಘಗಳಿಂದ ರೈತರಿಗೆ ಸಾಲ ದೊರೆಯುವಲ್ಲಿ ಉಂಟಾದ ಸುಧಾರಣೆಯಿಂದಾಗಿ ೧೯೬೬ರಲ್ಲಿ ಇವರ ಸಂಖ್ಯೆ ೧೬ಕ್ಕೆ ಇಳಿಯಿತು (ಮಂಡ್ಯ ತಾಲೂಕಿನಲ್ಲಿ ಏಳು; ಶ್ರೀರಂಗಪಟ್ಟಣದಲ್ಲಿ ತಾಲೂಕಿನಲ್ಲಿ ಐದು; ಕೃಷ್ಣರಾಜಪೇಟೆ ತಾಲೂಕಿನಲ್ಲಿ ಮೂರು ಮತ್ತು ನಾಗಮಂಗಲ ತಾಲೂಕಿನಲ್ಲಿ ಒಂದು). ಸರ್ಕಾರ ೧೯೬೫ರಲ್ಲಿ ಅಧಿಸೂಚನೆಯನ್ನು ಹೊರಡಿಸಿ ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿ ದರವನ್ನು ಒತ್ತೆ ಸಾಲಕ್ಕೆ ಶೇ.೧೫ ಹಾಗೂ ಆಧಾರವಿಲ್ಲದ ಸಾಲಕ್ಕೆ ಶೇ.೧೮ ಎಂದು ನಿಗದಿಪಡಿಸಿತ್ತು.

ಸಹಕಾರ ಇಲಾಖೆಯ ಆಡಳಿತವನ್ನು ೧೯೬೬ರಲ್ಲಿ ಪುನರ್ ರಚಿಸಲಾಯಿತು. ಅದರಂತೆ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಸಹಕಾರ ಸಂಘಗಳ ಉಪನಿಬಂಧಕರೆಂದು ಹಾಗೂ ಉಪ-ವಿಭಾಗದ ಮುಖ್ಯಸ್ಥರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರೆಂದು ಪುನರ್‌ನಾಮಕರಣ ಮಾಡಲಾಯಿತು. ಅಂದಿನಿಂದ ಈ ಅಧಿಕಾರಿಗಳು ೧೯೬೧ರ ಕರ್ನಾಟಕ ಲೇವಾದೇವಿ ಕಾಯ್ದೆ ಹಾಗೂ ಕರ್ನಾಟಕ ಗಿರವಿದಾರರ ಕಾಯ್ದೆಯನ್ನಲ್ಲದೇ ೧೯೮೩ರಿಂದ ಚಿಟ್ ಫಂಡ್ ಕಾಯ್ದೆ ೧೯೮೨ ಮತ್ತು ಚಿಟ್ ಫಂಡ್ (ಕರ್ನಾಟಕ) ನಿಯಮಾವಳಿ ೧೯೮೩ನ್ನೂ ಸಹ ಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

೧೯೭೦-೭೧ ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪರವಾನಿಗಿ ಪಡೆದ ೭೦ ಲೇವಾದೇವಿಗಾರರಿದ್ದರು. (ನಗರ ಪ್ರದೇಶಗಳಲ್ಲಿ ೩೮ ಮತ್ತು ಹಳ್ಳಿಗಳಲ್ಲಿ ೩೨). ಇವರ ಸಂಖ್ಯೆ ೧೯೮೫-೮೬ರಲ್ಲಿ ೪೮, ೧೯೯೦-೯೧ ರಲ್ಲಿ ಹತ್ತು, ೧೯೯೫-೯೬ ರಲ್ಲಿ ಎಂಟು, ೧೯೯೮-೯೯ರಲ್ಲಿ ಏಳು ಮತ್ತು ೨೦೦೧-೦೨ರಲ್ಲಿ ಒಂಭತ್ತು ಆಗಿತ್ತು. ಪರವಾನಿಗಿ ಪಡೆದ ಗಿರವಿದಾರರ ಸಂಖ್ಯೆ ೧೯೮೫-೮೬ರಲ್ಲಿ ೧೨೫, ೧೯೯೦-೯೧ರಲ್ಲಿ ೧೯೮, ೧೯೯೫-೯೬ರಲ್ಲಿ ೩೪೫, ೧೯೯೮-೯೯ರಲ್ಲಿ ೩೩೭

ಮತ್ತು ೨೦೦೧-೦೨ರಲ್ಲಿ ೩೩೬ ಆಗಿತ್ತು. ಲೇವಾದೇವಿಗಾರರು ೧೯೯೪-೯೫ರಲ್ಲಿ ೩.೨೬ಲಕ್ಷ ರೂ., ೧೯೯೫-೯೬ರಲ್ಲಿ ೪.೦೪ ಲಕ್ಷ ರೂ., ೧೯೯೬-೯೭ರಲ್ಲಿ ೪.೫೬ ಲಕ್ಷ ರೂ., ೧೯೯೭-೯೮ ರಲ್ಲಿ ೪.೭೦ ಲಕ್ಷ ರೂ., ೧೯೯೮-೯೯ ರಲ್ಲಿ ೫.೧೦ ಲಕ್ಷ ರೂ. ಮತ್ತು ೨೦೦೧-೦೨ರಲ್ಲಿ ೬.೪೧ ಲಕ್ಷ ರೂ.ಗಳ ಸಾಲದ ವ್ಯವಹಾರವನ್ನು ನಿರ್ವಹಿಸಿದ್ದರು. ಈ ವರ್ಷಗಳಲ್ಲಿ ಗಿರವಿದಾರರು ನೀಡಿದ ಸಾಲದ ಮೊತ್ತವು ಕ್ರಮವಾಗಿ ೭೦.೫೦ ಲಕ್ಷ ರೂ., ೭೪.೧೦ ಲಕ್ಷ ರೂ., ೧೭೬ ಲಕ್ಷ ರೂ., ೧೯೮ ಲಕ್ಷ ರೂ., ೧೮೭.೯೪ ಲಕ್ಷ ರೂ. ಮತ್ತು ೩೮.೧೮ ಲಕ್ಷ ರೂ. ಆಗಿತ್ತು. ೧೯೯೪-೯೫ರಿಂದ ೧೯೯೮-೯೯ ರವರೆಗೆ ಸರ್ಕಾರ ಲೈಸೆನ್ಸ್ ಫೀ ರೂಪದಲ್ಲಿ ಸಂಗ್ರಹಿಸಿದ ಮೊತ್ತ ಕ್ರಮವಾಗಿ ೩೮ ಸಾವಿರ ರೂ., ೬೫ ಸಾವಿರ ರೂ., ೧.೦೩ ರೂ. ಲಕ್ಷ ರೂ., ೯.೫೫ ಲಕ್ಷ ರೂ ಮತ್ತು ೩೩.೮೦ ಲಕ್ಷ ರೂ.ಗಳಾಗಿತ್ತು. ೨೦೦೧-೦೨ರಲ್ಲಿನ ಈ ಮೊತ್ತವು ೪.೩೫ ಲಕ್ಷ ರೂ. ಆಗಿತ್ತು. ೧೯೯೪-೯೫ರಿಂದ ೧೯೯೮-೯೯ರವರೆಗೆ ಸರ್ಕಾರ ಪಡೆದ ಭದ್ರತಾ ಠೇವಣಿ ಮೊತ್ತವು ಕ್ರಮವಾಗಿ ೩೨.೩೯ ಲಕ್ಷ ರೂ., ೪೦.೯೧ ಲಕ್ಷ ರೂ., ೪೬.೦೭ ಲಕ್ಷ ರೂ., ೧೭.೯೦ ಲಕ್ಷ ರೂ. ಮತ್ತು ೧೮.೧೦ ಲಕ್ಷ ರೂ.ಗಳಾಗಿತ್ತು. ೨೦೦೧-೦೨ರಲ್ಲಿನ ಭದ್ರತಾ ಠೇವಣಿ ಮೊತ್ತ ೩.೯೦ ಲಕ್ಷ ರೂ. ಆಗಿತ್ತು.

ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿಯ ದರವನ್ನು ೧೯೯೨ರಲ್ಲಿ ಪರಿಷ್ಕರಿಸಿ ಆಧಾರಿತ ಸಾಲದ ಮೇಲೆ ಶೇ.೨೧ ಹಾಗೂ ಆಧಾರ ರಹಿತ ಸಾಲದ ಮೇಲೆ ಶೇ.೨೩ ಎಂದು ರಾಜ್ಯ ಸರ್ಕಾರ ನಿಗದಿಪಡಿಸಿದೆ. ಸರ್ಕಾರದ ಈಗಿನ ಆದೇಶದಂತೆ ಲೇವಾದೇವಿಗಾರರು ಮತ್ತು ಗಿರವಿದಾರರು ಐದು ವರ್ಷಕ್ಕೊಮ್ಮೆ ತಮ್ಮ ಪರವಾನಿಗಿಯನ್ನು ನವೀಕರಿಸಬೇಕಿದೆ.

ಖಾಸಗಿ ಲೇವಾದೇವಿಗಾರರು, ಶ್ರೀಮಂತ ಜಮೀನ್ದಾರರು, ಹಣವಂತರು ಮತ್ತು ವ್ಯಾಪಾರಿಗಳು ಯಾವುದೇ ಪರವಾನಿಗಿಯನ್ನು ಪಡೆಯದೇ ಒಂದು ಸೀಮಿತ ವಲಯದಲ್ಲಿ ಲೇವಾದೇವಿ ವ್ಯವಹಾರವನ್ನು ರಹಸ್ಯವಾಗಿ ಮಾಡುವುದು ಸಹ ಸರ್ವೇ ಸಾಮಾನ್ಯವಾಗಿರುತ್ತದೆ. ಇಂತಹವರು ವಿಧಿಸುವ ಬಡ್ಡಿದರವು ತಿಂಗಳಿಗೆ ಶೇಕಡ ಎರಡರಿಂದ ಐದರವರೆಗೆ ಇರುತ್ತದೆ. ಈ ವ್ಯವಹಾರಗಳಿಗೆ ಪರಸ್ಪರ ವಿಶ್ವಾಸ ಮತ್ತು ನಂಬಿಕೆಯೇ ಆಧಾರವಾಗಿರುತ್ತದೆ. ಇವರಲ್ಲಿ ಕೆಲವರು ಹಲವು ಬಗೆಯ ಚೀಟಿ ನಡೆಸುವ ವ್ಯವಹಾರವನ್ನೂ ಮಾಡುತ್ತಾರೆ. ಈ ವ್ಯವಹಾರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೋಸ, ವಂಚನೆ, ಪ್ರಕರಣಗಳು ವರದಿಯಾಗಿರುವುದೂ ಉಂಟು.

**ಹಣಕಾಸು ಸಂಸ್ಥೆಗಳು**

ಅಸಂಘಟಿತ ಹಣದ ಮಾರುಕಟ್ಟೆಯಲ್ಲಿ ಖಾಸಗಿ ಸಾಲಿಗರು ಹಾಗೂ ಗಿರವಿದಾರರಲ್ಲದೇ, ಹಲವಾರು ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳು, ಚಿಟ್‌ಫಂಡ್‌ಗಳು ಜಿಲ್ಲೆಯ ಪ್ರಮುಖ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ನಗರ ಪ್ರದೇಶ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಇಂತಹ ಸಂಸ್ಥೆಗಳು ವಾಣಿಜ್ಯ, ವ್ಯಾಪಾರ, ಉದ್ದಿಮೆ, ವಾಹನ ಖರೀದಿ ಮುಂತಾದವುಗಳಿಗೆ ಅಡಮಾನ ಸಾಲವನ್ನು ಒದಗಿಸುತ್ತವೆ. ಮಧ್ಯಮ ವರ್ಗದ ಜನರ ಉಳಿತಾಯವನ್ನು ಹಲವಾರು ಆಕರ್ಷಕ ಯೋಜನೆಗಳ ಮೂಲಕ, ಹೆಚ್ಚಿನ ಬಡ್ಡಿಯನ್ನು ನೀಡುವ ಮೂಲಕ ಹಾಗೂ ನಗದು ಬಹುಮಾನಗಳನ್ನು ಕೊಡುವ ಆಮಿಷಗಳ ಮೂಲಕ ಆಕರ್ಷಿಸಿ ಈ ಸಂಸ್ಥೆಗಳು ತಮ್ಮ ಠೇವಣಿ ಸಂಗ್ರಹವನ್ನು ಹೆಚ್ಚಿಸುತ್ತವೆ. ಇವುಗಳಿಂದ ಸಾಲದ ನೆರವನ್ನು ಪಡೆಯುವವರಲ್ಲಿ ಹೆಚ್ಚಿನವರು ಸಣ್ಣ ವ್ಯಾಪಾರಿಗಳು, ನೌಕರ ವರ್ಗದವರು ಹಾಗೂ ಮೋಟಾರು ಸಾರಿಗೆ ಉದ್ದಿಮೆಯಲ್ಲಿ ತೊಡಗಿರುವವರು. ಈ ಹಣಕಾಸಿನ ಸಂಸ್ಥೆಗಳು ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಬೆಳೆಸುವಲ್ಲಿ ಶಕ್ತವಾದರೂ, ಅವುಗಳ ಅನಿರ್ಬಂಧಿತ ಬೆಳವಣಿಗೆ ಹಲವೊಮ್ಮೆ ಅವುಗಳ ಪತನಕ್ಕೆ ಕಾರಣವಾಗುವುದು.

ಈ ಸಂಸ್ಥೆಗಳು ಸಾಮಾನ್ಯವಾಗಿ ಭಾರತೀಯ ಪಾಲುದಾರಿಕೆ ಕಾನೂನು ೧೯೩೨ ಅಥವಾ ಕಂಪನಿ ಕಾಯ್ದೆ ೧೯೫೬ರನ್ವಯ ನೋಂದಾಯಿತ ಸಂಸ್ಥೆಗಳಾಗಿರುತ್ತವೆ. ಕರ್ನಾಟಕ ಲೇವಾದೇವಿ ಕಾನೂನು ೧೯೬೧ರ ಅನ್ವಯ ಸಹಕಾರ ಇಲಾಖೆ ಈ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೦-೯೧ ರಲ್ಲಿ ೧೨೧, ೧೯೯೫-೯೬ರಲ್ಲಿ ೩೮೮, ೧೯೯೮-೯೯ರಲ್ಲಿ ೩೩೫ ಮತ್ತು ೨೦೦೧-೦೨ರಲ್ಲಿ ೩೩೪ ಹಣಕಾಸು ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ಈ ಹಣಕಾಸು ಸಂಸ್ಥೆಗಳು ೧೯೯೪-೯೫ರಿಂದ ೧೯೯೭-೯೮ರವರೆಗೆ ಸಂಗ್ರಹಿಸಿದ ಠೇವಣಿ ಮೊತ್ತವು ಕ್ರಮವಾಗಿ ೩೨.೮೬ ಲಕ್ಷ ರೂ., ೬೯.೩೦ ಲಕ್ಷ ರೂ, ೬೪.೩೬ ಲಕ್ಷ ರೂ ಮತ್ತು ೬೫.೨೬ ಲಕ್ಷ ರೂ. ಆಗಿತ್ತು. ೨೦೦೧-೦೨ರಲ್ಲಿ ಈ ಮೊತ್ತ ೫೨ ಲಕ್ಷ ರೂ. ಆಗಿದ್ದಿತು. ಈ ಸಂಸ್ಥೆಗಳು ನೀಡಿದ ಸಾಲ ೧೯೯೪-೯೫ ರಿಂದ ೧೯೯೮-೯೯ ರವರೆಗೆ ಕ್ರಮವಾಗಿ ೬೬.೧೦ ಲಕ್ಷ ರೂ., ೮೬.೦೮ ಲಕ್ಷ ರೂ., ೧೪೩.೩೨ ಲಕ್ಷ ರೂ., ೧೨೪.೩೦ ಲಕ್ಷ ರೂ.ಹಾಗೂ ೧೫೪.೩೨ ಲಕ್ಷ ರೂ.ಆಗಿತ್ತು. ೨೦೦೧-೦೨ ರಲ್ಲಿನ ಮೊತ್ತ ೪೨.೯೧ ಲಕ್ಷ ರೂ. ಆಗಿದ್ದಿತು. ಈ ಸಂಸ್ಥೆಗಳು ನೀಡುವ ಬಹುಪಾಲು ಸಾಲ ಆಧಾರ ಸಹಿತವಾಗಿದ್ದು, ಕೃಷಿಯೇತರ ಉದ್ದೇಶಗಳಿಗೆ ಪೂರೈಸಲಾಗುತ್ತದೆ. ಚಿಟ್ ಫಂಡ್ ಕಾಯ್ದೆ ೧೯೮೨ರನ್ವಯ ಚಿಟ್‌ಫಂಡ್ ವ್ಯವಹಾರ ನಡೆಸಲು ಪರವಾನಿಗಿ ಪತ್ರ ಪಡೆದ ಹಣಕಾಸು ಸಂಸ್ಥೆಗಳ ಸಂಖ್ಯೆ ೧೯೯೪-೯೫ ರಿಂದ ೧೯೯೮-೯೯ರವರೆಗೆ ಕ್ರಮವಾಗಿ ಐದು, ಐದು, ಏಳು, ಐದು, ಮತ್ತು ಮೂರು ಆಗಿದ್ದು, ೧೯೯೬-೯೭ ರಿಂದ ೧೯೯೮-೯೯ ರವರೆಗಿನ ಅವುಗಳ ಚಿಟ್‌ಫಂಡ್ ವ್ಯವಹಾರದ ಮೊತ್ತವು ಕ್ರಮವಾಗಿ ೧.೬೦ ಲಕ್ಷ ರೂ., ೫೫ ಸಾವಿರ ರೂ ಮತ್ತು ೧.೨೫ ಲಕ್ಷ ರೂ. ಆಗಿತ್ತು. ೨೦೦೧-೦೨ರಲ್ಲಿ ಜಿಲ್ಲೆಯಲ್ಲಿ ಪರವಾನಿಗಿ ಪಡೆದ ಏಳು ಚಿಟ್‌ಫಂಡ್ ಸಂಸ್ಥೆಗಳು ಇದ್ದು, ಅವುಗಳ ಚಿಟ್‌ಫಂಡ್ ವ್ಯವಹಾರದ ಮೊತ್ತ ೨೩.೯೫ ಲಕ್ಷ ರೂ. ಆಗಿದ್ದಿತು.

## ವಾಣಿಜ್ಯ ಬ್ಯಾಂಕುಗಳು

ಆಧುನಿಕ ಜೀವನ ವ್ಯವಸ್ಥೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನೂ ಸಹ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಜೀವನದಲ್ಲಿ ಬ್ಯಾಂಕುಗಳ ಪಾತ್ರ ಬಹಳ ಮಹತ್ವದ್ದು. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಉತ್ತಮಗೊಂಡಂತೆಲ್ಲ ಬ್ಯಾಂಕುಗಳ ಅವಶ್ಯಕತೆಯೂ ಹೆಚ್ಚುತ್ತದೆ. ಬ್ಯಾಂಕುಗಳು ಜನ ಸಮುದಾಯದ ಉಳಿತಾಯವನ್ನು ಸಂಗ್ರಹಿಸಿ ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ವ್ಯವಸಾಯ ಕ್ಷೇತ್ರಗಳಿಗೂ ಹಾಗೂ ಸರ್ಕಾರದ ನಾನಾ ಉತ್ಪಾದನಾ ಯೋಜನೆಗಳ ಉದ್ದೇಶಗಳಿಗೂ ಹಣವನ್ನೂ ಒದಗಿಸುತ್ತವೆ.

### ಮಂಡ್ಯ ಜಿಲ್ಲೆಯಲ್ಲಿ ಬ್ಯಾಂಕಿಂಗ್‌ನ ಬೆಳವಣಿಗೆ

ಮಂಡ್ಯ ಜಿಲ್ಲೆಯ ಪ್ರಪ್ರಥಮ ಕೂಡು ಬಂಡವಾಳ ಬ್ಯಾಂಕಿಂಗ್ ಕಂಪನಿಯಾದ ಶ್ರೀರಂಗಪಟ್ಟಣ ಟೌನ್ ಬ್ಯಾಂಕ್ ಲಿಮಿಟೆಡ್ ೧೮೯೧ರ ಮೇ ೨೯ ರಂದು ಶ್ರೀರಂಗಪಟ್ಟಣದಲ್ಲಿ ನೋಂದಣಿಯಾಯಿತು. ೧೯೪೭-೪೮ರ ಸಾಲಿನಲ್ಲಿದ್ದಂತೆ ಈ ಬ್ಯಾಂಕಿನ ಪಾವತಿಯಾದ ಬಂಡವಾಳ ೩೧ ಸಾವಿರ ರೂ.ಗಳಾಗಿತ್ತು. ಈ ಬ್ಯಾಂಕು ಮುಂದೆ ಹೆಚ್ಚು ವರ್ಷ ಬಾಳಲಿಲ್ಲವೆಂದು ತೋರುತ್ತದೆ. ಮಂಡ್ಯದ ಲಕ್ಷ್ಮೀ ವಿಲಾಸ ಬ್ಯಾಂಕ್ ಲಿಮಿಟೆಡ್ ೧೮೯೪ರ ಅಕ್ಟೋಬರ್ ೧೦ ರಂದು ನೋಂದಣಿ ಮಾಡಲ್ಪಟ್ಟಿತು. ಈ ಬ್ಯಾಂಕಿನ ಪಾವತಿ ಬಂಡವಾಳ ೧೯೧೩ರಲ್ಲಿದ್ದಂತೆ ೧೭,೩೦೦ ರೂ.ಗಳಾಗಿತ್ತು. ಸ್ವದೇಶಿ ಚಳವಳಿಯ ಪ್ರಭಾವದಿಂದಾಗಿ ೧೯೦೫ರ ನಂತರ ಅನೇಕ ಸ್ಥಳೀಯರು ಪ್ರವರ್ತಿಸಿದ ಬ್ಯಾಂಕಿಂಗ್ ಕಂಪನಿಗಳು ಮೂಡಿಬಂದವು. ಮಳವಳ್ಳಿಯ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಬ್ಯಾಂಕ್ ಲಿಮಿಟೆಡ್ ೧೯೦೭ರ ಸೆಪ್ಟೆಂಬರ್ ೪ ರಂದು ನೋಂದಣಿಯಾಯಿತು. ಈ ಬ್ಯಾಂಕಿನ ಪಾವತಿಯಾದ ಬಂಡವಾಳ ೧೯೨೪ರ ಮಾರ್ಚ್ ಅಂತ್ಯದಲ್ಲಿದ್ದಂತೆ

೨೭,೭೦೦ ರೂ.ಗಳಾಗಿತ್ತು. ಈ ಬ್ಯಾಂಕೂ ಮುಂದೆ ಹೆಚ್ಚುಕಾಲ ಉಳಿಯಲಿಲ್ಲ. ಮಂಡ್ಯದ ಮಂಡ್ಯ ಬ್ಯಾಂಕ್ ಲಿಮಿಟೆಡ್ ೧೯೩೫ರ ಸೆಪ್ಟೆಂಬರ್ ೨೩ರಲ್ಲಿ ನೋಂದಣಿ ಮಾಡಲ್ಪಟ್ಟಿತು. ೧೯೪೮ರ ಮಾರ್ಚ್ ಅಂತ್ಯಕ್ಕೆ ಈ ಬ್ಯಾಂಕು ೪೫,೧೪೦ ರೂ. ಪಾವತಿ ಬಂಡವಾಳ ಹೊಂದಿತ್ತು. ಈ ಬ್ಯಾಂಕು ಸಹ ಮುಂದೆ ಹೆಚ್ಚು ವರ್ಷ ಬಾಳಲಿಲ್ಲ. ಮಂಡ್ಯದಲ್ಲಿ ೧೯೩೩ರಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ ಮತ್ತು ೧೯೩೯ರಲ್ಲಿ ಪ್ರತ್ಯೇಕ ಮಂಡ್ಯ ಜಿಲ್ಲೆಯ ರಚನೆಯಂತಹ ಘಟನೆಗಳಿಂದಾಗಿ ಜಿಲ್ಲೆಗೆ ಸುಸಂಘಟಿತ ಬ್ಯಾಂಕಿಂಗ್ ಸೌಲಭ್ಯದ ಅವಶ್ಯಕತೆ ಉಂಟಾಯಿತು. ಬೆಂಗಳೂರಿನಲ್ಲಿ ೧೯೧೩ರಲ್ಲಿ ಸರ್ಕಾರದ ಪ್ರೋತ್ಸಾಹದಿಂದ ಸ್ಥಾಪನೆಯಾದ ಪ್ರಮುಖ ಬ್ಯಾಂಕಾದ ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್ (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಮಂಡ್ಯ ನಗರದಲ್ಲಿ ೧೯೪೦ರಲ್ಲಿ ಒಂದು ಶಾಖೆಯನ್ನು ತೆರೆಯಿತು. ಮಂಡ್ಯ ಸಕ್ಕರೆ ಕಾರ್ಖಾನೆಯ ಅಭಿವೃದ್ಧಿಯಲ್ಲಿ ಈ ಬ್ಯಾಂಕು ಗಣನೀಯ ಪಾತ್ರ ವಹಿಸಿತು. ಈ ಬ್ಯಾಂಕಿನ ಸ್ಥಾಪನೆಯಿಂದಾಗಿ ಮಂಡ್ಯ ಮತ್ತು ಸುತ್ತಮುತ್ತಲಿನ ಉದ್ದಿಮೆದಾರರಿಗೂ ಮತ್ತು ವ್ಯಾಪಾರಿಗಳಿಗೂ ಬಹಳ ಅನುಕೂಲವಾಯಿತು. ಈ ಬ್ಯಾಂಕಿನ ಹೊರತಾಗಿ ಜಿಲ್ಲೆಯಲ್ಲಿ ಬೇರೆ ಯಾವುದೇ ಬ್ಯಾಂಕು ೧೯೫೫ರವರೆಗೆ ಅಸ್ತಿತ್ವದಲ್ಲಿರಲ್ಲಿಲ್ಲ. ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬೆಳಗೊಳದ ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಲುಗಳಿಗೂ ಈ ಬ್ಯಾಂಕು ಹಣಕಾಸಿನ ಸಾಲವನ್ನು ಒದಗಿಸಿತ್ತು. ಹಲವಾರು ಆಕರ್ಷಕ ಉಳಿತಾಯ ಯೋಜನೆಗಳನ್ನು ರೂಪಿಸಿ, ಜನಸಮುದಾಯದ ಉಳಿತಾಯವನ್ನು ಸಂಗ್ರಹಿಸುವ ಉದ್ದೇಶದಿಂದ ಮಂಗಳೂರು ಮೂಲದ ಇಂದಿನ ಕೆನರಾ ಬ್ಯಾಂಕ್ (೧೯೦೬), ನವೆಂಬರ್ ೧೯೫೫ರಲ್ಲಿ ಮಂಡ್ಯದಲ್ಲಿ ತನ್ನ ಶಾಖಾ ಕಚೇರಿಯನ್ನು ತೆರೆಯಿತು. ಈ ಬ್ಯಾಂಕು ಜಿಲ್ಲೆಯ ವಾಣಿಜ್ಯ ಮತ್ತು ಕೈಗಾರಿಕಾ ಬೆಳವಣಿಗೆಗಳಿಗೂ ನೆರವನ್ನು ನೀಡಿತು. ಮದರಾಸು (ಚೆನ್ನೈ) ಮೂಲದ ಇಂಡಿಯನ್ ಬ್ಯಾಂಕ್ (೧೯೦೭) ೧೯೫೮ರ ಜುಲೈನಲ್ಲಿ ಮಂಡ್ಯದಲ್ಲಿ ತನ್ನ ಶಾಖೆಯನ್ನು ತೆರೆದು ಜನತೆಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸುವಲ್ಲಿ ಮುಂದಾಯಿತು. ಮಂಗಳೂರಿನ ಕರ್ನಾಟಕ ಬ್ಯಾಂಕ್ ಲಿಮಿಟೆಡ್ (೧೯೨೪) ಶ್ರೀರಂಗಪಟ್ಟಣದಲ್ಲಿ ೧೯೬೩ರ ಸೆಪ್ಟೆಂಬರ್‌ನಲ್ಲಿ ಶಾಖೆಯನ್ನು ತೆರೆದು ಅಲ್ಲಿನ ಜನತೆಗೆ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಯನ್ನು ಒದಗಿಸಿತು. ಮಂಗಳೂರು ಮೂಲದ್ದೇ ಆದ ವಿಜಯಬ್ಯಾಂಕ್ (೧೯೩೧) ಜಿಲ್ಲೆಯ ತನ್ನ ಪ್ರಥಮ ಶಾಖೆಯನ್ನು ೧೯೬೩ರ ಜುಲೈನಲ್ಲಿ ಕೃಷ್ಣರಾಜಪೇಟೆಯಲ್ಲಿ ತೆರೆಯಿತು. ಮುಂದೆ ಈ ಬ್ಯಾಂಕಿನ ಶಾಖೆಗಳು ಮದ್ದೂರು, ಮಳವಳ್ಳಿ ಮತ್ತು ಪಾಂಡವಪುರಗಳಲ್ಲಿ ಕ್ರಮವಾಗಿ ಆಗಸ್ಟ್ ೧೯೬೪, ಡಿಸೆಂಬರ್ ೧೯೬೪ ಮತ್ತು ನವೆಂಬರ್ ೧೯೬೫ರಲ್ಲಿ ಸ್ಥಾಪಿಸಲ್ಪಟ್ಟವು. ಈ ಬ್ಯಾಂಕು ೧೯೬೫ರ ಡಿಸೆಂಬರ್ ಅಂತ್ಯಕ್ಕೆ ಜಿಲ್ಲೆಯ ನಾಲ್ಕು ಶಾಖೆಗಳಿಂದ ಒಟ್ಟು ೧೬ಲಕ್ಷ ರೂ. ಠೇವಣಿ ಸಂಗ್ರಹಿಸಿ,ವ್ಯಾಪಾರ ಮತ್ತು ವ್ಯವಸಾಯಗಾರರಿಗೆ ಆರು ಲಕ್ಷ ರೂ.ಗಳ ಸಾಲವನ್ನು ಒದಗಿಸಿತ್ತು. ಗ್ರಾಮಾಂತರ ಜನರ ಉಳಿತಾಯವನ್ನು ಉತ್ತೇಜಿಸಲು ಉಡುಪಿ ಮೂಲದ ಪಾಂಗಾಳ ನಾಯಕ ಬ್ಯಾಂಕ್ (೧೯೨೦) ೧೯೬೫ರ ವೇಳೆಗೆ ನಾಗಮಂಗಲದಲ್ಲಿ ಶಾಖೆಯೊಂದನ್ನು ತೆರೆದು, ಅಲ್ಲಿನ ವ್ಯಾಪಾರಿ ಮತ್ತು ಸಣ್ಣ ಉದ್ದಿಮೆದಾರರಿಗೆ ಎಲ್ಲ ತರಹದ ನೆರವನ್ನು ಒದಗಿಸಿತು. ಈ ಪಾಂಗಾಳನಾಯಕ ಬ್ಯಾಂಕ್ ೧೯೬೮ರಲ್ಲಿ ಕೆನರಾ ಬ್ಯಾಂಕಿನೊಂದಿಗೆ ವಿಲೀನವಾಯಿತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ೧೯೬೬ರ ವೇಳೆಗೆ ಮದ್ದೂರಿನಲ್ಲೂ ಒಂದು ಶಾಖೆಯನ್ನು ಹೊಂದಿತ್ತು.

ಪ್ರಥಮ ಬ್ಯಾಂಕ್ ರಾಷ್ಟ್ರೀಕರಣದ ಮೊದಲು ಮತ್ತು ನಂತರದ ಕೆಲವು ವರ್ಷಗಳಲ್ಲಿನ ಮಂಡ್ಯ ಜಿಲ್ಲೆಯ ಬ್ಯಾಂಕು ಉದ್ಯಮದ ಪ್ರಗತಿಯು ಈ ಮುಂದಿನಂತಿತ್ತು.

**ಕೋಷ್ಟಕ ೬.೧ ಮಂಡ್ಯ ಜಿಲ್ಲೆಯ ಬ್ಯಾಂಕ್ ಉದ್ಯಮದ ಪ್ರಗತಿ (೧೯೬೭–೧೯೮೦)**

| ವಿವರ | ವರ್ಷ | | | |
|---|---|---|---|---|
| | ೩೧–೧೨–೧೯೬೭ | ೩೧–೧೨–೧೯೬೮ | ೩೧–೧೨–೧೯೬೯ | ೩೧–೧೨–೧೯೮೦ |
| ವಾಣಿಜ್ಯ ಬ್ಯಾಂಕಿನ ಒಟ್ಟು ಶಾಖೆಗಳು (ಸಂಖ್ಯೆ) | – | ೧೫ | ೧೬ | ೨೪ |
| ಠೇವಣಿಗಳು (ಕೋಟಿ ರೂ.) | | | | |
| ೧. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೦.೫೦ | ೦.೬೧ | ೦.೭೬ | ೦.೮೫ |
| ೨. ಉಳಿದ ವಾಣಿಜ್ಯ ಬ್ಯಾಂಕುಗಳು | ೦.೯೪ | ೧.೨೨ | ೧.೩೪ | ೧.೬೧ |
| ಒಟ್ಟು | ೧.೪೪ | ೧.೮೩ | ೨.೧೦ | ೨.೪೬ |
| ಮುಂಗಡಗಳು (ಲಕ್ಷ ರೂ.) | | | | |
| ೧. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | – | ೨೧೯.೨೩* | ೩೧೦.೬೪* | ೩೮೨.೩೭* |
| ೨. ಉಳಿದ ವಾಣಿಜ್ಯ ಬ್ಯಾಂಕುಗಳು | – | ೪೭.೭೭ | ೭೨.೨೭ | ೮೨.೮೫ |
| ಒಟ್ಟು | – | ೨೬೭.೦೦ | ೩೮೨.೯೧ | ೪೬೫.೨೨ |

(* ಮಂಡ್ಯದ ಬೃಹತ್ ಕೈಗಾರಿಕೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಬೆಂಗಳೂರು ಶಾಖೆಯ ಮುಂಗಡದ ಮೊತ್ತವೂ ಸೇರಿದಂತೆ)

೧೯೮೦ರ ಅಂತ್ಯಕ್ಕೆ ಏಳು ವಾಣಿಜ್ಯ ಬ್ಯಾಂಕುಗಳ ೨೪ ಶಾಖೆಗಳು ಜಿಲ್ಲೆಯ ಏಳು ನಗರ ಮತ್ತು ಎಂಟು ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದವು. ೧೯೮೦ರಲ್ಲಿ ಜಿಲ್ಲೆಯಲ್ಲಿ ಸರಾಸರಿ ೪೯,೦೦೦ ಜನಸಂಖ್ಯೆಗೆ ಒಂದು ಶಾಖೆಯಿತ್ತು. ಒಂದು ಶಾಖೆಗೆ ರಾಜ್ಯದ ಆಗಿನ ಸರಾಸರಿ ಜನಸಂಖ್ಯೆ ೩೦ ಸಾವಿರವಾಗಿದ್ದರೆ, ರಾಷ್ಟ್ರದ ಪ್ರಮಾಣ ಒಂದು ಶಾಖೆಗೆ ೫೨ ಸಾವಿರ ಜನಸಂಖ್ಯೆ ಆಗಿತ್ತು. ಆ ಪ್ರಕಾರ ರಾಷ್ಟ್ರದ ೩೨೪ ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯು ೯೯ ನೇ ಸ್ಥಾನದಲ್ಲಿತ್ತು. ೧೯೮೧ರಲ್ಲಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ತನ್ನ ಶಾಖೆಯನ್ನು ಸ್ಥಾಪಿಸಲಾಗಿ, ೧೯೮೧ರ ಅಂತ್ಯಕ್ಕೆ ಮಂಡ್ಯ ಜಿಲ್ಲೆಯಲ್ಲಿನ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ ೨೫ಕ್ಕೆ ಹೆಚ್ಚಿತು. ಬ್ಯಾಂಕ್–ವಾರು ಶಾಖೆಗಳ ಸಂಖ್ಯೆ ಈ ಮುಂದಿನಂತಿತ್ತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು–ಹತ್ತು, ಕೆನರಾ ಬ್ಯಾಂಕ್–ಐದು, ವಿಜಯ ಬ್ಯಾಂಕ್– ಐದು, ಸಿಂಡಿಕೇಟ್ ಬ್ಯಾಂಕ್– ಒಂದು, ಕರ್ನಾಟಕ ಬ್ಯಾಂಕ್ – ಒಂದು, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ– ಒಂದು, ಇಂಡಿಯನ್ ಬ್ಯಾಂಕ್ – ಒಂದು ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್– ಒಂದು.

೧೯೬೯ರ ಜುಲೈ ೧೯ರಂದು ಪ್ರಥಮ ಬಾರಿಗೆ ದೇಶದ ೧೪ ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವುದರೊಂದಿಗೆ ದೇಶದ ಬ್ಯಾಂಕಿಂಗ್ ಇತಿಹಾಸದಲ್ಲಿ ಹೊಸ ಅಧ್ಯಾಯವೇ ಪ್ರಾರಂಭವಾಯಿತು. ಖಾಸಗಿ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಸರ್ಕಾರಿ ವಲಯದಲ್ಲಿ ತರುವಲ್ಲಿ ಇದು ಪ್ರಥಮ ದಿಟ್ಟ ಕ್ರಮವಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗುವಂತೆ ಮತ್ತು ಅದುವರೆಗೆ ಅಲಕ್ಷಕ್ಕೆ ಒಳಗಾಗಿದ್ದ ಸಮಾಜದ ದುರ್ಬಲ ವರ್ಗಗಳಿಗೆ ಆರ್ಥಿಕ, ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ಸಹಕಾರಿಯಾಗುವಂತೆ ಈ ಹಣಕಾಸು ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಸರ್ಕಾರ ಸಮರ್ಥವಾಯಿತು. ಅದುವರೆಗೆ ಬ್ಯಾಂಕಿಂಗ್ ಸೇವೆಗಳಿಂದ ವಂಚಿತರಾಗಿದ್ದ ಜನಸಮುದಾಯದ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಸುಲಭ ಸಾಲ ಸೌಲಭ್ಯಗಳನ್ನು ನೀಡಲಾಯಿತು. ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಅಸಂಘಟಿತ ವಲಯವೂ ಸೇರುವಂತಾಯಿತು. ಅದುವರೆಗೆ ಕೆಲವು ನಿರ್ದಿಷ್ಟ ವರ್ಗಕ್ಕೆ (ಕ್ಲಾಸ್) ಮಾತ್ರ ಸೀಮಿತವಾಗಿದ್ದ ಬ್ಯಾಂಕಿಂಗ್ ಸೇವೆಗಳು ವ್ಯಾಪಕ (ಮಾಸ್)

ವರ್ಗಕ್ಕೆ ಲಭ್ಯವಾಗುವಂತೆ ಸರ್ಕಾರವು ತನ್ನ ಧೋರಣೆ, ನೀತಿ ನಿರೂಪಣೆಗಳನ್ನು ರೂಪಿಸಿಕೊಂಡಿತು. ಗ್ರಾಮೀಣ ಪ್ರದೇಶಗಳಲ್ಲಿ ಕೆಳಹಂತಗಳಲ್ಲಿ ಆರ್ಥಿಕ, ಸಾಮಾಜಿಕ ಬದಲಾವಣೆಗಳನ್ನು ತರಲು ಸಹಾಯಕವಾಗುವಂತೆ ಸುಲಭ ಸಾಲದ ಹಲವಾರು ಯೋಜನೆಗಳನ್ನು ಸರ್ಕಾರವು ಜಾರಿಯಲ್ಲಿ ತಂದಿರುವುದಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳು ಆ ಗುರಿಯನ್ನು ಸಾಧಿಸಲು ಸಾಲ ಸೌಲಭ್ಯಗಳನ್ನು ಒದಗಿಸುವುದನ್ನು ಕಡ್ಡಾಯ ಮಾಡಲಾಯಿತು. ಕೆಲವು ಸಂದರ್ಭಗಳಲ್ಲಿ ಇಂತಹ ಅತೀ ಉದಾರ ಸಾಲ ನೀತಿಯ ದುರುಪಯೋಗವೂ ಆದ ಉದಾಹರಣೆಗಳು ಉಂಟು.

ರಾಷ್ಟ್ರೀಕರಣ ನಂತರದ ದಶಕಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಳವಡಿಸಲಾದ ತೀವ್ರತರ ಬದಲಾವಣೆಗಳು, ಹೊಸ ಆಯಾಮಗಳು, ಬದ್ಧತೆಗಳು, ಸಾಲ ಮುಂಗಡಗಳಲ್ಲಿನ ಸಾಮಾಜಿಕ ಕಳಕಳಿ ಅಂದರೆ ಮಾರ್ಗದರ್ಶಿ ಬ್ಯಾಂಕ್ ಯೋಜನೆ (೧೯೬೯), ಆದ್ಯತಾ ವಲಯದ ಸಾಲ, ವ್ಯತ್ಯಸ್ಥ ಬಡ್ಡಿ ಸಾಲ, ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ (೧೯೭೬), ಸಾಮಾಜಿಕ ಬ್ಯಾಂಕಿಂಗ್, ಅಂತ್ಯೋದಯ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಮುಂತಾದವು ಮತ್ತು ೧೯೮೦ರಲ್ಲಿ ಜಾರಿಗೆ ತರಲಾದ ಎರಡನೇಯ ರಾಷ್ಟ್ರೀಕರಣ, ಈ ಕ್ರಮಗಳು ಬ್ಯಾಂಕಿಂಗ್ ಸೇವೆಯು ಮತ್ತಷ್ಟು ವಿಸ್ತೃತಗೊಳ್ಳಲು ಸಹಾಯಕವಾದವು.

ರಾಷ್ಟ್ರೀಕರಣ ನಂತರದ ದಶಕದಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖಾ ವಿಸ್ತರಣೆ ತೀವ್ರಗತಿಯಲ್ಲಿ ಹೆಚ್ಚಿತು. ಠೇವಣಿಯ ಹೆಚ್ಚಳವೂ ಗಮನಾರ್ಹವಾಗಿತ್ತು. ಅದೇ ರೀತಿ ಮುಂಗಡವೂ ಹೆಚ್ಚಿತು. ಜಿಲ್ಲೆಯ ಈ ವಿವರಗಳನ್ನು ಮುಂದಿನ ಕೋಷ್ಟಕದಿಂದ ತಿಳಿಯಬಹುದಾಗಿದೆ.

**ಕೋಷ್ಟಕ ೬.೨ ವಾಣಿಜ್ಯ ಬ್ಯಾಂಕುಗಳ ೧೯೭೦ರ ದಶಕದ ಪ್ರಗತಿ**

| ವಿವರ | ವರ್ಷ | | | | | | |
|---|---|---|---|---|---|---|---|
| | ೩೦-೬-೧೯೭೨ | ೩೦-೬-೧೯೭೩ | ೧೯೭೬ | ೩೦-೬-೧೯೭೭ | ೩೦-೬-೧೯೭೮ | ೩೦-೬-೧೯೭೯ | ೧೯೮೦ |
| ಬ್ಯಾಂಕು ಶಾಖೆಗಳು (ಸಂಖ್ಯೆ) | ೩೦ | ೩೫ | ೫೩ | ೫೩ | ೭೧ | ೭೧ | ೭೨ |
| ಠೇವಣಿಗಳು (ಕೋಟಿ ರೂ.) | ೪ | ೫ | ೮ | ೧೦ | ೧೨ | ೧೫ | ೨೭ |
| ಮುಂಗಡಗಳು (ಕೋಟಿ ರೂ.) | ೨ | ೨ | ೭ | ೯ | ೧೦ | ೧೨ | ೧೫ |

ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಹೆಚ್ಚುತ್ತಿರುವ ಬ್ಯಾಂಕಿಂಗ್ ಸೇವೆಯ ಬೇಡಿಕೆಗಳನ್ನು ಪೂರೈಸಲು ರಾಷ್ಟ್ರೀಕೃತ ಮತ್ತು ಖಾಸಗೀ ಬ್ಯಾಂಕುಗಳು ಹೊಸದಾಗಿ ಶಾಖೆಗಳನ್ನು ಪ್ರಾರಂಭಿಸುವ ಮೂಲಕ ಹಾಗೂ ಇದ್ದ ಶಾಖೆಗಳ ವ್ಯವಹಾರವನ್ನು ವಿಸ್ತರಿಸುವ ಮೂಲಕ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ವಿಶೇಷವಾಗಿ ಅಭಿವೃದ್ಧಿಪಡಿಸಿವೆ. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಜಿಲ್ಲೆಗೆ ಪಾದಾರ್ಪಣ ಮಾಡಿದ ಬ್ಯಾಂಕುಗಳಲ್ಲಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಾದ ಭಾರತೀಯ ಸ್ಟೇಟ್ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್, ಅಲಹಾಬಾದ್ ಬ್ಯಾಂಕ್. ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ ನ್ಯಾಷನಲ್ ಬ್ಯಾಂಕ್ ಹಾಗೂ ಖಾಸಗೀ ಕ್ಷೇತ್ರದ ಬ್ಯಾಂಕುಗಳಾದ ವೈಶ್ಯ ಬ್ಯಾಂಕ್, ಸೌತ್ ಇಂಡಿಯನ್ ಬ್ಯಾಂಕ್, ನೆಡುಂಗಾಡಿ ಬ್ಯಾಂಕ್ ಮತ್ತು ಲಕ್ಷ್ಮೀ ವಿಲಾಸ್ ಬ್ಯಾಂಕ್ ಸೇರಿವೆ. ಜಿಲ್ಲೆಯಲ್ಲಿ ೧೯೮೫ರಲ್ಲಿ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕನ್ನು ಪ್ರಾರಂಭಿಸಿದ ನಂತರ ಮುಂದಿನ ಒಂದು ದಶಕದ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಬ್ಯಾಂಕಿಂಗ್ ಸೇವೆಗಳು ಹೆಚ್ಚಳಗೊಂಡವು. ಇದರಿಂದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸಹಾಯಕವಾಯಿತಲ್ಲದೇ ಗ್ರಾಮೀಣ ಜನರಲ್ಲಿ ಉಳಿತಾಯ ಮನೋಭಾವವನ್ನು ಪ್ರೇರೇಪಿಸಲೂ ಸಹಾಯಕವಾಯಿತು. ಗ್ರಾಮೀಣ ಬ್ಯಾಂಕು ಗ್ರಾಮ

ಮತ್ತು ಅರೆನಗರ ಪ್ರದೇಶಗಳಲ್ಲಿ ತನ್ನ ವ್ಯವಹಾರವನ್ನು ವಿಸ್ತರಿಸುವ ಮೂಲಕ ವ್ಯವಸಾಯ ಮತ್ತು ವ್ಯವಸಾಯ ಆಧಾರಿತ ಕೈಗಾರಿಕೆ, ಆದ್ಯತಾ ವಲಯದ ಸಾಲ, ಸ್ವಯಂ ಉದ್ಯೋಗ, ಗ್ರಾಮೀಣ ಸಾರಿಗೆ, ಮುಂತಾದವುಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ವ್ಯವಸಾಯದೊಂದಿಗೆ ಪೂರಕವಾಗಿ ಇತರೇ ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳಲು ಸಹಾಯಕವಾಯಿತು. ೧೯೮೦ ರಿಂದ ೧೯೮೫ರ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಬ್ಯಾಂಕು ಶಾಖೆಗಳ ಸಂಖ್ಯೆ ೭೨ರಿಂದ ೯೩ಕ್ಕೂ, ಠೇವಣಿ ರೂ.೨೭ ಕೋಟಿಗಳಿಂದ ೪೭ ಕೋಟಿಗೂ ಮತ್ತು ಮುಂಗಡಗಳು ೧೫ ಕೋಟಿ ರೂ.ಗಳಿಂದ ೪೦ ಕೋಟಿ ರೂ.ಗಳಿಗೂ ಹೆಚ್ಚಳಗೊಂಡವು. ಬ್ಯಾಂಕು ಶಾಖೆಗಳ ಸಂಖ್ಯೆ ೧೯೮೭ರಲ್ಲಿ ೧೦೯ ಇದ್ದದ್ದು ೧೯೮೯ರಲ್ಲಿ ೧೨೦ಕ್ಕೆ ಏರಿತು. ಆ ವರ್ಷಗಳಲ್ಲಿ ಠೇವಣಿ ಮೊತ್ತವು ರೂ.೬೯ ಕೋಟಿಯಿಂದ ೯೬ ಕೋಟಿಗೂ ಮತ್ತು ಮುಂಗಡಗಳ ಮೊತ್ತ ರೂ. ೮೨ ಕೋಟಿಯಿಂದ ೮೪ ಕೋಟಿಗೂ ಏರಿತು.

೧೯೯೦ರ ದಶಕದಲ್ಲಿ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದಲ್ಲಿ ಹೊಸ ತಿರುವು ಕಂಡುಬಂದಿತು. ಸಂಖ್ಯಾತ್ಮಕ ಬೆಳವಣಿಗೆಗಿಂತ ಗುಣಾತ್ಮಕ ಬೆಳವಣಿಗೆಗೆ ಹೆಚ್ಚು ಒತ್ತು ಕೊಡಲಾಯಿತು. ೧೯೮೯-೯೦ರಲ್ಲಿ ವಾಣಿಜ್ಯ ಬ್ಯಾಂಕುಗಳ (ಗ್ರಾಮೀಣ ಬ್ಯಾಂಕು ಸೇರಿದಂತೆ) ಶಾಖೆಗಳ ಸಂಖ್ಯೆಯು ೧೨೬ಕ್ಕೆ ಏರಿತು. ನಂತರದ ವರ್ಷಗಳಲ್ಲಿ ಶಾಖೆಗಳ ವಿಸ್ತರಣೆಯನ್ನು ತಡೆಹಿಡಿಯಲಾಯಿತು. ಆದರೆ ಠೇವಣಿ ಹೆಚ್ಚಳಕ್ಕೆ ಮತ್ತು ಮುಂಗಡಗಳ ವೈವಿಧ್ಯತೆಗೆ ಪ್ರಾಮುಖ್ಯತೆಯನ್ನು ಕೊಡಲಾಯಿತು. ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದಲ್ಲಿ ೧೯೯೦ರಿಂದ ಕಂಡುಬಂದ ಈ ಅಂಶವನ್ನು ಮುಂದಿನ ಕೋಷ್ಟಕದಿಂದ ತಿಳಿಯಬಹುದು.

**ಕೋಷ್ಟಕ ೬.೩ ವಾಣಿಜ್ಯ ಬ್ಯಾಂಕುಗಳ ೧೯೯೦ರ ದಶಕದ ಪ್ರಗತಿ**

| ವಿವರ | ಮಾರ್ಚ್ ಕೊನೆಯಲ್ಲಿದ್ದಂತೆ | | | | | | | | | | | |
|---|---|---|---|---|---|---|---|---|---|---|---|---|
| | ೧೯೯೦ | ೧೯೯೧ | ೧೯೯೩ | ೧೯೯೪ | ೧೯೯೫ | ೧೯೯೬ | ೧೯೯೭ | ೧೯೯೮ | ೧೯೯೯ | ೨೦೦೦ | ೨೦೦೧ | ೨೦೦೨ |
| ಬ್ಯಾಂಕು ಶಾಖೆಗಳು (ಸಂಖ್ಯೆ) | ೧೨೬ | ೧೨೬ | ೧೨೭ | ೧೨೭ | ೧೨೭ | ೧೨೭ | ೧೨೭ | ೧೨೭ | ೧೨೭ | ೧೨೭ | ೧೨೮ | ೧೨೮ |
| ಠೇವಣಿ (ಕೋಟಿ ರೂ.) | ೧೧೪ | ೧೫೪ | ೧೭೩ | ೧೯೯ | ೨೩೫ | ೨೯೩ | ೩೫೦ | ೩೬೯ | ೪೩೦ | ೫೦೩ | ೫೬೬ | ೬೧೦ |
| ಮುಂಗಡಗಳು (ಕೋಟಿ ರೂ.) | ೯೬ | ೧೧೨ | ೧೨೧ | ೧೩೨ | ೧೫೮ | ೧೬೬ | ೧೮೭ | ೨೧೯ | ೨೩೯ | ೨೮೮ | ೩೧೮ | ೩೬೮ |

## ಮಾರ್ಗದರ್ಶಿ ಬ್ಯಾಂಕ್ (ಲೀಡ್ ಬ್ಯಾಂಕ್) ಮತ್ತು ಪತ್ತಿನ ಕ್ರಿಯಾ ಯೋಜನೆ (ಕ್ರೆಡಿಟ್ ಪ್ಲಾನ್)

ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬ್ಯಾಂಕ್ ಸೌಲಭ್ಯವನ್ನು ಉಪಯೋಗಿಸಲು ಶ್ರೀ ನಾರಿಮನ್ ಸಮಿತಿಯು ಶಿಫಾರಸ್ಸು ಮಾಡಿದ್ದ ಮಾರ್ಗದರ್ಶಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಈ ಸಮಿತಿಯ ವರದಿಯನ್ನಾಧರಿಸಿ ೧೯೬೯ರ ಡಿಸೆಂಬರ್‌ನಲ್ಲಿ ರಿಸರ್ವ್ ಬ್ಯಾಂಕ್ ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯ ಮುಖ್ಯ ಉದ್ದೇಶ ದೇಶದ ಎಲ್ಲಾ ಜಿಲ್ಲೆಗಳಿಗೂ ಬ್ಯಾಂಕಿಂಗ್ ಸೌಕರ್ಯವನ್ನು ವಿಸ್ತರಿಸುವುದಾಗಿತ್ತು. ಈ ಹೊಣೆಗಾರಿಕೆಯನ್ನು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ ವಿಧಿಸಿ, ಪ್ರತಿಯೊಂದು ಜಿಲ್ಲೆಗೂ ಒಂದೊಂದು ಬ್ಯಾಂಕನ್ನು ಮಾರ್ಗದರ್ಶಿ ಬ್ಯಾಂಕ್ ಎಂದು ನಿಯುಕ್ತಗೊಳಿಸಲಾಯಿತು. ಈ ಬ್ಯಾಂಕುಗಳು ತಮಗೆ ವಹಿಸಿದ ಜಿಲ್ಲೆಯ ಸಾಮಾಜಿಕ-ಆರ್ಥಿಕ ಸರ್ವೇಕ್ಷಣೆ ನಡೆಸಿ, ಆ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ಸಾಧ್ಯತೆ, ಇರುವ ಸಂಪನ್ಮೂಲಗಳು, ಅಗತ್ಯವಾದ ಸಾಲ ಮುಂಗಡಗಳ ಪ್ರಮಾಣ, ಇವುಗಳೆಲ್ಲವನ್ನು ಪರಿಶೀಲಿಸುವ ಕಾರ್ಯ ನಡೆಸಿವೆ. ಜಿಲ್ಲೆಯ ಎಲ್ಲ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನೊಳಗೊಂಡಂತೆ ಆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅದರಲ್ಲೂ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಹಿಂದುಳಿದ ಪ್ರದೇಶದ ಬೆಳವಣಿಗೆಗೆ ನೆರವು ನೀಡಿರುವುದು,

ರಾಷ್ಟ್ರೀಕರಣಾನಂತರ ಬ್ಯಾಂಕಿಂಗ್ ವ್ಯವಸ್ಥೆ ಮಾಡಿರುವ ಮುಖ್ಯ ಸಾಧನೆಗಳಲ್ಲೊಂದಾಗಿದೆ. ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಜಿಲ್ಲೆಯ ಶಾಖಾ ಬ್ಯಾಂಕುಗಳಿಗೆ ಆಯ್ಕೆ ಮಾಡಿದ ಹಲವಾರು ಗ್ರಾಮಗಳ 'ಸಂಪೂರ್ಣ ಅಭಿವೃದ್ಧಿಗೆ ಸೇವಾಕ್ಷೇತ್ರ' ಎಂಬ ಯೋಜನೆಯನ್ನು ೧೯೮೯ರಿಂದ ರೂಪಿಸಲಾಗಿದೆ. ಶಾಖಾವಾರು ಸಾಲಯೋಜನೆ ಮತ್ತು ಕ್ರಿಯಾಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ವಯ ಮಂಡ್ಯ ಜಿಲ್ಲೆಗೆ ೧೯೮೫ರಿಂದ ವಿಜಯಾ ಬ್ಯಾಂಕ್ ಮಾರ್ಗದರ್ಶಿ ಬ್ಯಾಂಕಾಗಿದ್ದು, ಅದಕ್ಕೂ ಪೂರ್ವದಲ್ಲಿ (೧೯೭೦-೭೧) ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಿನ ಹೊಣೆಗಾರಿಕೆಯನ್ನು ವಹಿಸಲಾಗಿತ್ತು. ಮಂಡ್ಯ ಜಿಲ್ಲೆಯ ಎಲ್ಲ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ವಿಜಯಾ ಬ್ಯಾಂಕ್ ವಾರ್ಷಿಕ ಜಿಲ್ಲಾ ಸಾಲ ಯೋಜನೆಗಳನ್ನು ತಯಾರಿಸಿ ಅದನ್ನು ಅನುಷ್ಠಾನಕ್ಕೆ ತರುತ್ತಿದೆ. ಈ ರೀತಿಯಾದ ಸಾಲ ಯೋಜನೆಗಳು ಕಾರ್ಯರೂಪಕ್ಕೆ ಬಂದುದರಿಂದ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಾಲ-ಸೌಲಭ್ಯಗಳು ದೊರಕುವಂತಾಗಿದೆ.

ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಪ್ರಗತಿಗೆ ಸಂಬಂಧಿಸಿದ ಕೆಲ ವಿವರಗಳನ್ನು ಕೋಷ್ಟಕ ೬.೪, ೬.೫, ೬.೬ ಮತ್ತು ೬.೭ರಲ್ಲಿ ನೀಡಲಾಗಿದೆ.

## ಗ್ರಾಮೀಣ ಬ್ಯಾಂಕುಗಳು

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ೧೯೭೬ರ ಶಾಸನದ ಪ್ರಕಾರ ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರವರ್ತಕ ಬ್ಯಾಂಕು, ಇವುಗಳ ಸಹಭಾಗಿತ್ವದಲ್ಲಿ ಒಂದು ಅಥವಾ ಎರಡು ಜಿಲ್ಲಾ ವ್ಯಾಪ್ತಿಯನ್ನು ಹೊಂದಿದಂತೆ ಗ್ರಾಮೀಣ ಬ್ಯಾಂಕುಗಳನ್ನು ದೇಶಾದ್ಯಂತ ಸ್ಥಾಪಿಸಲಾಯಿತು. ಗ್ರಾಮಸ್ಥರ ಆರ್ಥಿಕ ಸ್ಥಿತಿಗತಿ, ಉದ್ಯೋಗ, ಕಸುಬು ಮುಂತಾದವನ್ನು ಉತ್ತಮಪಡಿಸುವ ಹೊರೆಯನ್ನು ವಾಣಿಜ್ಯ ಬ್ಯಾಂಕುಗಳು ಪೂರ್ಣವಾಗಿ ಹೊರಲಾರವೆಂದು ಸರ್ಕಾರ ತೀರ್ಮಾನಿಸಿ, ಗ್ರಾಮೀಣ ಪರಿಸ್ಥಿತಿಗಳಿಗೇ ಹೊಂದಿಕೊಳ್ಳುವಂತಹ ಪ್ರತ್ಯೇಕ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಗ್ರಾಮಸ್ಥರ ಹಣದ ಬೇಡಿಕೆಗಳನ್ನು ಪೂರೈಸುವುದಕ್ಕೆ ಈ ಬ್ಯಾಂಕುಗಳು ಮೀಸಲಾಗಿದ್ದು, ಗ್ರಾಮದ ಆರ್ಥಿಕ ಚಟುವಟಿಕೆಗಳಿಗೆ ಪೂರ್ಣವಾಗಿ ಹಣದ ಸೌಲಭ್ಯವನ್ನು ಒದಗಿಸುತ್ತವೆ. ಹಣವು ಗ್ರಾಮಸ್ಥರಿಗೆ ದೊರೆಯುವುದಕ್ಕೆ ಯಾವ ವಿಳಂಬವೂ ಆಗುವುದಿಲ್ಲ. ಗ್ರಾಮಸ್ಥರು ತಮ್ಮ ಆರ್ಥಿಕ ವ್ಯವಹಾರಗಳಿಗೆ ವಾಣಿಜ್ಯ ಬ್ಯಾಂಕುಗಳನ್ನು ಅವಲಂಬಿಸುವುದು ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯಿಂದ ತಪ್ಪುತ್ತದೆ. ಗ್ರಾಮಸ್ಥರ ಕುಂದು ಕೊರತೆಗಳನ್ನು ಅರ್ಥ ಮಾಡಿಕೊಂಡು ಅವರ ಅಭಿವೃದ್ಧಿಗೆ ಸಹಾಯ ಮಾಡುವುದೇ ಗ್ರಾಮೀಣ ಬ್ಯಾಂಕುಗಳ ಮುಖ್ಯ ಉದ್ದೇಶವಾಗಿದೆ.

ಮಂಡ್ಯ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾದ ವಿಜಯಾ ಬ್ಯಾಂಕಿನಿಂದ ಪ್ರಾಯೋಜಿತಗೊಂಡ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕನ್ನು ೧೯೮೫ರಲ್ಲಿ ಸ್ಥಾಪಿಸಲಾಯಿತು. ಜಿಲ್ಲೆಯ ಗ್ರಾಮೀಣ ಜನರ ಅಭ್ಯುದಯಕ್ಕಾಗಿ, ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುಲ್ಲಿ ಈ ಬ್ಯಾಂಕು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ. ಗ್ರಾಮೀಣ ಜನರ ಸಮಗ್ರ ಅಭಿವೃದ್ಧಿ, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಹಳ್ಳಿಗಳಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುವುದು, ಮುಂತಾದ ಅಂಶಗಳು ಈ ಬ್ಯಾಂಕಿನ ಮೂಲಭೂತ ಗುರಿಯಾಗಿದ್ದು, ಅವನ್ನು ಸಾಧಿಸುವಲ್ಲಿ ಬ್ಯಾಂಕ್ ಯಶಸ್ವಿಯಾಗಿದೆ. ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕಿನ ಪ್ರಗತಿಯ ಪಥವನ್ನು ಕೋಷ್ಟಕ ೬.೮ರಲ್ಲಿ ನೀಡಲಾಗಿದೆ.

## ಕೋಷ್ಟಕ ೬.೪ ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಾಧಿಸಿದ ಪ್ರಗತಿ

| ಜಿಲ್ಲೆಯ ಬ್ಯಾಂಕುಗಳು | ಶಾಖೆಗಳ ಸಂಖ್ಯೆ | | | | ಠೇವುಗಳು (ಲಕ್ಷ ರೂ.) | ಮುಂಗಡಗಳು (ಲಕ್ಷ ರೂ.) | ಸಾಲ–ಠೇವಣಿಗಳ ನಿಷ್ಪತ್ತಿ (ಶೇಕಡ) | ಒಟ್ಟು ಆದ್ಯತಾ ವಲಯ ಸಾಲ (ಲಕ್ಷ ರೂ.) | ಒಟ್ಟು ಸಾಲಗಳಲ್ಲಿ ಆದ್ಯತಾ ವಲಯ ಸಾಲಗಳ ಪ್ರಮಾಣ (ಶೇಕಡ) | ನೇರ ಕೃಷಿ ಸಾಲ (ಲಕ್ಷ ರೂ.) | ಒಟ್ಟು ಸಾಲಗಳಲ್ಲಿ ನೇರ ಕೃಷಿ ಸಾಲಗಳ ಪ್ರಮಾಣ (ಶೇಕಡ) | ದುರ್ಬಲ ವರ್ಗಕ್ಕೆ ಸಾಲ (ಲಕ್ಷ ರೂ.) | ಒಟ್ಟು ಸಾಲಗಳಲ್ಲಿ ದುರ್ಬಲ ವರ್ಗದ ಸಾಲ (ಶೇಕಡ) | ವ್ಯತ್ಯಸ್ತ ಬಡ್ಡಿ ಸಾಲ (ಡಿ.ಐ.ಆರ್.) (ಲಕ್ಷ ರೂ.) |
|---|---|---|---|---|---|---|---|---|---|---|---|---|---|---|
| | ಗ್ರಾಮೀಣ | ಅರೆನಗರ | ನಗರ/ಪಟ್ಟಣ | ಒಟ್ಟು | | | | | | | | | | |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| ಅಲಹಾಬಾದ್ ಬ್ಯಾಂಕ್ | – | – | ೧ | ೧ | ೨೦೪.೪೦ | ೨೨೦.೯೧ | ೧೦೮ | ೧೦೫.೫೮ | ೪೮ | ೫.೪೯ | ೨ | ೧೭.೫೬ | ೮ | – |
| ಬ್ಯಾಂಕ್ ಆಫ್ ಇಂಡಿಯಾ | ೧ | – | ೧ | ೨ | ೫೮೪.೭೩ | ೪೧೬.೪೫ | ೭೧ | ೩೫೩.೧೦ | ೮೫ | ೧೨೭.೩೯ | ೩೦ | ೮೨.೩೮ | ೨೦ | ೦.೨೪ |
| ಕೆನರಾ ಬ್ಯಾಂಕ್ | ೮ | ೨ | ೧ | ೧೧ | ೬,೭೧೭.೦೦ | ೩,೩೦೨.೦೦ | ೪೯ | ೨,೭೮೭.೮೩ | ೮೪ | ೧,೮೭೨.೨೩ | ೫೭ | ೧,೩೮೪.೯೭ | ೪೨ | ೫.೬೯ |
| ಕಾರ್ಪೊರೇಷನ್ ಬ್ಯಾಂಕ್ | ೧ | – | ೧ | ೨ | ೧,೫೪೧.೦೦ | ೧,೦೨೬.೧೫ | ೬೭ | ೬೭೮.೨೧ | ೬೬ | ೩೧೧.೭೭ | ೩೦ | ೨೫೨.೪೨ | ೨೫ | ೧೧.೮೬ |
| ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ೧ | – | – | ೧ | ೪೧೬.೭೪ | ೧೯೯.೧೯ | ೪೮ | ೧೮೬.೯೫ | ೯೪ | ೧೦೫.೭೦ | ೫೩ | – | – | – |
| ಇಂಡಿಯನ್ ಬ್ಯಾಂಕ್ | – | – | ೧ | ೧ | ೫೪೩.೯೮ | ೩೬೨.೯೨ | ೬೭ | ೨೨೩.೭೮ | ೬೨ | ೧೪೭.೪೨ | ೪೧ | ೪೩.೪೮ | ೧೨ | – |
| ಕರ್ನಾಟಕ ಬ್ಯಾಂಕ್ | – | ೧ | ೧ | ೨ | ೨,೮೪೫.೦೮ | ೪೭೬.೧೧ | ೧೭ | ೨೪೪.೦೦ | ೫೧ | ೯೫.೪೮ | ೨೧ | ೫.೩೮ | ೧ | ೦.೦೫ |
| ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೫ | – | – | ೫ | ೧೩೮೧.೦೦ | ೧,೪೨೩.೦೦ | ೧೦೩ | ೧,೧೬೮.೦೦ | ೮೨ | ೪೩೯.೦೦ | ೩೧ | ೧,೩೨೨.೦೦ | ೯೩ | ೨೩.೦೦ |
| ಲಕ್ಷ್ಮೀ ವಿಲಾಸ್ ಬ್ಯಾಂಕ್ | – | – | ೧ | ೧ | ೪೩೫.೧೧ | ೩೪೩.೬೩ | ೭೯ | ೨೪೫.೫೬ | ೭೧ | ೪೫.೧೦ | ೧೩ | – | – | – |
| ನೆಡುಂಗಾಡಿ ಬ್ಯಾಂಕ್ | – | – | ೧ | ೧ | ೪೮೪.೭೭ | ೨೯೩.೭೧ | ೬೧ | ೧೪೮.೯೦ | ೫೧ | ೩೨.೯೦ | ೧೧ | ೦.೬೪ | – | ೦.೩೬ |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | – | – | ೧ | ೧ | ೫೭೪.೮೭ | ೬೮೫.೩೯ | ೧೧೯ | ೪೧೭.೨೧ | ೬೧ | ೬೪.೪೪ | ೯ | ೫೮.೬೪ | ೮ | – |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೧ | ೧ | ೨ | ೪ | ೨,೮೧೩.೦೭ | ೨,೫೯೭.೯೮ | ೯೨ | ೧,೬೦೫.೬೪ | ೬೨ | ೬೯೫.೭೬ | ೨೭ | ೧೪೦.೩೮ | ೫ | – |
| ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೨೪ | ೬ | ೩ | ೩೩ | ೧೯,೧೮೪.೦೦ | ೧೧,೪೮೭.೦೦ | ೬೦ | ೮,೮೮೭.೦೦ | ೭೭ | ೬,೫೬೯.೦೦ | ೫೭ | ೬,೫೯೮.೦೦ | ೫೭ | ೧.೦೦ |
| ಸಿಂಡಿಕೇಟ್ ಬ್ಯಾಂಕ್ | ೩ | ೧ | ೧ | ೫ | ೩,೨೬೨.೧೫ | ೨,೧೯೩.೫೦ | ೬೭ | ೧,೩೯೬.೬೯ | ೬೪ | ೭೫೨.೯೭ | ೩೪ | ೨೪೧.೨೯ | ೧೧ | ೦.೬೬ |
| ಸೌತ್ ಇಂಡಿಯನ್ ಬ್ಯಾಂಕ್ | – | – | ೧ | ೧ | ೬೭೨.೩೨ | ೪೬೮.೪೨ | ೭೦ | ೨೨೫.೪೭ | ೪೮ | ೭.೫೦ | ೨ | ೩.೫೦ | ೦.೭ | ೦.೧೧ |
| ವಿಜಯಾ ಬ್ಯಾಂಕ್ | ೨೪ | ೪ | ೧ | ೨೯ | ೧೦,೭೫೫.೦೦ | ೬,೪೮೯.೦೦ | ೬೦ | ೫,೫೧೮.೦೦ | ೮೫ | ೪,೦೨೯.೦೦ | ೬೨ | ೩,೧೫೬.೦೦ | ೪೯ | ೩.೦೦ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
|---|---|---|---|---|---|---|---|---|---|---|---|---|---|---|
| ವೈಶ್ಯ ಬ್ಯಾಂಕ್ | ೧ | ೧ | ೧ | ೩ | ೩,೭೪೪.೪೫ | ೧,೧೪೬.೪೩ | ೩೧ | ೭೧೮.೬೭ | ೬೨ | ೩೦೧.೮೩ | ೨೬ | ೧೭೪.೮೨ | ೧೫ | ೦.೧೦ |
| ಒಟ್ಟು | ೬೯ | ೧೬ | ೧೮ | ೧೦೩ | ೫೬,೧೫೯.೬೭ | ೩೩,೧೩೧.೯೯ | ೫೯ | ೨೪,೯೧೦.೪೯ | ೭೫ | ೧೫,೬೦೨.೯೮ | ೪೭ | ೧೩,೪೮೧.೪೬ | ೪೧ | ೪೬.೦೬ |
| ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್ | ೨೦ | ೪ | ೧ | ೨೫ | ೪,೮೦೫.೪೪ | ೩,೬೫೯.೧೨ | ೭೬ | ೨,೨೬೯.೬೯ | ೬೨ | ೧,೮೮೭.೨೫ | ೫೧ | ೮೭೮.೧೯ | ೨೪ | – |
| ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ | ೩೩ | ೭ | ೫ | ೪೫ | ೧೭,೪೧೦.೦೬ | ೧೯,೫೯೬.೯೦ | ೧೧೩ | ೯,೯೦೫.೫೮ | ೫೦ | ೯,೯೦೫.೫೮ | ೫೦ | ೩,೭೨೫.೭೮ | ೧೯ | – |
| ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | – | ೬ | ೧ | ೭ | ೩೮.೫೯ | ೩,೯೦೯.೦೦ | – | ೩,೨೩೭.೯೫ | ೮೩ | ೨,೭೯೪.೨೭ | ೭೧ | ೧,೯೧೪.೯೪ | ೪೯ | – |
| ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕ್ | – | – | ೧ | ೧ | – | ೪೩೨.೯೩ | – | ೪೨೫.೦೦ | ೧೦೦ | – | – | – | – | – |
| ಎಲ್ಲ ಸಹಕಾರಿ ಬ್ಯಾಂಕುಗಳು | ೩೩ | ೧೩ | ೭ | ೫೩ | ೧೭,೪೪೮.೬೫ | ೨೩,೯೩೮.೮೩ | ೧೩೭ | ೧೩,೫೬೮.೫೩ | ೫೭ | ೧೨,೬೯೯.೮೫ | ೫೩ | ೫,೬೪೦.೭೨ | ೨೪ | – |
| ಕರ್ನಾಟಕ ರಾಜ್ಯ ಹಣಕಾಸು ನಿಗಮ | – | – | ೧ | ೧ | ೧೪.೫೯ | ೫,೬೪೪.೦೯ | – | ೫,೬೪೪.೦೯ | ೧೦೦ | – | – | – | – | – |
| ಎಲ್ಲ ಸೇರಿ ಒಟ್ಟು | ೧೨೨ | ೩೩ | ೨೭ | ೧೮೨ | ೭೮,೪೨೮.೩೫ | ೬೬,೩೭೪.೦೩ | ೮೫ | ೪೬,೩೯೨.೮೦ | ೭೦ | ೩೦,೧೯೦.೦೮ | ೪೫ | ೨೦,೦೦೦.೩೭ | ೩೦ | ೪೬.೦೬ |

ಆಧಾರ : ಲೀಡ್ ಬ್ಯಾಂಕ್ (ವಿಜಯಾ ಬ್ಯಾಂಕ್), ಮಂಡ್ಯ

**ಕೋಷ್ಟಕ ೬.೫ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ವಾರ್ಷಿಕ ಸಾಲ ಯೋಜನೆಯನ್ವಯ ಕಳೆದ ಐದು ವರ್ಷಗಳಲ್ಲಿ (ಪ್ರತಿ ವರ್ಷ) ಆದ್ಯತಾ ವಲಯಕ್ಕೆ ನೀಡಿದ ಸಾಲದ ವಿವರ**

| ವಲಯ | ೧–೪–೯೭ ರಿಂದ ೩೧–೩–೯೮ರವರೆಗೆ | | | ೧–೪–೯೮ ರಿಂದ ೩೧–೩–೯೯ರವರೆಗೆ | | | ೧–೪–೯೯ ರಿಂದ ೩೧–೩–೨೦೦೦ದವರೆಗೆ | | | ೧–೪–೨೦೦೦ ದಿಂದ ೩೧–೩–೨೦೦೧ ರವರೆಗೆ | | | ೧–೪–೨೦೦೧ ರಿಂದ ೩೧–೩–೨೦೦೨ ರವರೆಗೆ | | |
|---|---|---|---|---|---|---|---|---|---|---|---|---|---|---|---|
| | ನಿಗದಿತ ಮೊತ್ತ (ಗುರಿ) | ಸಾಧನೆ | ಶೇಕಡ (ಸಾಧನೆ) | ನಿಗದಿತ ಮೊತ್ತ (ಗುರಿ) | ಸಾಧನೆ | ಶೇಕಡ (ಸಾಧನೆ) | ನಿಗದಿತ ಮೊತ್ತ (ಗುರಿ) | ಸಾಧನೆ | ಶೇಕಡ (ಸಾಧನೆ) | ನಿಗದಿತ ಮೊತ್ತ (ಗುರಿ) | ಸಾಧನೆ | ಶೇಕಡ (ಸಾಧನೆ) | ನಿಗದಿತ ಮೊತ್ತ (ಗುರಿ) | ಸಾಧನೆ | ಶೇಕಡ (ಸಾಧನೆ) |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| ೧) ಬೆಳೆ ಸಾಲ | ೩೯.೮೬ | ೬೫.೨೧ | ೧೬೪ | ೫೦.೫೫ | ೮೧.೩೩ | ೧೬೧ | ೫೯.೫೮ | ೯೩.೧೮ | ೧೫೬ | ೯೦.೦೯ | ೯೬.೧೩ | ೧೦೭ | ೯೮.೮೨ | ೧೧೦.೬೮ | ೧೧೨ |
| ೨) ಅವಧಿ ಸಾಲ (ಕೃಷಿ) | ೨೩.೩೬ | ೨೦.೩೩ | ೮೭ | ೨೪.೧೭ | ೨೦.೧೪ | ೮೩ | ೨೪.೦೨ | ೧೭.೦೪ | ೭೧ | ೨೫.೬೪ | ೧೯.೨೫ | ೭೫ | ೨೬.೮೦ | ೧೮.೧೮ | ೬೮ |
| ೩) ಸಣ್ಣ ಪ್ರಮಾಣದ ಕೈಗಾರಿಕೆ ಗಳು | ೧೩.೮೮ | ೧೨.೧೮ | ೮೮ | ೧೩.೭೬ | ೧೦.೪೮ | ೭೬ | ೧೩.೧೮ | ೬.೨೬ | ೪೮ | ೮.೭೯ | ೫.೬೨ | ೮೪ | ೧೦.೪೪ | ೮.೦೩ | ೭೭ |
| ೪) ಇತರ ಆದ್ಯತಾ ವಲಯ ಮುಂಗಡಗಳು | ೧೬.೭೪ | ೧೫.೫೦ | ೯೩ | ೧೪.೮೩ | ೧೬.೭೧ | ೧೧೨ | ೧೭.೭೪ | ೨೨.೭೦ | ೧೨೮ | ೨೧.೩೯ | ೨೯.೯೯ | ೧೪೦ | ೨೭.೭೩ | ೩೦.೬೦ | ೧೧೦ |
| ಒಟ್ಟು ಆದ್ಯತಾ ವಲಯ ಮುಂಗಡಗಳು | ೯೩.೮೪ | ೧೧೩.೨೨ | ೧೨೧ | ೧೦೩.೩೧ | ೧೨೮.೬೬ | ೧೨೪ | ೧೧೪.೫೨ | ೧೩೯.೧೮ | ೧೨೨ | ೧೪೫.೯೧ | ೧೫೦.೯೯ | ೧೦೩ | ೧೬೩.೭೯ | ೧೬೭.೪೯ | ೧೦೨ |

ಸೂಚನೆ : ಮೇಲಿನ ಪಟ್ಟಿಯಲ್ಲಿನ ನಿಗದಿತ ಮೊತ್ತ (ಗುರಿ) ಮತ್ತು ಸಾಧನೆ ಕೋಟಿ ರೂ.ಗಳಲ್ಲಿವೆ.

ಆಧಾರ : ಲೀಡ್ ಬ್ಯಾಂಕ್ (ವಿಜಯಾ ಬ್ಯಾಂಕ್), ಮಂಡ್ಯ.

**ಕೋಷ್ಟಕ ೬.೬ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಾಧಿಸಿದ ಪ್ರಗತಿಯ ವಿವರ**

| ವಿವರಗಳು | ೧೯೯೯ರ ಮಾರ್ಚ್ ಅಂತ್ಯಕ್ಕೆ | ೨೦೦೦ರ ಮಾರ್ಚ್ ಅಂತ್ಯಕ್ಕೆ | ೨೦೦೧ರ ಮಾರ್ಚ್ ಅಂತ್ಯಕ್ಕೆ | ೨೦೦೨ರ ಮಾರ್ಚ್ ಅಂತ್ಯಕ್ಕೆ |
|---|---|---|---|---|
| ಒಟ್ಟು ಶಾಖೆಗಳು (ಸಂಖ್ಯೆ) | ೧೭೯ | ೧೭೯ | ೧೮೨ | ೧೮೨ |
| ಠೇವುಗಳು (ಕೋಟಿ ರೂ.) | ೫೨೯.೪೮ | ೬೨೯.೧೯ | ೭೧೩.೪೯ | ೭೮೪.೨೯ |
| ಮುಂಗಡಗಳು (ಕೋಟಿ ರೂ.) | ೪೪೬.೩೩ | ೫೩೩.೯೧ | ೬೦೦.೫೭ | ೬೬೩.೭೪ |
| ಠೇವಣಿ–ಮುಂಗಡಗಳ ಪ್ರಮಾಣ | ೮೪% | ೮೫% | ೮೪% | ೮೫% |
| ಆದ್ಯತಾ ವಲಯ ಸಾಲಗಳು (ಕೋಟಿ ರೂ.) | ೩೨೦.೭೪ | ೩೬೩.೨೮ | ೪೦೨.೦೨ | ೪೬೩.೯೩ |
| ಒಟ್ಟು ಸಾಲಗಳಲ್ಲಿ ಆದ್ಯತಾವಲಯ ಸಾಲಗಳ ಪ್ರಮಾಣ (ಶೇಕಡ) | ೭೨ | ೬೮.೦೪ | ೬೭ | ೭೦ |
| ವ್ಯವಸಾಯ ಕ್ಷೇತ್ರಕ್ಕೆ ನೀಡಿದ ಒಟ್ಟು ಸಾಲ (ಕೋಟಿ ರೂ.) | ೨೦೬.೮೭ | ೨೩೫.೯೨ | ೨೬೯.೮೪ | ೩೦೧.೯೦ |
| ಒಟ್ಟು ಸಾಲದಲ್ಲಿ ವ್ಯವಸಾಯ ಸಾಲದ ಪ್ರಮಾಣ (ಶೇಕಡ) | ೬೪ | ೪೪.೧೮ | ೪೫ | ೪೫ |
| ದುರ್ಬಲ ವರ್ಗದವರಿಗೆ ನೀಡಿದ ಸಾಲ (ಕೋಟಿ ರೂ.) | ೬೬.೨೫ | ೮೩.೬೪ | ೧೬೫.೦೭ | ೨೦೦.೦೦ |
| ಒಟ್ಟು ಸಾಲಗಳಲ್ಲಿ ದುರ್ಬಲ ವರ್ಗ ಸಾಲದ ಪ್ರಮಾಣ (ಶೇಕಡ) | ೧೪.೮೪ | ೧೫.೬೬ | ೨೭ | ೩೦ |
| ವ್ಯತ್ಯಸ್ತ ಬಡ್ಡೀ (ಡಿ.ಐ.ಆರ್) ಸಾಲಗಳು (ಕೋಟಿ ರೂ.) | – | ೦.೪೩ | ೦.೮೨ | ೦.೪೬ |
| ಒಟ್ಟು ಸಾಲಗಳಲ್ಲಿ ಡಿ.ಐ.ಆರ್ ಸಾಲದ ಪ್ರಮಾಣ (ಶೇಕಡ) | – | ೦.೦೮ | ೦.೧೪ | ೦.೦೭ |

ಆಧಾರ : ಲೀಡ್ ಬ್ಯಾಂಕ್ (ವಿಜಯಾ ಬ್ಯಾಂಕ್), ಮಂಡ್ಯ.

**ಕೋಷ್ಟಕ ೬.೭ ೧೯೯೧ ರಿಂದ ೨೦೦೨ರ ವರೆಗೆ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಾಲ ವಸೂಲಾತಿಯಲ್ಲಿ ಸಾಧಿಸಿದ ಪ್ರಗತಿ**

| ವರ್ಷ | ತಗಾದೆ (ಲಕ್ಷ ರೂ.) | ವಸೂಲಾತಿ (ಲಕ್ಷ ರೂ.) | ಸುಸ್ತಿ ಬಾಕಿ (ಲಕ್ಷ ರೂ.) | ಶೇಕಡ ವಸೂಲಾತಿ |
|---|---|---|---|---|
| ೧ | ೨ | ೩ | ೪ | ೫ |
| ೧೯೯೧ | ೭,೭೬೬.೫೩ | ೨,೬೪೬.೭೫ | ೫,೧೧೯.೭೮ | ೩೪ |
| ೧೯೯೨ | ೮,೯೧೭.೬೬ | ೩,೧೪೨.೬೬ | ೫,೭೭೫.೦೦ | ೩೫ |

| ೧ | ೨ | ೩ | ೪ | ೫ |
|---|---|---|---|---|
| ೧೯೯೩ | ೮,೯೧೭.೨೭ | ೨,೯೭೭.೬೪ | ೫,೯೩೯.೬೩ | ೩೩ |
| ೧೯೯೪ | ೮,೮೩೧.೫೧ | ೩,೬೮೭.೬೯ | ೫,೧೪೩.೮೨ | ೪೨ |
| ೧೯೯೫ | ೯,೮೮೬.೯೬ | ೪,೭೬೭.೬೪ | ೫,೧೧೯.೩೨ | ೪೮ |
| ೧೯೯೬ | ೧೧,೫೨೮.೧೨ | ೫,೬೯೯.೯೬ | ೫,೮೨೮.೧೬ | ೪೯ |
| ೧೯೯೭ | ೧೨,೫೪೬.೩೨ | ೬,೪೩೪.೩೯ | ೬೧೧೧.೯೩ | ೫೧ |
| ೧೯೯೮ | ೧೧,೯೪೦.೩೭ | ೬,೧೩೨.೪೦ | ೫,೮೦೭.೯೭ | ೫೧ |
| ೧೯೯೯ | ೨೪,೪೩೯.೦೪ | ೧೫,೩೪೧.೧೬ | ೯,೦೯೭.೮೮ | ೬೩ |
| ೨೦೦೦ | ೧೭,೪೮೪.೭೪ | ೧೨,೦೬೬.೪೮ | ೫,೩೧೮.೨೬ | ೭೦ |
| ೨೦೦೧ | ೨೨,೬೯೮.೯೯ | ೧೪,೨೦೧.೬೭ | ೮,೪೯೭.೩೨ | ೬೩ |
| ೨೦೦೨ | ೩೫,೩೨೨.೩೪ | ೨೨,೮೩೮.೨೨ | ೧೨,೪೮೪.೧೨ | ೬೫ |

ಆಧಾರ : ಲೀಡ್ ಬ್ಯಾಂಕ್ (ವಿಜಯಾ ಬ್ಯಾಂಕ್), ಮಂಡ್ಯ

## ಕೋಷ್ಟಕ ೬.೮ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕಿನ ಪ್ರಗತಿ

| ವಿವರ | ೧೯೮೯–೯೦ | ೧೯೯೧–೯೨ | ೧೯೯೩–೯೪ | ೧೯೯೫–೯೬ | ೧೯೯೭–೯೮ | ೧೯೯೯–೨೦೦೦ |
|---|---|---|---|---|---|---|
| ಠೇವಣಿಗಳು (ಲಕ್ಷ ರೂ.) | ೩೫೦.೩೯ | ೫೪೯.೬೨ | ೬೬೮.೩೯ | ೧೪೯೬.೨೮ | ೨೩೫೮.೬೬ | ೩೬೪೨.೫೧ |
| ಸಾಲಗಳು : (ಲಕ್ಷ ರೂ.) | | | | | | |
| ಅ. ಕೃಷಿ ಚಟುವಟಿಕೆಗಳಿಗಾಗಿ | ೮೧.೨೨ | ೮೧.೭೦ | ೧೧೦.೯೬ | ೨೬೮.೮೩ | ೪೭೬.೧೮ | ೮೫೭.೯೪ |
| ಆ. ಕೃಷಿಯೇತರ ಚಟುವಟಿಕೆಗಳಿಗಾಗಿ | ೧೦೬.೮೫ | ೮೧.೯೯ | ೨೬೭.೯೯ | ೨೪೯.೩೮ | ೪೦೨.೨೪ | ೫೦೭.೩೪ |
| ಇ. ಇತರೆ | ೩೦೫.೫೫ | ೩೯೨.೫೪ | ೨೬೩.೫೫ | ೫೨೮.೩೧ | ೮೩೨.೯೫ | ೧೨೫೭.೯೭ |
| ಒಟ್ಟು | ೪೯೩.೬೨ | ೫೫೬.೨೩ | ೬೪೨.೫೦ | ೧೦೪೬.೫೨ | ೧೭೧೧.೩೭ | ೨೬೨೩.೨೫ |
| ಲಾಭ (+) ನಷ್ಟ (–) (ಲಕ್ಷ ರೂ.) | –೪.೧೬ | –೩೫.೯೦ | –೧೨೨.೦೦ | –೮.೯೯ | +೨೦.೧೧ | +೮೧.೨೬ |

ಗ್ರಾಮೀಣ ಬ್ಯಾಂಕಿನ ಶಾಖೆಗಳ ಪುನರ್‌ರಚನಾ ಕಾರ್ಯಕ್ರಮದಡಿ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್ ಮಾರ್ಚ್ ೨೦೦೨ರವರೆಗೆ ಹತ್ತು ಶಾಖೆಗಳನ್ನು ಸ್ಥಳಾಂತರಿಸಿ ತನ್ನ ಆರ್ಥಿಕ ಸ್ಥಿತಿಯನ್ನು ಮತ್ತು ಸೇವಾಜಾಲವನ್ನು ಹೆಚ್ಚಿಸಿಕೊಂಡಿದೆ. ಜಿಲ್ಲೆಯಲ್ಲಿ ಈ ಬ್ಯಾಂಕ್ ಹೊಂದಿದ್ದ ೨೫ ಶಾಖೆಗಳಲ್ಲಿ, ಒಂದು ನಗರ, ನಾಲ್ಕು ಅರೆನಗರ ಮತ್ತು ೨೦ ಗ್ರಾಮಾಂತರ ಶಾಖೆಗಳಾಗಿವೆ. ೨೦೦೨ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕಿನ ಠೇವಣಿ ೪,೮೦೫.೪೪ ಲಕ್ಷ ರೂ.ಗಳಾಗಿದ್ದು, ಹಿಂದಿನ ವರ್ಷಕ್ಕೆ (ರೂ.೪,೨೮೪ ಲಕ್ಷ) ಹೋಲಿಸಿದ್ದಲ್ಲಿ ಅದು ಶೇ.೧೨ ರಷ್ಟು ವೃದ್ಧಿಯಾಗಿದೆ. ಮಾರ್ಚ್ ೨೦೦೨ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟಾರೆ ಮುಂಗಡವು ೩,೬೫೮.೪೫ ಲಕ್ಷ ರೂ.ಗಳಾಗಿದ್ದು, ಕಳೆದ ವರ್ಷಕ್ಕಿಂತ (ರೂ.೩,೨೩೮.೨೪ ಲಕ್ಷ) ಅದು ಶೇ.೧೩ ರಷ್ಟು ಹೆಚ್ಚಿದೆ. ಒಟ್ಟಾರೆ ಮುಂಗಡಗಳಲ್ಲಿ (೩,೬೫೮.೪೫ ಲಕ್ಷ ರೂ.) ಆದ್ಯತಾ ವಲಯಕ್ಕೆ ೨,೨೪೦.೫೭ ಲಕ್ಷ ರೂ. ಮತ್ತು ಆದ್ಯತಾವಲ್ಲದ ವಲಯಕ್ಕೆ ೧,೪೧೭.೮೮ ಲಕ್ಷ ರೂ. ವಿತರಿಸಲಾಗಿತ್ತು. ಆದ್ಯತಾ ವಲಯ ಸಾಲಗಳಲ್ಲಿ ವ್ಯವಸಾಯಕ್ಕೆ ೨,೧೧೬.೧೫ ಲಕ್ಷ ರೂ. (ಬೆಳೆ ಸಾಲ ೧,೬೭೯.೯೦ ಲಕ್ಷ ರೂ., ಅವಧಿಸಾಲ ೪೩೬.೨೫ ಲಕ್ಷ ರೂ.) ; ಸಣ್ಣ ಕೈಗಾರಿಕೆ/ಕೃಷಿ ಕಾರ್ಮಿಕರಿಗೆ ೨೧.೦೧ ಲಕ್ಷ ರೂ. ಮತ್ತು ಇತರ ಆದ್ಯತಾ ವಲಯಕ್ಕೆ ೧೦೩.೪೧ ಲಕ್ಷ ರೂ. ವಿತರಿಸಲಾಗಿತ್ತು. ಹಿಂದಿನ ವರ್ಷದ (೨೦೦೧ರ ಮಾರ್ಚ್ ಅಂತ್ಯಕ್ಕೆ) ಒಟ್ಟಾರೆ ಮುಂಗಡಗಳಲ್ಲಿ (೩,೨೩೮.೨೪ ಲಕ್ಷ ರೂ.), ೧,೯೪೯.೦೮ ಲಕ್ಷ ರೂ. ಆದ್ಯತಾ ವಲಯ ಮತ್ತು ೧,೨೮೯.೧೬ ಲಕ್ಷ ರೂ. ಆದ್ಯತಾವಲ್ಲದ ವಲಯ ಮುಂಗಡಗಳಾಗಿದ್ದವು. ಆದ್ಯತಾ ವಲಯ ಮುಂಗಡದಲ್ಲಿ ವ್ಯವಸಾಯಕ್ಕೆ ೧,೮೧೩.೦೩ ಲಕ್ಷ ರೂ. (ಬೆಳೆ ಸಾಲ ೧,೩೨೪.೬೩ ಲಕ್ಷ, ಅವಧಿ ಸಾಲ ೪೮೮.೪೦ ಲಕ್ಷ ರೂ.), ಸಣ್ಣ ಕೈಗಾರಿಕೆ/ಕೃಷಿ ಕಾರ್ಮಿಕರಿಗೆ ೨೫.೧೯ ಲಕ್ಷ ರೂ. ಮತ್ತು ಇತರೆ ೧೧೦.೮೬ ಲಕ್ಷ ರೂ.ಗಳಾಗಿತ್ತು. ಗ್ರಾಮೀಣ ಬ್ಯಾಂಕು ೨೦೦೨ರ ಮಾರ್ಚ್ ಅಂತ್ಯಕ್ಕೆ ಗಳಿಸಿದ ಲಾಭ ೧೪೫.೫೬ ಲಕ್ಷ ರೂ.ಗಳಾಗಿದ್ದು, ಹಿಂದಿನ ವರ್ಷದಲ್ಲಿ (೨೦೦೧ರ ಮಾರ್ಚ್ ಅಂತ್ಯಕ್ಕೆ) ಗಳಿಸಿದ ಲಾಭ ೧೦೦.೮೫ ಲಕ್ಷ ರೂ.ಗಳಾಗಿತ್ತು. ಗ್ರಾಮೀಣ ಬ್ಯಾಂಕು ೨೦೦೨ರ ಮಾರ್ಚ್ ಅಂತ್ಯಕ್ಕೆ ಒಟ್ಟು ೪೮೯೩ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು (ವಿಶ್ವೇಶ್ವರಯ್ಯ ಕೃಷಿ ಕಾರ್ಡ್ ) ವಿತರಿಸಿದ್ದು, ಅದರಡಿ ಬಾಕಿ ಇದ್ದ ಸಾಲದ ಮೊತ್ತ ೧,೪೬೭.೦೮ ಲಕ್ಷ ರೂ.ಗಳಾಗಿತ್ತು. ಬ್ಯಾಂಕಿನ ಒಟ್ಟು ಸಿಬ್ಬಂದಿ ಸಂಖ್ಯೆ ೨೦೦೨ರ ಮಾರ್ಚ್ ಅಂತ್ಯದಲ್ಲಿದ್ದಂತೆ ೧೦೨ ಆಗಿತ್ತು.

## ವಿಮೆ ವ್ಯವಹಾರ

### ಕರ್ನಾಟಕ ಸರ್ಕಾರಿ ವಿಮಾ ಇಲಾಖೆ

ಮೈಸೂರು ಸರ್ಕಾರ ಡಿಸೆಂಬರ್ ೧೮೯೧ರಲ್ಲಿ ವಿಮಾ ವಿಭಾಗವನ್ನು ಸ್ಥಾಪಿಸಿ, ಪ್ರಾರಂಭಕ್ಕೆ ತಿಂಗಳಿಗೆ ಹತ್ತು ರೂ. ಮತ್ತು ಅದಕ್ಕೂ ಹೆಚ್ಚಿನ ವೇತನ ಪಡೆಯುತ್ತಿದ್ದ ಸರ್ಕಾರಿ ಅಧಿಕಾರಿಗಳಿಗೆ ಅನ್ವಯವಾಗುವಂತೆ ಕಡ್ಡಾಯ ವಿಮಾ ಸೌಲಭ್ಯವನ್ನು ಜಾರಿಗೆ ತಂದಿತು. ಮುಂದೆ ಈ ವಿಮಾ ವಿಭಾಗವು ಪ್ರತ್ಯೇಕ ವಿಮಾ ಇಲಾಖೆಯಾಗಿ ಪರಿವರ್ತನೆಗೊಂಡಿತು. ರಾಜ್ಯ ವಿಮಾ ಇಲಾಖೆಯು (ಕೆ.ಜಿ.ಐ.ಡಿ.)ಕೇವಲ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಜೀವ ವಿಮಾ ವ್ಯವಹಾರವನ್ನು, ಸರ್ಕಾರ, ಸರ್ಕಾರಿ ನೌಕರರು ಮತ್ತು ಸರ್ಕಾರದ ನಿಗಮಗಳಿಗೆ ಸಂಬಂಧಪಟ್ಟಂತೆ ಮೋಟಾರು ವಾಹನ ವಿಮೆ ವ್ಯವಹಾರವನ್ನು ನಿರ್ವಹಿಸುತ್ತಿದೆ. ೧೯೭೬ರಲ್ಲಿ ರಾಜ್ಯ ವಿಮಾ ಇಲಾಖೆಯ ಆಡಳಿತವನ್ನು ವಿಕೇಂದ್ರೀಕರಿಸಲಾಯಿತು. ಅದರನ್ವಯ ೧೯೭೬ರಲ್ಲಿ ಜಿಲ್ಲಾ ವಿಮಾಧಿಕಾರಿಗಳ ಕಚೇರಿಯನ್ನು ಮಂಡ್ಯದಲ್ಲಿ ತೆರೆಯಲಾಯಿತು. ಇದಕ್ಕೂ ಪೂರ್ವದಲ್ಲಿ ಜಿಲ್ಲೆಯ ವಿಮಾ ವ್ಯವಹಾರವನ್ನು ಮೈಸೂರಿನ ವಿಭಾಗೀಯ ಕಚೇರಿಯೇ ನಿರ್ವಹಿಸುತ್ತಿತ್ತು. ೧೯೮೧-೮೨ರಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಸಿ ಮತ್ತು ಡಿ ವರ್ಗದ ಎಲ್ಲಾ ರಾಜ್ಯ ಸರ್ಕಾರಿ ನೌಕರರ ವಿಮೆ ವ್ಯವಹಾರವನ್ನು ಜಿಲ್ಲಾ ಕಚೇರಿಗೆ ವರ್ಗಾಯಿಸಲಾಯಿತು. ಆದರೆ ಜಿಲ್ಲೆಯ ಪತ್ರಾಂಕಿತ ಅಧಿಕಾರಿಗಳಿಗೆ

ಸಂಬಂಧಪಟ್ಟ ವಿಮಾ ವ್ಯವಹಾರವನ್ನು ಮಾತ್ರ ಮೈಸೂರಿನ ವಿಭಾಗೀಯ ಕಚೇರಿಯೇ ನಿರ್ವಹಿಸುತ್ತಿತ್ತು. (ಇತ್ತೀಚಿಗೆ ಮೈಸೂರಿನ ವಿಭಾಗೀಯ ಕಚೇರಿಯು ರದ್ದಾದ ಕಾರಣ, ಜಿಲ್ಲೆಯ ಸಂಪೂರ್ಣ ವಿಮಾ ವ್ಯವಹಾರವನ್ನು ಜಿಲ್ಲಾ ವಿಮಾ ಕಚೇರಿಯೇ ನಿರ್ವಹಿಸುತ್ತದೆ). ೨೦೦೧–೦೨ ರಲ್ಲಿದ್ದಂತೆ ೨೩,೫೯ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಮಂಡ್ಯ ಜಿಲ್ಲೆಯಲ್ಲಿ ೪೧,೨೪೯ ವಿಮಾ ಪಾಲಿಸಿಗಳು ಚಾಲ್ತಿಯಲ್ಲಿದ್ದವು. ಈ ಪಾಲಿಸಿಗಳ ವಾರ್ಷಿಕ ವಿಮಾ ಕಂತಿನ ಆದಾಯ ೬,೯೧,೮೫,೫೫೫ ರೂ.ಗಳಾಗಿತ್ತು. ೧೯೯೮–೯೯ರಲ್ಲಿದ್ದಂತೆ ೨೩,೧೮೫ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಮಂಡ್ಯ ಜಿಲ್ಲೆಯಲ್ಲಿ ೩೬,೯೪೭ ವಿಮಾ ಪಾಲಿಸಿಗಳು ಚಾಲ್ತಿಯಲ್ಲಿದ್ದವು. ಈ ಪಾಲಿಸಿಗಳ ವಾರ್ಷಿಕ ವಿಮಾ ಕಂತಿನ ಆದಾಯ ೩,೧೯,೮೪,೩೯ ರೂ.ಗಳಾಗಿತ್ತು. ಜಿಲ್ಲೆಯಲ್ಲಿ ೧೯೯೫–೯೬ ರಲ್ಲಿ ೨೧,೬೯೧ ಸರ್ಕಾರಿ ನೌಕರರು ಹೊಂದಿದ್ದ ವಿಮಾ ಪಾಲಿಸಿಗಳ ಸಂಖ್ಯೆ ೩೪,೪೮೮ ಆಗಿದ್ದು, ವಾರ್ಷಿಕ ವಿಮಾ ಕಂತಿನ ಆದಾಯ ೨,೪೩,೬೫,೧೮೩ ರೂ.ಗಳಾಗಿತ್ತು. ೨೦೦೧–೦೨ರಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿ ವಿಮಾ ವ್ಯಾಪ್ತಿಗೆ ಒಳಪಟ್ಟ ಮೋಟಾರು ವಾಹನಗಳ ಸಂಖ್ಯೆ ೨೫೬ ಆಗಿತ್ತು. ಜಿಲ್ಲಾ ವಿಮಾ ಇಲಾಖೆಯ ಸಿಬ್ಬಂದಿ ಸಂಖ್ಯೆ ೨೦೦೧–೦೨ರಲ್ಲಿದ್ದಂತೆ ೨೨ ಆಗಿದ್ದಿತು.

## ಜೀವ ವಿಮಾ ನಿಗಮ

ಭಾರತೀಯ ಜೀವ ವಿಮಾ ನಿಗಮವು ೧೯೫೬ರಲ್ಲಿ ರಚನೆಗೊಳ್ಳುವ ಪೂರ್ವದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜೀವ ವಿಮೆ ಮತ್ತು ಸಾಮಾನ್ಯ ವಿಮಾ ವ್ಯವಹಾರವನ್ನು ಪ್ರೋತ್ಸಾಹಿಸಲು ಕೆಲ ಖಾಸಗಿ ವಿಮಾ ಸಂಸ್ಥೆಗಳು ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ತಮ್ಮ ಏಜಂಟರನ್ನು ಹೊಂದಿದ್ದವು. ಆ ದಿನಗಳಲ್ಲಿ ಇಂದಿನಷ್ಟು ವಿಮೆಯ ಬಗ್ಗೆ ಜನಸಾಮಾನ್ಯರಲ್ಲಿ ತಿಳುವಳಿಕೆ ಇರಲಿಲ್ಲ. ೧೯೫೬ರ ನಂತರ ಭಾರತೀಯ ಜೀವ ವಿಮಾ ನಿಗಮವು ತನ್ನ ಏಜಂಟರ ಮೂಲಕ ಮಂಡ್ಯ ಜಿಲ್ಲೆಯ ಜೀವ ವಿಮಾ ವ್ಯವಹಾರವನ್ನು ನಡೆಸುತ್ತಿತ್ತು. ಜಿಲ್ಲೆಯ ವಿಮಾ ವ್ಯವಹಾರಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಅದನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಭಾರತೀಯ ಜೀವ ವಿಮಾ ನಿಗಮವು ಜಿಲ್ಲೆಯ ತನ್ನ ಮೊದಲ ಶಾಖೆಯನ್ನು ಮಂಡ್ಯದಲ್ಲಿ ೧೯೫೮ರಲ್ಲಿ ತೆರೆಯಿತು. ನಂತರ ಶ್ರೀರಂಗಪಟ್ಟಣದ ಶಾಖೆಯನ್ನು ೧೯೮೫ರಲ್ಲಿ, ಮದ್ದೂರು ಶಾಖೆಯನ್ನು ೧೯೮೭ರಲ್ಲಿ ಮತ್ತು ಕೃಷ್ಣರಾಜಪೇಟೆ ಶಾಖೆಯನ್ನು ೧೯೯೧ರಲ್ಲಿ ಸ್ಥಾಪಿಸಿತು.

**ಕೋಷ್ಟಕ ೬.೯ ಮಂಡ್ಯ ಶಾಖೆ (ಜಿಲ್ಲಾ ವ್ಯಾಪ್ತಿ ಹೊಂದಿದ್ದಾಗ) ೧೯೬೮–೬೯, ೧೯೬೯–೭೦ ಮತ್ತು ೧೯೭೦–೭೧ ರಲ್ಲಿ ಜಿಲ್ಲೆಯಲ್ಲಿ ಸಾಧಿಸಿದ ಜೀವ ವಿಮಾ ವ್ಯವಹಾರ ಪ್ರಗತಿ**

| ವಿವರ | ೧೯೬೮–೬೯ | ೧೯೬೯–೭೦ | ೧೯೭೦–೭೧ |
|---|---|---|---|
| ೧. ನೀಡಲಾದ ಹೊಸ ವಿಮಾ ಪಾಲಿಸಿಗಳು | ೩,೭೧೬ | ೨,೯೬೭ | ೩,೨೧೨ |
| ೨. ವಿಮಾ ಮೊತ್ತ (ರೂ.ಸಾವಿರಗಳಲ್ಲಿ) | ೧೮,೭೩೯ | ೧೬,೫೩೨ | ೧೭೭೪೭ |
| ೩. ವಿಮಾ ಕಂತಿನ ವಾರ್ಷಿಕ ಆದಾಯ (ರೂ.) | ೨೧,೪೨,೦೬೯ | ೨೧,೩೭,೦೨೩ | ೨೨,೪೪,೩೯೦ |

ಆಧಾರ : ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಆಗಿನ ಲೀಡ್ ಬ್ಯಾಂಕ್) , ಮಂಡ್ಯ, ೧೯೭೨.

ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದ ಜೀವವಿಮಾ ನಿಗಮದ ಪಾಲಿಸಿಗಳ ಸಂಖ್ಯೆ ೧೯೯೯–೨೦೦೦ದಲ್ಲಿ ೨,೬೨,೫೪೨, ೨೦೦೦–೦೧ರಲ್ಲಿ ೨,೯೨,೫೪೯ ಮತ್ತು ೨೦೦೧–೦೨ರಲ್ಲಿ ೩,೨೬,೬೨೫ ಆಗಿದ್ದಿತು. ಈ ವರ್ಷಗಳಲ್ಲಿದ್ದ ಜೀವವಿಮಾ ನಿಗಮದ ಏಜಂಟರ ಸಂಖ್ಯೆ ಕ್ರಮವಾಗಿ ೧,೫೯೨, ೧,೬೫೩ ಮತ್ತು ೧,೭೪೯ ಆಗಿದ್ದಿತು. ಜಿಲ್ಲೆಯಲ್ಲಿನ ಜೀವವಿಮಾ ನಿಗಮದ ಸಿಬ್ಬಂದಿ ಸಂಖ್ಯೆ ೨೦೦೧–೦೨ರಲ್ಲಿದ್ದಂತೆ ೨೨೬ ಆಗಿದ್ದಿತು.

## ಜೀತ ಪದ್ಧತಿ ನಿರ್ಮೂಲನ ಕಾನೂನು

ಕೇಂದ್ರ ಸರ್ಕಾರವು ೧೯೭೬ರಲ್ಲಿ ಪ್ರಪ್ರಥಮವಾಗಿ 'ಜೀತ ಪದ್ಧತಿ ನಿರ್ಮೂಲನ' ಕಾನೂನನ್ನು ಜಾರಿಯಲ್ಲಿ ತಂದು ಜೀತದಾಳುಗಳನ್ನು ಮುಕ್ತಗೊಳಿಸಲು ಕ್ರಮ ಕೈಗೊಂಡಿತು. ಈ ಕಾನೂನಿನ್ವಯ ಜೀತ ಪದ್ಧತಿಯಿಂದ ಬಿಡುಗಡೆಯಾದವರು ಪಡೆದಿದ್ದ ಸಾಲದ ಹಣ ಮತ್ತು ಅದರ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ವಜಾ ಮಾಡಲಾಯಿತು. ಜೀತ ವಿಮುಕ್ತರ ಪುನರ್ವಸತಿ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಆರ್ಥಿಕ ನೆರವು ಯೋಜನೆಗಳನ್ನು ರೂಪಿಸಿವೆ. ಈ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಮಾಡುವ ವೆಚ್ಚದಲ್ಲಿ ಅರ್ಧದಷ್ಟನ್ನು ೧೯೭೯–೮೦ರಿಂದ ಕೇಂದ್ರ ಸರ್ಕಾರ ಭರಿಸುತ್ತಿದೆ. ಜೀತದಾಳುಗಳನ್ನು ಗುರುತಿಸಿ ಅವರಿಗೆ ಪುನರ್ವಸತಿ ಒದಗಿಸುವ ಕೆಲಸವನ್ನು ಗ್ರಾಮಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಮಾಡುತ್ತವೆ. ಈ ಫಲಾನುಭವಿಗಳಿಗೆ ಮನೆ, ಕೃಷಿ ಭೂಮಿ ಹಾಗೂ ಪರಿಕರಗಳು ಅಲ್ಲದೆ ಹಸು, ಎಮ್ಮೆ, ಹಂದಿ ಮುಂತಾದವುಗಳನ್ನು ಸರ್ಕಾರ ನೀಡುತ್ತಿದೆ.

ಜೀತಪದ್ಧತಿ ನಿರ್ಮೂಲನಾ ಕಾನೂನು ಜಾರಿಗೆ ಬಂದಂದಿನಿಂದ ಮಂಡ್ಯ ಜಿಲ್ಲೆಯಲ್ಲಿ ೨೦೦೨ರ ಮಾರ್ಚ್ ಅಂತ್ಯದವರೆಗೆ ಒಟ್ಟು ೫,೩೬೧ ಜೀತದಾಳುಗಳನ್ನು ಗುರುತಿಸಲಾಗಿದ್ದು, ಅವರಲ್ಲಿ ೪,೦೫೦ ಜನ ಪರಿಶಿಷ್ಟ ಜಾತಿಗೂ, ೨೧ ಜನ ಪರಿಶಿಷ್ಟ ಪಂಗಡಕ್ಕೂ, ೧,೨೯೦ ಜನ ಇತರ ಕೋಮಿಗೂ ಸೇರಿದವರಾಗಿದ್ದರು. ಒಟ್ಟು ಪುನರ್ವಸತಿ ಕಲ್ಪಿಸಲಾದ ಜೀತಮುಕ್ತರ ಸಂಖ್ಯೆ ೫,೧೩೧ ಆಗಿದ್ದು, ಆವರಲ್ಲಿ ೩,೮೫೨ಜನ ಪರಿಶಿಷ್ಟ ಜಾತಿಗೂ, ೧೫ ಜನ ಪರಿಶಿಷ್ಟ ಪಂಗಡಕ್ಕೂ, ೧,೨೬೪ ಜನ ಇತರ ಕೋಮಿಗೂ ಸೇರಿದವರಾಗಿದ್ದರು.

## ಸಹಕಾರ ಚಳವಳಿ

ಭಾರತದಲ್ಲಿ ಕಾನೂನಿನ ಚೌಕಟ್ಟಿನಡಿ ಸಹಕಾರ ವ್ಯವಸ್ಥೆ ೧೯೦೪ರಲ್ಲಿ ಪ್ರಾರಂಭವಾಗುವ ಒಂದು ದಶಕಕ್ಕೆ ಮೊದಲೇ, ಅಂದರೆ ೧೮೯೪ರಲ್ಲೇ ಸಹಕಾರಿ ತತ್ವದ ಮೇಲೆ ಕಾರ್ಯನಿರ್ವಹಿಸುವ, ರಚನೆಯಲ್ಲಿ ಕೂಡು ಬಂಡವಾಳ ಸಂಸ್ಥೆಗಳನ್ನು ಹೋಲುವ, ಮಿಶ್ರ ಮಾದರಿಯ 'ವ್ಯವಸಾಯ ಬ್ಯಾಂಕು'ಗಳನ್ನು ಸ್ಥಾಪಿಸಿದ ಕೀರ್ತಿ ಅಂದಿನ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಸಣ್ಣ ಮತ್ತು ಬಡ ರೈತರಿಗೆ ಸರಳವಾಗಿ ವ್ಯವಸಾಯ ಸಾಲವನ್ನು ಒದಗಿಸುವುದು ಈ ಬ್ಯಾಂಕುಗಳ ಪ್ರಮುಖ ಉದ್ದೇಶವಾಗಿತ್ತು. ಅಂದಿನ ಮೈಸೂರು ಸಂಸ್ಥಾನದಲ್ಲೇ ಅಂತಹ ಪ್ರಥಮ ಬ್ಯಾಂಕೊಂದನ್ನು ಶ್ರೀರಂಗಪಟ್ಟಣದ ಪಾಲಹಳ್ಳಿಯಲ್ಲಿ ೧೮೯೪ರಲ್ಲಿ ಸ್ಥಾಪಿಸಲಾಗಿತ್ತು.

ಮಂಡ್ಯ ಜಿಲ್ಲೆ ೧೯೩೯ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಬೇರ್ಪಡುವ ಪೂರ್ವದಲ್ಲಿ ಮೈಸೂರು ಜಿಲ್ಲೆಯಲ್ಲಿ ಅಂತರ್ಗತವಾಗಿತ್ತು. ಭಾರತದ ೧೯೦೪ರ ಸಹಕಾರ ಸಂಘಗಳ ಕಾನೂನಿನ ಮಾದರಿಯಲ್ಲೇ ಆಗಿನ ಮೈಸೂರು ಸಂಸ್ಥಾನದಲ್ಲೂ 'ಮೈಸೂರು ಸಹಕಾರಿ ಸಂಘಗಳ ಕಾಯ್ದೆ (ರೆಗ್ಯುಲೇಷನ್–III)' ಯನ್ನು ೧೯೦೫ರಲ್ಲಿ ಜಾರಿಗೊಳಿಸಲಾಯಿತು. ಮೈಸೂರಿನ ಈ ಸಹಕಾರಿ ಕಾನೂನು ಭಾರತದ ೧೯೦೪ರ ಕಾನೂನಿಗಿಂತಲೂ ಹೆಚ್ಚು ವ್ಯಾಪಕ ಮತ್ತು ಪ್ರಗತಿಪರವಾಗಿತ್ತು. ಭಾರತದ ಮೊದಲ ಸಹಕಾರಿ ಕಾನೂನಿನಲ್ಲಿ ವ್ಯವಸಾಯ ಪತ್ತಿನ ಸಂಘಗಳ ಸಂಘಟನೆಗಷ್ಟೇ ಅವಕಾಶವಿದ್ದು, ಮತ್ತಾವ ಬಗೆಯ ಸಂಘಗಳ ಸಂಘಟನೆಗೆ ಅವಕಾಶ ನೀಡದಿದ್ದಾಗ, ಮೈಸೂರಿನ ಕಾನೂನು ವ್ಯವಸಾಯೇತರ ಮತ್ತು ಸಾಲೇತರ ಸಂಘಗಳ ಸ್ಥಾಪನೆಗೂ ಅವಕಾಶ ನೀಡಿದುದು ಒಂದು ಗಮನಾರ್ಹ ಅಂಶವಾಗಿತ್ತು. ಮೈಸೂರಿನ ಸಹಕಾರಿ ಕಾನೂನು ಅಂದಿನ ಸಂಸ್ಥಾನಗಳಲ್ಲಿನ ಸಹಕಾರಿ ಕಾನೂನುಗಳಲ್ಲೇ ಪ್ರಥಮವಾಗಿತ್ತು. ೧೯೦೫ರ ಕಾಯಿದೆಯನ್ನು ಕ್ರಮಬದ್ಧವಾಗಿ ಜಾರಿಗೆ ತರುವ ಸಲುವಾಗಿ ೧೯೦೫ರಲ್ಲೇ ತಾತ್ಕಾಲಿಕವಾಗಿ ಸಹಕಾರ

ಸಂಘಗಳ ನಿಬಂಧಕರನ್ನು ನೇಮಿಸಲಾಯಿತು. ೧೯೧೨ರಲ್ಲಿ ಈ ನೇಮಕಾತಿಯನ್ನು ಖಾಯಂಗೊಳಿಸಿ ಮುಂದುವರಿಸಲಾಯಿತು. ಇದಕ್ಕೂ ಪೂರ್ವದಲ್ಲಿ ೧೯೦೭ರ ಸುಮಾರಿಗೆ ಯೂರೋಪ್, ಇಂಗ್ಲೆಂಡ್ ದೇಶಗಳಿಗೆ ಸಹಕಾರದ ಅಧ್ಯಯನ ನಡೆಸಲು ಅಧಿಕಾರಿಗಳನ್ನು ಕಳುಹಿಸಿಕೊಡಲಾಗಿತ್ತು. ಪ್ರಾರಂಭದಿಂದಲೂ ವ್ಯವಸಾಯ ಪತ್ತಿನ ಸಂಘಗಳ ಜೊತೆ ಜೊತೆಯಾಗಿ ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಮತ್ತು ಪತ್ತೇತರ ಸಹಕಾರ ಸಂಘಗಳ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಲಾಯಿತು. ಇದರಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಹಕಾರ ಚಳವಳಿ ವ್ಯಾಪಕವಾಗಿ ಬೆಳೆಯಲು ಅನುಕೂಲವಾಯಿತು.

ಸಹಕಾರಿ ಸಂಘಗಳ ಬೆಳವಣಿಗೆಗೆ ಒಂದು ರೂಪ ಹಾಗೂ ಮಾರ್ಗದರ್ಶನ ನೀಡಿ, ಅವುಗಳ ಮೇಲ್ವಿಚಾರಣೆ ಕೈಗೊಳ್ಳುವ ಉದ್ದೇಶದಿಂದ ೧೯೧೦ರಲ್ಲಿ ನಿವೃತ್ತ ನೌಕರರ ಸೇವೆಯನ್ನು ಬಳಸಿಕೊಳ್ಳಲಾಯಿತು. ಸಹಕಾರಿ ಸಂಸ್ಥೆಗಳ ಸಂಘಟನೆ, ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವ ಸಂಬಂಧ ಅಂತಹವರನ್ನು 'ಗೌರವ ಮೇಲ್ವಿಚಾರಕರು' ಎಂದು ನೇಮಿಸಲಾಯಿತು. ಗ್ರಾಮೀಣ ಪ್ರದೇಶದ ಪ್ರತಿ ದಿನದ ಸಹಕಾರಿ ಕೆಲಸಕ್ಕಾಗಿ ಅವರಿಗೆ ಒಂದು ರೂಪಾಯಿ ಸಂಭಾವನೆಯನ್ನು ನೀಡಲಾಗುತ್ತಿತ್ತು. ಮುಂದೆ ಈ ಪ್ರಯತ್ನದ ಫಲವಾಗಿ ವ್ಯವಸಾಯ ಪತ್ತಿನ, ವ್ಯವಸಾಯೇತರ ಪತ್ತಿನ ಮತ್ತು ಪತ್ತೇತರ ಸಂಘಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬೆಳೆದು ಬರುವಂತಾದವು.

ಲಭ್ಯ ಮಾಹಿತಿಯ ಅನುಸಾರ ಮಂಡ್ಯ ಜಿಲ್ಲೆಯ ಮೊಟ್ಟ ಮೊದಲ ಸಹಕಾರ ಸಂಘವಾದ ಮೇಲುಕೋಟೆ ಟೌನ್ ಕ್ರೆಡಿಟ್ ಸಹಕಾರಿ ಸಂಘವು ಮೇಲುಕೋಟೆಯಲ್ಲಿ ೧೯೦೯ರಲ್ಲಿ ಸ್ಥಾಪನೆಯಾಯಿತು. ಮುಂದೆ ಮದ್ದೂರಿನ ಟೌನ್ ಸಹಕಾರಿ ಸಂಘ ೧೯೧೨ರಲ್ಲಿ ನೋಂದಣಿಯಾಯಿತು. ಮಳವಳ್ಳಿ ತಾಲೂಕಿನ ಕಿರುಗಾವಲು ವ್ಯವಸಾಯ ಪತ್ತಿನ ಸಂಘ ೧೯೧೨ರಲ್ಲಿ, ಕೃಷ್ಣರಾಜಸಾಗರದ ಗ್ರಾಹಕರ ಸಹಕಾರಿ ಸಂಘ ೧೯೧೨ರಲ್ಲಿ, ಮಡುವಿನಕೋಡಿ (ಕೆ.ಆರ್.ಪೇಟೆ ತಾ.) ವ್ಯವಸಾಯ ಪತ್ತಿನ ಸಂಘ ೧೯೧೪ರಲ್ಲಿ, ಹೊಸಹೊಳಲಿನ (ಕೆ.ಆರ್.ಪೇಟೆ ತಾ.) ಶ್ರೀ ಲಕ್ಷ್ಮೀನಾರಾಯಣ ಹತ್ತಿ ಮತ್ತು ರೇಷ್ಮೆ ನೇಕಾರರ ಸಹಕಾರಿ ಸಂಘ ೧೯೧೪ರಲ್ಲಿ, ಸಂತೇಬಾಚಹಳ್ಳಿ (ಕೆ.ಆರ್.ಪೇಟೆ ತಾ.) ವ್ಯವಸಾಯ ಪತ್ತಿನ ಸಹಕಾರಿ ಸಂಘ ೧೯೧೪ರಲ್ಲಿ, ಕೊಪ್ಪ (ಮದ್ದೂರು ತಾ.) ವರಲಕ್ಷ್ಮಿ ವ್ಯವಸಾಯೇತರ ಪತ್ತಿನ ಸಹಕಾರಿ ಸಂಘ ೧೯೧೫ರಲ್ಲಿ, ಮಂಡ್ಯ ನಗರ ಸಹಕಾರಿ ಸಂಘ ೧೯೧೫ರಲ್ಲಿ, ಮಳವಳ್ಳಿ ಗಂಗಾಪರಮೇಶ್ವರಿ ಬಳಕೆದಾರರ ಸಹಕಾರಿ ಸಂಘ ೧೯೧೫ರಲ್ಲಿ, ಶ್ರೀ ಲಕ್ಷ್ಮೀಜನಾರ್ಧನ ಬಾಲಕಿಯರ ಪ್ರೌಢಶಾಲಾ ಗ್ರಾಹಕರ ಸಹಕಾರಿ ಸಂಘ, ಮಂಡ್ಯ ೧೯೧೫ರಲ್ಲಿ, ನೆಲಮನೆ (ಪಾಂಡವಪುರ ತಾ.) ವ್ಯವಸಾಯ ಪತ್ತಿನ ಸಹಕಾರಿ ಸಂಘ ೧೯೧೮ರಲ್ಲಿ ಹೀಗೆ ನಾನಾ ಬಗೆಯ ಸಹಕಾರ ಸಂಘಗಳು ಜಿಲ್ಲೆಯಾದ್ಯಂತ ಸ್ಥಾಪನೆಗೊಂಡವು.

೧೯೦೮ರಲ್ಲಿ ಬೆಂಗಳೂರು ಕೇಂದ್ರ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿ, ಮೈಸೂರು ಸಂಸ್ಥಾನದ ಎಲ್ಲಾ ಸದಸ್ಯ ಸಹಕಾರಿ ಸಂಘಗಳ ಮೂಲಕ ರೈತರಿಗೆ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಈ ಬ್ಯಾಂಕು ವ್ಯಕ್ತಿ ಸದಸ್ಯರಿಗೂ ಸಾಲ ಸೌಲಭ್ಯ ನೀಡುವ ಅವಕಾಶ ಪಡೆದಿತ್ತು. ೧೯೧೫ರಲ್ಲಿ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಸ್ಥಾಪಿಸಲಾಗಿ, ಬೆಂಗಳೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಕೇಂದ್ರ ಬ್ಯಾಂಕಿನ ವ್ಯಾಪ್ತಿಗೂ, ಮೈಸೂರೂ ಸೇರಿದಂತೆ ಉಳಿದ ಜಿಲ್ಲೆಗಳನ್ನು ಪ್ರಾಂತೀಯ ಬ್ಯಾಂಕಿನ ವ್ಯಾಪ್ತಿಗೆ ಒಳಪಡಿಸಲಾಯಿತು. ೧೯೧೨–೧೩ರಲ್ಲಿ ಒಂದು ಅಥವಾ ಎರಡು ತಾಲೂಕುಗಳ ಕಾರ್ಯಕ್ಷೇತ್ರವನ್ನು ಹೊಂದಿದಂತೆ 'ಸಂಯುಕ್ತ ಬ್ಯಾಂಕಿಂಗ್ ಯೂನಿಯನ್'ನಂತಹ ಸಣ್ಣಸಣ್ಣ ಕೇಂದ್ರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಇವು ಹಣ (ಸಾಲ) ಪೂರೈಸುವ ಬ್ಯಾಂಕು ಮತ್ತು ಪ್ರಾಥಮಿಕ ಸಹಕಾರಿ ಸಂಘಗಳ ಮಧ್ಯಸ್ಥಿಕೆಯ ಸಂಸ್ಥೆಗಳಂತೆ ಕಾರ್ಯನಿರ್ವಹಿಸುತ್ತಿದ್ದುವಲ್ಲದೆ, ಸಂಘಗಳ ಮೇಲ್ವಿಚಾರಣೆಯ ಕಾರ್ಯವನ್ನು ಕೈಗೊಳ್ಳುತ್ತಿದ್ದವು. ಸೀಮಿತ ಕಾರ್ಯವ್ಯಾಪ್ತಿಯಿಂದಾಗಿ ಈ

ಯೂನಿಯನ್ನುಗಳು ಪ್ರಗತಿ ಹೊಂದದ ಕಾರಣ, ಇವುಗಳ ಬದಲಾಗಿ ಜಿಲ್ಲಾ ಕೇಂದ್ರ ಬ್ಯಾಂಕುಗಳನ್ನು ಜಿಲ್ಲೆಯ ಕಾರ್ಯಕ್ಷೇತ್ರವನ್ನು ಹೊಂದಿದಂತೆ ಸ್ಥಾಪಿಸಲಾಯಿತು. ಮೈಸೂರು ಜಿಲ್ಲೆಯ ಜಿಲ್ಲಾ ಬ್ಯಾಂಕು ಸೇರಿದಂತೆ ಐದು ಜಿಲ್ಲಾ ಬ್ಯಾಂಕುಗಳು ೧೯೨೦-೨೧ರ ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಈ ಜಿಲ್ಲಾ ಕೇಂದ್ರ ಬ್ಯಾಂಕುಗಳೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸದೆ ಮುಂದೆ ಒಂದೊಂದಾಗಿ ಅವಸಾನವಾದವು.

ಮೈಸೂರಿನ ೧೯೦೫ರ ಸಹಕಾರಿ ಕಾನೂನು ಅನುಷ್ಠಾನಕ್ಕೆ ಬಂದ ಕೆಲವು ವರ್ಷಗಳಲ್ಲೇ ಆ ಕಾನೂನಿನಲ್ಲಿನ ಹಲವು ಲೋಪದೋಷಗಳು ಅನುಭವಕ್ಕೆ ಬಂದವು. ಕ್ರಮೇಣ ಅವುಗಳನ್ನು ಸರಿಪಡಿಸಿ ೧೯೧೮ರಲ್ಲಿ ಹೊಸದೊಂದು ಸಹಕಾರಿ ಕಾನೂನನ್ನು ಜಾರಿಗೆ ತರಲಾಯಿತು. ಆ ಕಾನೂನಿನನ್ವಯ ತಾಲೂಕು ಮಟ್ಟದ ಯೂನಿಯನ್‌ಗಳು, ಜಿಲ್ಲಾ ಮಟ್ಟದ ಸಹಕಾರಿ ಬ್ಯಾಂಕುಗಳಂತಹ ಕೇಂದ್ರ ಸಹಕಾರಿ ಸಂಸ್ಥೆಗಳ ರಚನೆಗೆ ಮತ್ತು ಸಹಕಾರಿ ಸಂಘಗಳ ಸಹಾಯಕ ನಿಬಂಧಕರನ್ನು ನೇಮಿಸುವ ಅವಕಾಶ ದೊರೆಯಿತು. ಇದರಿಂದಾಗಿ ಗ್ರಾಮೀಣ ಸಹಕಾರಿ ಸಂಸ್ಥೆಗಳ ಸಂಘಟನೆ ಮತ್ತು ಅಭಿವೃದ್ಧಿಗೆ ಹೊಸ ಚಾಲನೆ ದೊರೆತಂತಾಯಿತು. ಸಹಕಾರ ಇಲಾಖೆಗೆ ಸಮರ್ಥ ಆಡಳಿತ ನೀಡುವ ಉದ್ದೇಶದಿಂದ ೧೯೧೮-೧೯ರಲ್ಲಿ ಮೈಸೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯನ್ನು ಮೈಸೂರಿನಲ್ಲಿ ತೆರೆಯಲಾಯಿತು.

ಪ್ರತಿಕೂಲ ಹಣದ ಪೇಟೆ ಹಾಗೂ ಪ್ರತಿಕೂಲ ಋತುಮಾನ ಪರಿಸ್ಥಿತಿಯ ಪರಿಣಾಮವಾಗಿ ೧೯೧೬-೧೭ರಲ್ಲಿ ಸಹಕಾರ ಸಂಘಗಳನ್ನು ಬಲಪಡಿಸುವ ಕಾರ್ಯವನ್ನು ಕೈಗೊಂಡ ಸಹಕಾರ ಇಲಾಖೆ ಮುಂದಿನ ಕೆಲ ವರ್ಷಗಳವರೆವಿಗೂ ಅದನ್ನು ಮುಂದುವರಿಸಿಕೊಂಡು ಬಂದಿತು.

ಸಹಕಾರ ಚಳವಳಿಯ ಪ್ರಗತಿಯನ್ನು ವಿಮರ್ಶಿಸಿ ಮುಂದಿನ ಬೆಳವಣಿಗೆಗೆ ಸಂಬಂಧಿಸಿದಂತೆ ರೀತಿನೀತಿಗಳನ್ನು ಸೂಚಿಸಲು ಸರಕಾರ ೧೯೨೦ರಲ್ಲಿ ಸಮಲ್‌ದಾಸ್ ಮೆಹತಾ ಸಮಿತಿಯನ್ನು ರಚಿಸಿತು. ಈ ಸಮಿತಿಯು ಸಲ್ಲಿಸಿದ ವರದಿಯನ್ವಯ ಸರ್ಕಾರ ೧೯೨೫ರಲ್ಲಿ ಸಾಲೇತರ ಸಹಕಾರ ಸಂಘಗಳ ಸ್ಥಾಪನೆಗೆ, ಅದರಲ್ಲೂ ಮುಖ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಸಂಘಟನೆಗೆ ಉತ್ತೇಜನ ನೀಡಿತು. ಅಂತೆಯೇ ರೈತರಿಗೆ ಋಣ ವಿಮೋಚನಾ ಸಾಲಗಳನ್ನು ದೊರಕಿಸುವ ಉದ್ದೇಶದಿಂದ ೧೯೨೯ರಲ್ಲಿ ಭೂ ಅಡಮಾನ ಬ್ಯಾಂಕನ್ನು ಸಹಕಾರ ತಳಹದಿಯ ಮೇಲೆ ಸ್ಥಾಪಿಸಲಾಯಿತು. ಸಮಿತಿಯ ಶಿಫಾರಸ್ಸಿನ ಮೇರೆಗೆ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಅಪೆಕ್ಸ್ ಬ್ಯಾಂಕಾಗಿ ಪುನರ್‌ರಚಿಸಲಾಯಿತು. ಅಲ್ಲದೆ ಸಹಕಾರ ತತ್ವದ ಪ್ರಚಾರಕ್ಕಾಗಿ ಪ್ರಾಂತೀಯ ಸಹಕಾರಿ ಪ್ರಚಾರ ಸಂಸ್ಥೆಯನ್ನೂ ಸ್ಥಾಪಿಸಲಾಯಿತು.

ಸಹಕಾರ ಚಳವಳಿಯ ಪುನಶ್ಚೇತನಕ್ಕಾಗಿ ಕೈಗೊಳ್ಳಲಾದ ಕ್ರಮಗಳ ಫಲವಾಗಿ ೧೯೨೫-೨೬ರ ನಂತರ ಸಹಕಾರ ಸಂಘಗಳು ಚೇತರಿಸಿಕೊಂಡವು. ಪ್ರಾಂತೀಯ ಸಹಕಾರಿ ಪ್ರಚಾರ ಸಂಸ್ಥೆಯೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಪ್ರಾರಂಭಿಸಿತು. ಕೇವಲ ಸಾಲವನ್ನು ಮಾತ್ರವಲ್ಲದೇ ರೈತರಿಗೆ ಬೇಕಾಗುವ ಸುಧಾರಿತ ಕೃಷಿ ಉಪಕರಣ, ಬಿತ್ತನೆ ಬೀಜ ಹಾಗೂ ಗೊಬ್ಬರ ವಿತರಣೆ ಕಾರ್ಯಗಳನ್ನು ಕೈಗೊಳ್ಳುವಂತೆ ವ್ಯವಸಾಯ ಸಂಘಗಳಿಗೆ ೧೯೨೮-೨೯ರಲ್ಲಿ ಪ್ರೋತ್ಸಾಹಿಸಲಾಯಿತು.

೧೯೨೯-೩೦ರಲ್ಲಿ ತಲೆದೋರಿದ ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಹಕಾರಿ ಆಂದೋಲನದ ಪ್ರಗತಿಯು ಕುಂಠಿತವಾಯಿತು. ವ್ಯವಸಾಯ ಹುಟ್ಟುವಳಿಗಳ ಬೆಲೆ ಕುಸಿಯಿತು. ರೈತರು ಸಾಲ ತೀರಿಸುವ ಸಾಮರ್ಥ್ಯವನ್ನು ಕಳೆದುಕೊಂಡರು. ಸಾಲ ತೀರಿಸುವ ಸಾಮರ್ಥ್ಯದ ಅಭಾವದಿಂದಾಗಿ ಸಹಕಾರಿ ಸಂಘಗಳಿಂದ ರೈತರು ಪಡೆದ ಸಾಲ ತೀರದೆ ಹೋಯಿತು. ಸಂಘಗಳಲ್ಲೆಲ್ಲ ಸುಸ್ತಿ ಬಾಕಿಯು ಹೆಚ್ಚಿತು. ಕೆಲವು ಸಂಘಗಳು ಮುಚ್ಚಿದವು. ಸಹಕಾರ

ಚಳವಳಿಯ ಪುನಶ್ಚೇತನಕ್ಕಾಗಿ ಸರ್ಕಾರ ೧೯೩೫ರಲ್ಲಿ ಕೆ.ಎಸ್.ಚಂದ್ರಶೇಖರ ಅಯ್ಯರ್ ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರಸ್ಸುಗಳನ್ವಯ ಸಹಕಾರಿ ಚಳವಳಿಯ ಪುನಶ್ಚೇತನಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಅಷ್ಟರಲ್ಲೇ (೧೯೩೯) ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾದ ಕಾರಣ, ಕೃಷಿ ಉತ್ಪನ್ನಗಳ ಬೆಲೆಗಳು ಏರತೊಡಗಿದವು. ಈ ಕಾರಣದಿಂದಾಗಿ ಯುದ್ಧಕಾಲದಲ್ಲಿ ಮತ್ತು ಯುದ್ಧಾನಂತರದ ದಿನಗಳಲ್ಲಿ ರೈತರ ಆರ್ಥಿಕ ಸ್ಥಿತಿ ಸುಧಾರಿಸಿತು. ರೈತರು ಸಹಕಾರಿ ಸಾಲ ತೀರಿಸಲು ಸಮರ್ಥರಾದ ಕಾರಣ ಪ್ರಾಥಮಿಕ ವ್ಯವಸಾಯ ಸಂಘಗಳ ಸ್ಥಿತಿಯೂ ಸುಧಾರಿಸುವಂತಾಯಿತು. ಇದೇ ಅವಧಿಯಲ್ಲಿ ಏರುತ್ತಿರುವ ಬೆಲೆಗಳನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಗ್ರಾಹಕರ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದವು.

೧೯೪೫-೪೬ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ೧೪೬ ಸಹಕಾರ ಸಂಘಗಳಿದ್ದವು. ಅವುಗಳು ಹೊಂದಿದ್ದ ಸದಸ್ಯರ ಸಂಖ್ಯೆ ೧೦,೦೩೮ ಮತ್ತು ದುಡಿಯುವ ಬಂಡವಾಳ ರೂ. ೮,೪೫,೮೬೫ ಆಗಿತ್ತು. ಸಹಕಾರ ಸಂಘಗಳು ಒಟ್ಟು ೩೪,೨೯,೮೬೭ ರೂ.ಮೌಲ್ಯದ ವ್ಯವಹಾರವನ್ನು ಕೈಗೊಂಡಿದ್ದವು. ಸ್ವಾತಂತ್ರ್ಯೋತ್ತರದ ದಶಕಗಳಲ್ಲಿ ರಚನೆಗೊಂಡ ಜನಪ್ರಿಯ ಸರ್ಕಾರಗಳ ಅನೇಕ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸಹಕಾರ ಚಳವಳಿಯು ಜನತೆಯ ಚಳವಳಿಯಾಗಿ ರೂಪುಗೊಂಡು ಮುಂದುವರಿಯಿತು. ಸರ್ಕಾರದ ಬಂಡವಾಳ ಮತ್ತು ಇತರ ನೆರವಿನ ಪ್ರಮಾಣ ವರ್ಧಿಸಿದಂತೆ ಆಡಳಿತದಲ್ಲಿ ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಸೂಕ್ತ ಬದಲಾವಣೆಗಳನ್ನು ಮಾಡಲಾಯಿತು. ಸರ್ಕಾರದ ಬದಲಾದ ಧೋರಣೆಯಂತೆ, ೧೯೪೯ರಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಜೊತೆಗೆ, ಆ ಮೊದಲೇ ಇದ್ದ ವ್ಯವಸಾಯ ಪತ್ತಿನ ಸಂಘಗಳನ್ನು ವಿವಿಧೋದ್ದೇಶ ಸಂಘಗಳನ್ನಾಗಿ ಪರಿವರ್ತಿಸಲು ಹೆಚ್ಚಿನ ಆದ್ಯತೆ ನೀಡಲಾಯಿತು. ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಅನೇಕ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ೧೯೫೧ರಿಂದ ಪ್ರಾರಂಭವಾದ ಆರ್ಥಿಕ ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಅದರ ಅನ್ವಯ ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಮತ್ತು ಸಾಲದ ವ್ಯವಹಾರ ಮಾಡದ ಸಹಕಾರ ಸಂಘಗಳನ್ನು ಸರ್ಕಾರದ ಸಕ್ರಿಯ ಸಹಾಯದಿಂದ ಅಭಿವೃದ್ಧಿ ಪಡಿಸಲಾಯಿತು. ಇದರಿಂದ ಮುಂದಿನ ದಶಕಗಳಲ್ಲಿ ಸಹಕಾರಿ ಆಂದೋಲನವು ಭೌಗೋಳಿಕವಾಗಿ ಹೆಚ್ಚು ವ್ಯಾಪಿಸಿಕೊಂಡಿತಲ್ಲದೇ ಗುಣಾತ್ಮಕವಾಗಿ ಬೆಳೆಯಲು ಸಹಾಯಕವಾಯಿತು. ಸರ್ಕಾರದ ಪ್ರೋತ್ಸಾಹವೂ ಹೆಚ್ಚುತ್ತಾ ಹೋಯಿತು. ಸಹಕಾರ ಸಂಘಗಳಿಗೆ ಅಲ್ಪಾವಧಿ ಬೆಳೆ ಸಾಲ ಮತ್ತು ಮಧ್ಯಮಾವಧಿ ಸಾಲವನ್ನು ಒದಗಿಸುವ ಉದ್ದೇಶದಿಂದ ಪ್ರಥಮ ಬಾರಿಗೆ ಜಿಲ್ಲೆಯ ಕಾರ್ಯಕ್ಷೇತ್ರವನ್ನು ಹೊಂದಿದಂತೆ ಜಿಲ್ಲಾ ಕೇಂದ್ರ ಬ್ಯಾಂಕನ್ನು ೧೯೫೩ರ ಅಂತ್ಯದಲ್ಲಿ ಮಂಡ್ಯದಲ್ಲಿ ಸಂಘಟಿಸಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ (೧೯೬೧) ಮಂಡ್ಯ ಜಿಲ್ಲೆಯಲ್ಲಿ ೫೨೮ ವಿವಿಧ ಬಗೆಯ ಸಹಕಾರ ಸಂಘಗಳಿದ್ದವು. ಅವು ಹೊಂದಿದ್ದ ಸ್ವಂತ ಬಂಡವಾಳ ಮತ್ತು ದುಡಿಯುವ ಬಂಡವಾಳ ಕ್ರಮವಾಗಿ ೧೩೯ ಲಕ್ಷ ಮತ್ತು ೫೧೨ ಲಕ್ಷ ರೂ ಆಗಿತ್ತು. ಆ ವೇಳೆಗೆ ೪೦ ಪ್ರಾಥಮಿಕ ದೊಡ್ಡ ಪ್ರಮಾಣದ ಸಹಕಾರ ಸಂಘಗಳು ಜಿಲ್ಲೆಯ ವಿವಿಧೆಡೆ ಸ್ಥಾಪಿಸಲ್ಪಟ್ಟಿದ್ದವು. ಜಿಲ್ಲೆಯ ಪ್ರತೀ ತಾಲೂಕಿಗೊಂದರಂತೆ ಏಳು ಭೂ ಅಡಮಾನ ಬ್ಯಾಂಕುಗಳು ಸಹ ಈ ಅವಧಿಯಲ್ಲಿದ್ದವು (ಈಗ ಈ ಬ್ಯಾಂಕುಗಳನ್ನು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳೆಂದು ಕರೆಯಲಾಗುತ್ತಿದೆ). ಜಿಲ್ಲೆಯ ೧,೪೬೪ ಹಳ್ಳಿಗಳ ಪೈಕಿ ೧,೩೩೮ (ಶೇ.೯೧) ಹಳ್ಳಿಗಳನ್ನು ಕೃಷಿ ಪತ್ತಿನ ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಡಿಸಲಾಯಿತು. ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೬೫,೧೦೮ ಇದ್ದಿತು. ಈ ಸಹಕಾರ ಸಂಘಗಳಿಂದ ಶೇ.೪೧.೪ ರಷ್ಟು ಗ್ರಾಮಾಂತರ ರೈತ ಕುಟುಂಬದವರು ಪ್ರಯೋಜನ ಪಡೆದಿದ್ದರು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಹೊಸ ಸಹಕಾರ ನೀತಿಯನ್ವಯ ಸೇವಾ ಸಹಕಾರ ಸಂಘಗಳ ಯುಗ ಪ್ರಾರಂಭವಾದ ಕಾರಣ, ೧೯೫೯-೬೦ ರಿಂದ ವಿವಿಧೋದ್ದೇಶ/ದೊಡ್ಡ ಪ್ರಮಾಣದ ಸಹಕಾರ ಸಂಘಗಳ ಸಂಘಟನಾ ಕಾರ್ಯವನ್ನು

ನಿಲ್ಲಿಸಿ, ಜಿಲ್ಲೆಯಾದ್ಯಂತ ಸೇವಾ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಅದರಂತೆ ಮಂಡ್ಯ ಜಿಲ್ಲೆಯಾದ್ಯಂತ ೧೮೧ ಸೇವಾ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಇದೇ ಅವಧಿಯಲ್ಲಿ ತಾಲೂಕು ಮಟ್ಟದ ಪ್ರಾಥಮಿಕ ವ್ಯವಸಾಯ ಹುಟ್ಟುವಳಿ ಮಾರಾಟ ಸಂಘಗಳನ್ನು ಸ್ಥಾಪಿಸಲಾಯಿತು. ವ್ಯವಸಾಯ ಹುಟ್ಟುವಳಿ ಮತ್ತು ಸಾಗುವಳಿ ವಸ್ತುಗಳ (ಬೀಜ ಗೊಬ್ಬರ, ಕ್ರಿಮಿನಾಶಕ, ವ್ಯವಸಾಯೋಪಕರಣ) ಶೇಖರಣಾ ಸೌಲಭ್ಯ ಕಲ್ಪಿಸಲು ಹಳ್ಳಿಯ ಸಂಘಗಳ ಮತ್ತು ಮಾರಾಟ ಸಂಘಗಳ ಗೋದಾಮುಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಜಿಲ್ಲೆಯಲ್ಲಿ ೩೦ ಗೋದಾಮುಗಳ ನಿರ್ಮಾಣಕ್ಕಾಗಿ ಸರ್ಕಾರ ಮೂರು ಲಕ್ಷ ರೂ.ಗಳ ಧನಸಹಾಯ ನೀಡಿದ್ದಲ್ಲದೇ ೨೩ ಗ್ರಾಮಾಂತರ ಗೋದಾಮುಗಳ ನಿರ್ಮಾಣಕ್ಕಾಗಿ ಸಾಲ ಮತ್ತು ಸಹಾಯಧನದ ರೂಪದಲ್ಲಿ ೨.೩೦ ಲಕ್ಷ ರೂ.ಗಳನ್ನು ನೀಡಿತು. ೧೬೧ ಸೇವಾ ಸಹಕಾರ ಸಂಘಗಳು ವ್ಯವಸಾಯಕ್ಕೆ ಸಾಲ ಒದಗಿಸುವುದರ ಜೊತೆಗೆ ಗೊಬ್ಬರ, ವ್ಯವಸಾಯೋಪಕರಣಗಳ ಹಂಚಿಕೆ ಕಾರ್ಯವನ್ನು ಕೈಗೊಂಡವು. ಈ ಯೋಜನಾ ಆವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ೨೨ ನೇಕಾರರ ಸಹಕಾರ ಸಂಘಗಳು ಮತ್ತು ೩೩ ಕೈಗಾರಿಕಾ ಸಹಕಾರ ಸಂಘಗಳಿದ್ದವು. ೬೪ ಸದಸ್ಯರನ್ನೊಳಗೊಂಡ ಒಂದು ಬೇಸಾಯ ಸಹಕಾರ ಸಂಘವೂ (ಬೆಳ್ಳಿಬೆಟ್ಟದ ಕಾವಲ್) ಜಿಲ್ಲೆಯಲ್ಲಿತ್ತು. ಜಿಲ್ಲೆಯಲ್ಲಿನ ಇನ್ನಿತರ ಸಂಘಗಳಾದ ಕಬ್ಬು ಬೆಳೆಗಾರರ ಸಹಕಾರ ಸಂಘಗಳು, ಸಹಕಾರಿ ಮಾರಾಟ ಸಂಘಗಳು, ಮೀನುಗಾರಿಕೆ ಸಹಕಾರ ಸಂಘಗಳು, ಮಂಡ್ಯ ಮತ್ತು ಬೆಳಕವಾಡಿಗಳಲ್ಲಿನ ಮಹಿಳಾ ಸಹಕಾರ ಸಂಘಗಳು ಇವು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದವು. ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿದಂತೆ ೧೯೬೦ರಲ್ಲಿ ಮಂಡ್ಯ ಜಿಲ್ಲಾ ಸಹಕಾರ ಯೂನಿಯನ್ ಮತ್ತು ೧೯೬೪ರಲ್ಲಿ ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ಇವುಗಳನ್ನು ಸ್ಥಾಪಿಸಲಾಯಿತು. ಸಹಕಾರಿ ಕ್ಷೇತ್ರದಲ್ಲಿ ಜಿಲ್ಲೆಯ ಮೊದಲ ಸಕ್ಕರೆ ಕಾರ್ಖಾನೆ ೧೯೫೫ರಲ್ಲಿ ಪಾಂಡವಪುರದಲ್ಲಿ ನೋಂದಣಿಯಾಯಿತು.

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಹಕಾರಿ ಸಂಘಗಳ ಸಂಖ್ಯೆ, ಸದಸ್ಯತ್ವ, ವೃದ್ಧಿಸುತ್ತಿರುವ ಸರ್ಕಾರದ ಪಾಲು ಬಂಡವಾಳ, ಸಹಾಯಧನ, ಇದರೊಂದಿಗೆ ಬೆಳೆಯುತ್ತಿರುವ ಅವ್ಯವಹಾರದ ಪ್ರಮಾಣ, ಮುಂತಾದವುಗಳನ್ನು ಗುರುತಿಸಿ, ಆಡಳಿತದಲ್ಲಿ ದಕ್ಷತೆ ಹಾಗೂ ವಿಕೇಂದ್ರೀಕರಣ ಸಾಧಿಸಲು, ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯನ್ನು (ಜಿಲ್ಲಾ ಕಚೇರಿ) ಮಂಡ್ಯದಲ್ಲಿ ೧೯೬೨ರಲ್ಲಿ ಸ್ಥಾಪಿಸಲಾಯಿತು.

೧೯೬೫ರ ಜೂನ್ ಅಂತ್ಯಕ್ಕೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಸಹಕಾರ ಸಂಘಗಳ ಸಂಖ್ಯೆ ೬೬೨ ಇದ್ದಿತು. ಅವುಗಳ ವಿವರಗಳು ಮುಂದಿನಂತಿದೆ: ಎರಡು ಕೇಂದ್ರ ಹಣಕಾಸು ಸಂಸ್ಥೆಗಳು, ಹತ್ತು ಮಾರುಕಟ್ಟೆ ಸಂಘಗಳು, ೩೯೪ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (೨೬ ದೊಡ್ಡ ಪ್ರಮಾಣದ ಸಂಘಗಳು, ೨೮೫ ಸೇವಾ ಸಂಘಗಳು, ೮೩ ಸಣ್ಣ ಪ್ರಮಾಣದ ಸಂಘಗಳು), ೪೬ ವ್ಯವಸಾಯೇತರ ಪತ್ತಿನ ಸಂಘಗಳು, ೪೯ ಬಳಕೆದಾರರ ಸಂಘಗಳು, ೨೯ ಗೃಹ ನಿರ್ಮಾಣ ಸಂಘಗಳು, ಎಂಟು ಸೂಪರ್‌ವೈಸಿಂಗ್ ಯೂನಿಯನ್‌ಗಳು, ಏಳು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ೨೫ ನೇಕಾರರ ಸಂಘಗಳು, ೬೧ ಕೈಗಾರಿಕಾ ಸಹಕಾರ ಸಂಘಗಳು ಮತ್ತು ಇತರ ಬಗೆಯ ೩೧ ಸಹಕಾರ ಸಂಘಗಳಾಗಿದ್ದವು. ೬೬೨ ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೧,೬೮,೦೩೭ ಆಗಿದ್ದಿತು. ಷೇರು ಬಂಡವಾಳ ೧,೯೪.೧೮ ಲಕ್ಷ ರೂ., ಕಾಯ್ದಿಟ್ಟ ನಿಧಿಗಳು ೧೫೪.೬೩ ಲಕ್ಷ ರೂ., ಠೇವಣಿಗಳು ೮೫.೪೪ ಲಕ್ಷ ರೂ. ಆಗಿದ್ದಿತು. ೧೯೬೫ರ ಜೂನ್ ಅಂತ್ಯಕ್ಕೆ ಪತ್ತಿನ ಸಂಘಗಳು ಸದಸ್ಯರಿಗೆ ನೀಡಿದ ಸಾಲದ ಮೊತ್ತ ೪೧೧.೫೭ ಲಕ್ಷ ರೂ. ಮತ್ತು ಅವುಗಳ ಸಾಲ ವಸೂಲಾತಿ ಮೊತ್ತವು ೪೯೯.೦೬ ಲಕ್ಷ ರೂ. ಆಗಿದ್ದಿತು. ಸಹಕಾರ ಸಂಘಗಳು ೮೧೮.೮೦ ಲಕ್ಷ ರೂ. ಮೌಲ್ಯದ ವ್ಯಾಪಾರ ವಹಿವಾಟನ್ನು ನಡೆಸಿದ್ದವು. ೧೯೬೫ರ ಜೂನ್ ಅಂತ್ಯಕ್ಕೆ ೨೮೫ ಸೇವಾ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೬೬,೦೦೦ವಿದ್ದು, ಈ ಸಂಘಗಳು ೧೯೯.೦೭ ಲಕ್ಷ ರೂ. ವ್ಯಾಪಾರ ವಹಿವಾಟನ್ನು ಮಾಡಿದ್ದವು. ಆ ವೇಳೆಗೆ ೧೫ ಬೇಸಾಯ (ಫಾರ್ಮಿಂಗ್) ಸಂಘಗಳು, ೧೪ ಹಾಲು ಪೂರೈಕೆ, ಎರಡು ಮೀನುಗಾರಿಕೆ ಮತ್ತು ಎರಡು ತೋಟಗಾರಿಕೆ

ಸಂಘಗಳು ಜಿಲ್ಲೆಯಲ್ಲಿದ್ದವು. ಜಿಲ್ಲೆಯಲ್ಲಿನ ಹತ್ತು ಮಾರುಕಟ್ಟೆ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ ಆರು ಸಂಘಗಳು ಅಕ್ಕಿ ಗಿರಣಿಗಳನ್ನು ಸ್ಥಾಪಿಸಿದ್ದವು. ಮಂಡ್ಯದಲ್ಲಿನ ರೈತರ ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘವು ವ್ಯವಸಾಯೋಪಕರಣಗಳ ತಯಾರಿಕಾ ಘಟಕವನ್ನು ಸ್ಥಾಪಿಸಿ, ರೈತರಿಗೆ ಸುಧಾರಿತ ವ್ಯವಸಾಯೋಪಕರಣಗಳನ್ನು ನ್ಯಾಯಬೆಲೆಯಲ್ಲಿ ಒದಗಿಸುವ ವ್ಯವಸ್ಥೆಯನ್ನು ಕೈಗೊಂಡಿತ್ತು. ಕೋಷ್ಟಕದಲ್ಲಿ ೬.೧೧ರಲ್ಲಿ ೧೯೭೧ರ ಅಂತ್ಯದಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿನ ಸಹಕಾರ ಸಂಘಗಳ ವಿವರಗಳನ್ನು ನೀಡಲಾಗಿದೆ.

ಜಿಲ್ಲೆಯಲ್ಲಿ ೧೯೭೬ರ ಜೂನ್ ಅಂತ್ಯಕ್ಕೆ ಒಟ್ಟು ೮೧೬ ಸಹಕಾರ ಸಂಘಗಳಿದ್ದವು. ಅವುಗಳಲ್ಲಿ ೩೬೧ ಕೃಷಿ ಪತ್ತಿನ ಸಂಘಗಳು ಮತ್ತು ೪೫೫ ಕೃಷಿಯೇತರ ಸಹಕಾರ ಸಂಘಗಳಾಗಿದ್ದವು. ಎಲ್ಲಾ ಸಹಕಾರ ಸಂಘಗಳಲ್ಲಿನ ಸದಸ್ಯರ ಸಂಖ್ಯೆ ೨,೫೬,೦೦೦ ಆಗಿದ್ದಿತು. ಆ ವರ್ಷದಲ್ಲಿ ಕೃಷಿ ಕ್ಷೇತ್ರಕ್ಕೆ ಸಹಕಾರ ಸಂಘಗಳಿಂದ ವಿತರಿಸಲ್ಪಟ್ಟ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮೊತ್ತ ಕ್ರಮವಾಗಿ ೬೧೫.೪೦ ಲಕ್ಷ ರೂ., ೨೦.೪೩ ಲಕ್ಷ ರೂ. ಮತ್ತು ೧೩೫.೬೩ ಲಕ್ಷ ರೂ.ಗಳಾಗಿತ್ತು. ಕೃಷಿ ಪತ್ತಿನ ಸಂಘಗಳನ್ನು ಬಲಪಡಿಸುವ ಸಲುವಾಗಿ ಮತ್ತು ಅವುಗಳನ್ನು ನಿರ್ವಹಣಾ ಸಾಮರ್ಥ್ಯದ ಆರ್ಥಿಕ ಘಟಕಗಳನ್ನಾಗಿಸಲು ಸರ್ಕಾರ ೧೯೭೬ರಲ್ಲಿ ಹಲವಾರು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿತು. ಅನೇಕ ಸಹಕಾರ ಸಂಘಗಳನ್ನು ಮುಖ್ಯವಾಗಿ ಕೃಷಿ ಪತ್ತಿನ ಸಂಘಗಳನ್ನು ವಿಲೀನಗೊಳಿಸಿ ಅವುಗಳನ್ನು ಪುನರ್ರಚಿಸಿ ಹೆಚ್ಚು ಬಲಪಡಿಸಲಾಯಿತು. ಇದರಿಂದ ಆ ಸಂಘಗಳ ಸಂಖ್ಯೆ ಇಳಿಮುಖವಾಯಿತು. ಹೈನುಗಾರಿಕೆಗೆ ದೊರೆತ ಸರ್ಕಾರದ ಪ್ರೋತ್ಸಾಹದಿಂದ ಜಿಲ್ಲೆಯಲ್ಲಿ ೧೯೭೫-೭೬ರ ನಂತರದ ವರ್ಷಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಗೊಂಡವು. ೧೯೮೭ರಲ್ಲಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು ಗೆಜ್ಜಲಗೆರೆಯಲ್ಲಿ ಸ್ಥಾಪಿಸಿ, ಆವರೆಗೆ ಮೈಸೂರು ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿದ್ದ ಜಿಲ್ಲೆಯ ಹಾಲು ಉತ್ಪಾಕರ ಸಹಕಾರ ಸಂಘಗಳನ್ನು ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಗೆ ಸೇರಿಸಲಾಯಿತು. ಜಿಲ್ಲೆಯಲ್ಲಿ ೨೦೦೧-೦೨ರಲ್ಲಿ ವಿವಿಧ ಬಗೆಯ ಒಟ್ಟು ೧,೪೪೯ ಸಹಕಾರ ಸಂಘಗಳಿದ್ದವು. ವರ್ಗವಾರು ಸಹಕಾರ ಸಂಘಗಳ ವಿವರ ಈ ಮುಂದಿನಂತಿತ್ತು. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು- ಒಂದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು-೨೨೫; ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು- ಏಳು; ಸಹಕಾರ ಪಟ್ಟಣ ಬ್ಯಾಂಕುಗಳು- ಮೂರು; ನೌಕರರ ಮತ್ತು ಇತರೆ ಪತ್ತಿನ ಸಹಕಾರ ಸಂಘಗಳು-೪೩; ಮಾರುಕಟ್ಟೆ ಸಂಘಗಳು- ಏಳು; ಇತರೆ ವಿಶೇಷ ಉತ್ಪನ್ನ ಮಾರಾಟ ಸಂಘಗಳು-ನಾಲ್ಕು ; ಸಂಸ್ಕರಣ ಸಹಕಾರ ಸಂಘ- ಒಂದು; ಬೇಸಾಯ ಸಹಕಾರ ಸಂಘಗಳು- ಐದು; ಹಾಲು ಪೂರೈಕೆ ಸಹಕಾರ ಸಂಘಗಳು-೭೨೨; ನೇಕಾರರ ಸಹಕಾರ ಸಂಘಗಳು-೧೮ ; ಬಳಕೆದಾರರ ಸಹಕಾರ ಸಂಘಗಳು-೬೯; ಗೃಹ ನಿರ್ಮಾಣ ಸಹಕಾರ ಸಂಘಗಳು- ೩೫ ; ನೀರಾವರಿ ಸಹಕಾರ ಸಂಘಗಳು (ನೀರು ಬಳಕೆದಾರರ ಸಹಕಾರ ಸಂಘಗಳೂ ಸೇರಿದಂತೆ)-ಆರು ; ಕೈಗಾರಿಕಾ ಸಹಕಾರ ಸಂಘಗಳು-೫೪; ಇತರೆ ಸಹಕಾರ ಸಂಘಗಳು-೨೪೯.

ಮಂಡ್ಯ ಜಿಲ್ಲೆಯು ೧೯೮೦-೮೧ ರಿಂದ ೨೦೦೧-೦೨ರವರೆಗೆ ಸಹಕಾರಿ ಕ್ಷೇತ್ರದಲ್ಲಿ ಒಟ್ಟಾರೆ ಸಾಧಿಸಿದ ಪ್ರಗತಿ ಮತ್ತು ಜಿಲ್ಲೆಯಲ್ಲಿನ ಪ್ರಮುಖ ವರ್ಗದ ಸಹಕಾರ ಸಂಘಗಳ ವಿವರವನ್ನು ಮುಂದಿನ ಪುಟಗಳಲ್ಲಿ ತಿಳಿಸಲಾಗಿದೆ.

**ಕೋಷ್ಟಕ ೬.೧೦ ೧೯೭೧ರ ಜೂನ್ ಅಂತ್ಯದಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿನ ಸಹಕಾರ ಸಂಘಗಳ ವಿವರ**

| ವಿವರ | ಸಂಘಗಳು (ಸಂಖ್ಯೆ) | ಸದಸ್ಯರು (ಸಾವಿರ) | ಷೇರು ಬಂಡವಾಳ (ಲಕ್ಷ ರೂ.) | ಠೇವಣಿ ಉತ್ಪಾದನೆ (ಲಕ್ಷ ರೂ.) | ದುಡಿಯುವ ಬಂಡವಾಳ (ಲಕ್ಷ ರೂ.) | ಮಂಜೂರಾದ ಸಾಲ (ಲಕ್ಷ ರೂ.) | ಖರೀದಿ/ (ಲಕ್ಷ ರೂ.) | ಮಾರಾಟ (ಲಕ್ಷ ರೂ.) | ಲಾಭ (ಲಕ್ಷ ರೂ.) |
|---|---|---|---|---|---|---|---|---|---|
| ಪ್ರಾಥಮಿಕ ಕೃಷಿ ಸಾಲ ಸಂಘಗಳು | ೩೬೭ | ೧೧೯ | ೬೯.೫ | ೨.೬ | ೩೭೫.೨ | ೨೮೦.೭ | – | – | ೧೨.೧ |
| ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು | ೭ | ೧೬ | ೧೨.೫ | – | ೧೮೨.೪ | ೩೫.೩ | – | | ೦.೮ |
| ವ್ಯವಸಾಯೇತರ ಸಾಲ ಸಂಘಗಳು | ೩೦ | ೭ | ೪.೯ | ೩.೮ | ೧೪.೪ | ೧೨.೪ | – | – | ೦.೫ |
| ಗೃಹ ನಿರ್ಮಾಣ ಸಂಘಗಳು | ೨೬ | ೮ | ೩.೧ | – | ೩೨.೧ | – | – | – | ೦.೨ |
| ಪ್ರಾಥಮಿಕ ಮಾರಾಟ ಮತ್ತು ರೂಪಾಂತರ ಸಂಘಗಳು | ೧೪ | ೭ | ೩೧.೮ | – | ೨೮೭.೫ | – | – | – | ೫.೦ |
| ಪ್ರಾಥಮಿಕ ಗ್ರಾಹಕರ ಸ್ಟೋರುಗಳು | ೪೮ | ೧೮ | ೨.೩ | – | ೫.೫ | – | – | ೨೨.೧ | ೦.೪ |
| ಇತರ ಕೈಗಾರಿಕಾ ಸಂಘಗಳು | ೪೮ | ೧೬ | ೪.೫ | – | ೧೯.೫ | – | ೦.೮ | ೦.೭ | ೦.೧ |
| ಬೇಸಾಯ ಸಂಘಗಳು | ೨೧ | ೦.೭ | ೦.೬ | – | ೨.೯ | – | – | – | ೦.೦೧ |
| ಹಾಲು ಪೂರೈಕೆ ಸಂಘಗಳು | ೧೪ | ೧ | ೩.೪ | – | – | | – | | – |
| ಸಕ್ಕರೆ ಕಾರ್ಖಾನೆಗಳು | ೧ | ೯ | ೫೪.೧ | – | ೩೬೬.೫ | – | ೦.೨೮ (ಲಕ್ಷ ಟನ್) | – | – |

ಐದು ಸಾವಿರ ಸದಸ್ಯರುಳ್ಳ ೨೪ ಕೈಮಗ್ಗ ನೇಕಾರ ಸಹಕಾರಿ ಸಂಘಗಳು ಈ ಜಿಲ್ಲೆಯಲ್ಲಿದ್ದವು.

**ಕೋಷ್ಟಕ ೬.೧೧ ಕಳೆದ ಎರಡು ದಶಕಗಳ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಸಹಕಾರ ಸಂಘಗಳು ಒಟ್ಟಾರೆ ಸಾಧಿಸಿದ ಪ್ರಗತಿ**

| ವಿವರಗಳು | ವರ್ಷ | | | | | |
|---|---|---|---|---|---|---|
| | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| ಒಟ್ಟು ಸಹಕಾರ ಸಂಘಗಳು (ಸಂಖ್ಯೆ) | ೬೬೯ | ೮೩೯ | ೧,೧೬೫ | ೧,೨೧೫ | ೧,೩೫೬ | ೧,೪೪೯ |
| ಸದಸ್ಯತ್ವ (ಸಾವಿರದಲ್ಲಿ) | ೫೦೫ | ೫೮೪ | ೬೨೫ | ೬೩೪ | ೬೧೦ | ೬೨೨ |
| ಒಟ್ಟು ಷೇರು ಬಂಡವಾಳ (ಸಾವಿರ ರೂ.) | ೧,೩೬,೪೯೯ | ೧,೫೬,೩೬೭ | ೨,೦೭,೬೨೦ | ೨,೧೦,೧೫೬ | ೩,೭೯,೯೧೦ | ೪,೧೭,೯೦೧ |
| ಸರ್ಕಾರದ ಪಾಲು (ಒಟ್ಟು ಷೇರು ಬಂಡವಾಳದಲ್ಲಿ) (ಸಾವಿರ ರೂ.) | ೬೭,೬೪೩ | ೬೯,೦೯೯ | ೭೧,೦೭೯ | ೭೧,೮೯೬ | ೯೮,೬೩೦ | ೧,೦೮,೪೯೯ |
| ಕಾಯ್ದಿಟ್ಟ ಹಾಗೂ ಇತರೇ ನಿಧಿಗಳು (ಸಾವಿರ ರೂ.) | ೨,೧೩,೩೬೨ | ೨,೭೦,೭೪೨ | ೨,೯೬,೪೧೮ | ೩,೫೦,೩೦೨ | ೫,೫೧,೭೫೯ | ೬,೦೬,೯೩೫ |
| ಎರವಲು (ಪಡೆದ ಸಾಲ) (ಸಾವಿರ ರೂ.) : | | | | | | |
| ರಾಜ್ಯ ಸರ್ಕಾರದಿಂದ | ೩೨,೫೪೮ | ೩೪,೧೭೫ | ೩೬,೯೮೬ | ೪೦,೯೩೫ | ೧,೨೬,೩೫೫ | ೩,೦೯,೪೮೩ |
| ಕೇಂದ್ರ ಹಣಕಾಸು ಸಂಸ್ಥೆಗಳಿಂದ | ೩,೮೬,೯೩೯ | ೫,೨೯,೬೪೯ | ೭,೩೮,೫೯೬ | ೯,೩೫,೮೬೬ | ೧೮,೧೦,೬೩೧ | ೧೭,೩೮,೯೫೪ |
| ಇತರೆ ಸಂಸ್ಥೆಗಳಿಂದ | – | – | – | – | ೪,೯೮,೬೭೫ | ೫೩,೫೦,೦೮೭ |
| ಠೇವಣಿಗಳು (ಸಾವಿರ ರೂ.) | ೫,೯೨,೫೮೭ | ೬,೬೩,೦೨೬ | ೭,೨೭,೧೩೯ | ೮೨೬೪೯೮ | ೨೭೦೨೩೫ | ೩,೧೩,೪೯೭ |
| ದುಡಿಯುವ ಬಂಡವಾಳ (ಸಾವಿರ ರೂ.) | ೧೨,೦೫,೧೩೮ | ೧೩,೮೦,೭೨೧ | ೧೫,೯೫,೩೨೩ | ೨೧,೪೦,೯೭೩ | ೨೫,೮೨,೪೯೫ | ೨೮,೪೦,೭೪೫ |
| ಸಾಲಗಳು : (ಸಾವಿರ ರೂ.) | | | | | | |
| ನೀಡಿಕೆ | ೩,೪೫,೭೯೦ | ೪,೭೩,೪೫೬ | ೬,೯೮,೫೧೫ | ೮,೦೩,೮೨೮ | ೯,೦೬,೩೯೫ | ೯,೮೦,೦೦೦ |
| ವಸೂಲಾತಿ | ೧,೯೫,೩೭೧ | ೨,೬೮,೫೪೪ | ೨,೯೯,೪೯೮ | ೩,೮೫,೩೪೮ | ೬,೫೮,೪೯೨ | ೮,೩೪,೭೯೮ |
| ಉಳಿದಿರುವುದು | ೨,೭೦,೯೧೦ | ೩,೧೦,೩೦೨ | ೩,೬೫,೯೧೦ | ೫,೪೦,೬೮೫ | ೫,೬೭,೯೩೦ | ೭,೩೬,೭೮೩ |
| ಸುಸ್ತಿಬಾಕಿ | ೧,೧೦,೮೨೩ | ೧,೨೪,೯೧೩ | ೧,೫೪,೬೩೨ | ೨,೩೯,೮೪೪ | ೩,೭೯,೮೭೭ | ೪,೫೧,೭೫೮ |
| ಲಾಭ (ಸಾವಿರ ರೂ.) | ೧೧,೮೪೯ | ೨೨,೨೬೭ | ೧೦,೪೩೬ | ೨೪,೦೨೩ | ೪೯,೯೩೫ | ೭೪,೭೫೭ |
| ನಷ್ಟ (ಸಾವಿರ ರೂ.) | ೪೩೨ | ೮,೪೯೩ | ೧೭,೧೬೪ | ೩೪,೫೨೪ | ೬೫,೬೪೪ | ೨,೮೩,೪೧೩ |
| ಖರೀದಿ (ಸಾವಿರ ರೂ.) | ೮೨,೦೨೫ | ೧,೨೪,೦೧೫ | ೧,೪೨,೩೯೬ | ೩,೫೦,೫೬೦ | ೮,೪೭,೫೯೪ | ೧೭,೬೩,೧೭೫ |
| ಮಾರಾಟ (ಸಾವಿರ ರೂ.) | ೮೭,೩೮೩ | ೧,೨೮,೦೯೫ | ೧,೫೭,೭೮೪ | ೩,೪೦,೫೮೦ | ೧೧,೯೫,೬೨೨ | ೨೦,೨೪,೫೫೯ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

## ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ

ರೈತರಿಗೆ ಕೃಷಿ ಸಾಲವನ್ನು ಒದಗಿಸುವ ಮೂಲ ಉದ್ದೇಶದಿಂದ ಜಿಲ್ಲೆಯ ಕಾರ್ಯಕ್ಷೇತ್ರವನ್ನು ಹೊಂದಿದಂತೆ, ೧೯೫೩ರ ಅಂತ್ಯದಲ್ಲಿ ನೋಂದಾಯಿಸಲ್ಪಟ್ಟ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ೧೯೫೪ ರಿಂದ ಮಂಡ್ಯ ನಗರದಲ್ಲಿನ ಮಾರಾಟ ಸಂಘದ ಕಟ್ಟಡದ ಒಂದು ಸಣ್ಣ ಕೋಣೆಯಲ್ಲಿ ಕಾರ್ಯಾರಂಭ ಮಾಡಿತು. ಈ ಬ್ಯಾಂಕು

ಪ್ರಾರಂಭವಾದಾಗ ಜಿಲ್ಲೆಯಲ್ಲಿ ಸಹಕಾರ ಚಳವಳಿಯು ಅಷ್ಟಾಗಿ ಪ್ರಬಲ ಸ್ಥಿತಿಯಲ್ಲಿರಲಿಲ್ಲ. ಬ್ಯಾಂಕು ಪ್ರಾರಂಭವಾದ ವರ್ಷಗಳಲ್ಲಿ ಸಾಲವನ್ನು ತೆಗೆದುಕೊಳ್ಳುವವರೇ ಸಿಗುತ್ತಿರಲಿಲ್ಲ. ಸರ್ಕಾರದ ಧೋರಣೆಯಂತೆ ಅಂದು ರೈತರಿಗೆ ಕನಿಷ್ಟ ಸಾಲ ರೂ. ೨೫೦ ಮತ್ತು ಗರಿಷ್ಟ ಸಾಲ ಒಂದು ಸಾವಿರ ರೂ.ಗಳನ್ನು ಶೇ. ೬ ೧/೪ ಬಡ್ಡಿಯಂತೆ ಕೊಡುವುದಾಗಿತ್ತು. ಪ್ರಚಾರದ ಕೊರತೆಯಿಂದಾಗಿ ಸಾಲ ಪಡೆಯಲು ಯಾರೂ ಮುಂದೆ ಬರುತ್ತಿರಲಿಲ್ಲ. ರೈತರ ಅನುಕೂಲಕ್ಕಾಗಿ ಮಾಡಿದ ಒಂದು ವ್ಯವಸ್ಥೆ ಇದೆಂದು ಅವರನ್ನು ನಂಬಿಸಲು ಸ್ವಲ್ಪಕಾಲವೇ ಬೇಕಾಯಿತು. ೧೯೫೪ರ ಜೂನ್ ಅಂತ್ಯದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ ಕೇವಲ ೮೦ ಇದ್ದು, ಪಾವತಿ ಆದ ಬಂಡವಾಳ ೯೭ ಸಾವಿರ ರೂ., ದುಡಿಯುವ ಬಂಡವಾಳ ಒಂದು ಲಕ್ಷ ರೂ.ಇದ್ದದ್ದು, ೧೯೫೯ ರ ಜೂನ್ ಅಂತ್ಯಕ್ಕೆ ಸದಸ್ಯರ ಸಂಖ್ಯೆ ೨೨೯, ಪಾವತಿ ಆದ ಬಂಡವಾಳ ೮.೬೭ ಲಕ್ಷ ರೂ., ದುಡಿಯುವ ಬಂಡವಾಳ ೮೪.೫೨ ಲಕ್ಷ ರೂ.ಗಳಿಗೆ ಏರಿ ಠೇವಣಿಗಳು ೭.೮೫ ಲಕ್ಷ ರೂ., ಸ್ವಂತ ಬಂಡವಾಳ ೯.೨೮ ಲಕ್ಷ ರೂ. ಹೊರಗಿನಿಂದ ತಂದ ಸಾಲಗಳು ೬೭.೩೯ ಲಕ್ಷ ರೂ. ಸಾಲ ವಿತರಣೆ ೬೫.೦೯ ಲಕ್ಷ ರೂ. ಮತ್ತು ಗಳಿಸಿದ ನಿವ್ವಳ ಲಾಭ ೬೮ ಸಾವಿರ ರೂ.ಗಳಾಗಿತ್ತು. ಬ್ಯಾಂಕು ೧೯೬೧ರಿಂದ ಶಾಖಾ ಕಚೇರಿಗಳನ್ನು ತೆರೆಯುವ ಕಾರ್ಯಕ್ರಮ ಕೈಗೊಂಡು ಮದ್ದೂರು (೧೯೬೧), ಪಾಂಡವಪುರ (೧೯೬೧), ಮಳವಳ್ಳಿ (೧೯೬೨), ಕೃಷ್ಣರಾಜಪೇಟೆ (೧೯೬೨), ಶ್ರೀರಂಗಪಟ್ಟಣ (೧೯೬೩), ನಾಗಮಂಗಲ (೧೯೬೫), ಮಂಡ್ಯ (೧೯೬೮) ಈ ಸ್ಥಳಗಳಲ್ಲಿ ತಾಲೂಕು ಶಾಖೆಗಳನ್ನು ಒಳಗೊಂಡಂತೆ ಒಟ್ಟು ೪೫ ಶಾಖೆಗಳನ್ನು ೨೦೦೨ ಮಾರ್ಚ್ ವೇಳೆಗೆ ಜಿಲ್ಲೆಯಾದ್ಯಂತ ತೆರೆದು ಗ್ರಾಹಕರಿಗೆ ಇನ್ನೂ ಸಮೀಪವಾಗಿ ಸೇವೆ ಸಲ್ಲಿಸುತ್ತಿದೆ.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ೧೯೬೫ರಲ್ಲಿ ಸಾರ್ವಜನಿಕರು, ಸಣ್ಣಪುಟ್ಟ ವ್ಯಾಪಾರಿಗಳು, ದಿನಗೂಲಿ ಸಂಪಾದಿಸುವವರು ಮುಂತಾದವರಿಗೆ ಪಿಗ್ಮಿ ಖಾತೆ ಸೌಲಭ್ಯವನ್ನು ಪ್ರಾರಂಭಿಸಿತು. ಈ ಯೋಜನೆಯು ಜನತೆಯಲ್ಲಿ ಉಳಿತಾಯ ಮನೋಭಾವವನ್ನು ಪ್ರಚಾರಪಡಿಸುದುದಲ್ಲದೇ ಬ್ಯಾಂಕಿನ ಆಂತರಿಕ ಬಂಡವಾಳವನ್ನು ರೂಢಿಸಲು ನೆರವಾಯಿತು. ಈ ಅವಧಿಯಲ್ಲಿ ಜಿಲ್ಲೆಯ ಅತಿ ಮುಖ್ಯ ಬೆಳೆಯಾದ ಕಬ್ಬಿನ ಬೆಳೆಗೆ ಸುಮಾರು ನಾಲ್ಕರಿಂದ ಐದು ಕೋಟಿ ರೂ.ವರೆಗಿನ ಸಾಲವನ್ನು ಬ್ಯಾಂಕು ವಿತರಿಸುತ್ತಿತ್ತು. ಈ ಸಾಲದ ಬಹುಭಾಗ 'ಒಪ್ಪಿಗೆ ಕಬ್ಬು ಬೆಳೆಗೆ' ನೀಡಲಾಗಿತ್ತು. ರಿಸರ್ವ್ ಬ್ಯಾಂಕಿನ ಸಲಹೆ ಮೇರೆಗೆ ಬ್ಯಾಂಕು 'ಬೆಳೆ ಸಾಲ' ಯೋಜನೆಯನ್ನು ಜಿಲ್ಲೆಯಾದ್ಯಂತ ಜಾರಿಗೊಳಿಸಿ ಬತ್ತ, ಕಬ್ಬು, ರಾಗಿ, ಶೇಂಗಾ, ಮುಂತಾದ ಬೆಳೆಗಳಿಗೆ ಈ ಸಾಲವನ್ನು ವಿತರಿಸುವ ಯೋಜನೆಯನ್ನು ಕೈಗೊಂಡಿತು. ಜಿಲ್ಲೆಯ ಎಲ್ಲಾ ಪತ್ತಿನ ಸಂಘಗಳು ೧೯೬೭ರ ಹೊತ್ತಿಗೆ ಈ ಬ್ಯಾಂಕಿನ ಸದಸ್ಯತ್ವವನ್ನು ಪಡೆದಿದ್ದವು. ೧೯೬೮-೬೯ರಲ್ಲಿ ಬ್ಯಾಂಕಿನ ಚಟುವಟಿಕೆಗಳು ಕೇವಲ ರೈತ ವರ್ಗಕ್ಕೆ ಸೀಮಿತಗೊಳ್ಳದೆ, ಸಾರ್ವಜನಿಕರಿಗೂ ವ್ಯವಸಾಯೇತರ ಸಾಲ ವಿತರಿಸುವ ಯೋಜನೆಗಳನ್ನು ಜಾರಿಗೆ ತಂದಿತು. ಹೊಸ ರೀತಿಯ ಕೌಂಟರ್ ಮತ್ತು ಸೇಫ್ ಲಾಕರ್‌ಗಳ ಸೌಲಭ್ಯವನ್ನು ಹೊಂದಿದಂತೆ ಕಟ್ಟಿಸಿದ ತನ್ನದೇ ಆದ ಹೊಸ ಕಟ್ಟಡಕ್ಕೆ ೧೯೬೮ರಲ್ಲಿ ಬ್ಯಾಂಕು ಮುಖ್ಯ ಕಚೇರಿಯನ್ನು ಸ್ಥಳಾಂತರಿಸಿತು. ಜೀವವಿಮಾ ನಿಗಮವು ಈ ಬ್ಯಾಂಕನ್ನು ೧೯೭೦ರಲ್ಲಿ ವಿಮಾ ಏಜೆಂಟ್ ಆಗಿ ನೇಮಿಸಿತು. ಇದರಿಂದ ಜಿಲ್ಲೆಯಾದ್ಯಂತ ಜನತೆಯಿಂದ ವಿಮಾ ಪಾಲಿಸಿಗಳನ್ನು ಪಡೆದು ಬ್ಯಾಂಕು ಜನಪ್ರಿಯತೆಯನ್ನು ಗಳಿಸುವಂತಾಯಿತು.

೧೯೭೧ರಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ ೫೩೩ಕ್ಕೆ ತಲುಪಿ, ಪಾವತಿ ಆದ ಬಂಡವಾಳ ೧೧೧.೫೦ ಲಕ್ಷ ರೂ., ಠೇವಣಿಗಳು ೨೧೬.೯೮ ಲಕ್ಷ ರೂ., ಸಾಲ ವಿತರಣೆ ೫೨೬ ಲಕ್ಷ ರೂ., ದುಡಿಯುವ ಬಂಡವಾಳ ೬೪೫ ಲಕ್ಷ ರೂ. ಮತ್ತು ಲಾಭವು ಹತ್ತು ಲಕ್ಷ ರೂ.ವರೆಗೆ ತಲುಪಿತು. ಕಳೆದ ಇಪತ್ತು ವರ್ಷಗಳ ಅವಧಿಯಲ್ಲಿ ಬ್ಯಾಂಕು ಸಾಧಿಸಿದ ಪ್ರಗತಿಯನ್ನು ಈ ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**ಕೋಷ್ಟಕ ೬.೧೨ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಕಳೆದ ಎರಡು ದಶಕಗಳ ಪ್ರಗತಿ**

| ವಿವರ | ವರ್ಷ | | | | | | |
|---|---|---|---|---|---|---|---|
| | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೫-೯೬ | ೧೯೯೯-೦೦ | ೨೦೦೦-೦೧ | ೨೦೦೧-೦೨ |
| ಸದಸ್ಯರ ಸಂಖ್ಯೆ | ೪೯೮ | ೬೨೯ | ೭೨೭ | ೫೪೯ | ೬೨೬ | ೬೨೨ | ೬೨೪ |
| ಷೇರು ಬಂಡವಾಳ (ಲಕ್ಷ ರೂ.) | ೧೭೭.೦೭ | ೨೨೧.೬೮ | ೩೦೦.೬೫ | ೩೫೫.೧೪ | ೬೪೯.೧೬ | ೭೫೫.೨೯ | ೮೨೫.೯೧ |
| ಸರ್ಕಾರದ ಪಾಲು (ಲಕ್ಷ ರೂ.) | ೪೪.೯೫ | ೪೪.೯೫ | ೪೧.೮೬ | ೪೧.೮೬ | ೧೧೬.೮೬ | ೧೧೬.೮೬ | ೧೧೬.೮೬ |
| ಕಾಯ್ದಿಟ್ಟ ನಿಧಿಗಳು (ಲಕ್ಷ ರೂ.) | ೧೪೫.೫೨ | ೧೯೪.೯೨ | ೨೫೩.೭೯ | ೧,೧೫೨.೨೮ | ೨,೦೯೭.೦೩ | ೨,೪೪೩.೫೯ | ೨,೫೯೩.೪೯ |
| ಠೇವಣಿಗಳು (ಲಕ್ಷ ರೂ.) | ೯೮೮.೩೨ | ೧,೨೪೭.೦೩ | ೩,೪೫೪.೨೫ | ೬,೧೦೪.೪೫ | ೧೨,೦೫೪.೫೮ | ೧೪,೧೪೫.೨೭ | ೧೭,೪೧೦.೦೬ |
| ಮುಂಗಡಗಳು (ಲಕ್ಷ ರೂ.) | ೧,೪೫೭.೦೭ | ೨,೧೨೦.೩೬ | ೫,೦೩೩.೩೭ | ೮,೫೪೪.೭೧ | ೧೫,೩೭೧.೩೨ | ೧೮,೫೭೪.೪೩ | ೧೯,೫೯೬.೯೦ |
| ಲಾಭ (ಲಕ್ಷ ರೂ.) | ೯.೨೭ | ೯.೬೪ | ೨೦.೧೫ | ೫೭.೬೮ | ೧೫೫.೩೮ | ೨೦೨.೪೮ | ೨೫೨.೯೧ |

ಆಧಾರ: ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮೂಲ ಉದ್ದೇಶ ಕೃಷಿ ಸಾಲ ವಿತರಣೆಯೇ ಆದರೂ ಬದಲಾದ ಪರಿಸ್ಥಿತಿಯಲ್ಲಿ ಮತ್ತು ಜಿಲ್ಲೆಯ ಜನಹಿತ ದೃಷ್ಟಿಯಿಂದ ಮತ್ತು ಬ್ಯಾಂಕಿನ ಒಟ್ಟಾರೆ ಆರ್ಥಿಕ ಹಿತದೃಷ್ಟಿಯಿಂದ ವ್ಯವಸಾಯೇತರ ಕ್ಷೇತ್ರ ಹಾಗೂ ಗ್ರಾಮೀಣ ಗುಡಿ ಕೈಗಾರಿಕೆಗಳ ಬೆಳವಣಿಗೆಗೂ ಜಿಲ್ಲಾ ಬ್ಯಾಂಕು ಹೆಚ್ಚಿನ ಆಸಕ್ತಿ ತೋರಿಸುತ್ತಿದೆ. ರೈತರು, ಮಧ್ಯಮ ವರ್ಗದ ಜನರು ಹಾಗೂ ನೌಕರರು ಸಂದಿಗ್ಧ ಸ್ಥಿತಿಯಲ್ಲಿ ಹೆಚ್ಚಿನ ಬಡ್ಡಿ ತೆತ್ತು, ಶೋಷಣೆಗೆ ಒಳಗಾಗುವುದನ್ನು ತಪ್ಪಿಸಲು, ಜಿಲ್ಲಾ ಬ್ಯಾಂಕು ಬಂಗಾರದ ಆಭರಣ, ರಾಷ್ಟ್ರೀಯ ಉಳಿತಾಯ ಪತ್ರಗಳು ಮತ್ತು ವೇತನದ ಆಧಾರದ ಮೇಲೆ ಸಾಲಗಳನ್ನು ಒದಗಿಸುತ್ತಿದೆ. ಅನಿಯಮಿತ ಹಂಗಾಮಿನಿಂದ ರೈತರ ಸಾಲ ಮರುಪಾವತಿ ವಿಳಂಬವಾದರೆ ಬ್ಯಾಂಕಿಗೆ ಆಗುವ ಹಾನಿ ತಪ್ಪಿಸಲು ಮತ್ತು ಲಾಭಗಳಿಕೆ ದೃಷ್ಟಿಯಿಂದ ನೌಕರ ವರ್ಗದವರಿಗೆ ಗೃಹ ಬಳಕೆ ಸಾಲ, ವ್ಯಾಪಾರಸ್ಥರಿಗೆ ನಗದು ಪತ್ತಿನ ಸಾಲ, ವಾಹನ ಸಾಲ, ಸಂಘಗಳ ಮುಖಾಂತರ ಹಾಗೂ ವ್ಯಕ್ತಿಗತ ಟ್ರ್ಯಾಕ್ಟರ್ ಸಾಲ ಮತ್ತು ಗೃಹ ನಿರ್ಮಾಣ ಸಾಲ, ಮುಂತಾದವನ್ನು ನೀಡುತ್ತಿದೆ.

ಸರ್ಕಾರದ ಈಚಿನ ಧೋರಣೆಯಂತೆ ಜಿಲ್ಲಾದ್ಯಂತ ಎಲ್ಲಾ ಕಾರ್ಯನಿರತ ಸಹಕಾರ ಸಂಘಗಳನ್ನು ವ್ಯಾಪಾರ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಮೂಲಕ ಜಿಲ್ಲೆಯ ಸಹಕಾರ ಕ್ಷೇತ್ರದ ಅಡಿಪಾಯವಾದ ಸಹಕಾರ ಸಂಘಗಳ ಬಲವರ್ಧನೆಗೆ ಜಿಲ್ಲಾ ಬ್ಯಾಂಕು ಮಹತ್ವ ನೀಡುತ್ತಿದೆ. ಬ್ಯಾಂಕು ಜಿಲ್ಲೆಯ ನಿಷ್ಕ್ರಿಯ ಸಹಕಾರ ಸಂಘಗಳನ್ನು ಸಹ ಈ ವ್ಯಾಪ್ತಿಯಲ್ಲಿ ತಂದು ಅವುಗಳ ಪುನಶ್ಚೇತನಕ್ಕಾಗಿ ಕಾರ್ಯಕ್ರಮ ರೂಪಿಸಿದೆ. ಮಾರ್ಚ್ ೨೦೦೨ಕ್ಕೆ ಈ ಯೋಜನೆಯಡಿ ೯೯ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಂಘಟಿಸಿ ಅವುಗಳಿಗೆ ಕ್ಯಾಷ್ ಕೌಂಟರ್ ಮತ್ತು ತಿಜೋರಿ ಸೌಲಭ್ಯ ಒದಗಿಸಿದೆ. ಬ್ಯಾಂಕು ರೈತರ ಅನುಕೂಲಕ್ಕಾಗಿ ಮತ್ತು ರೈತರು ಹೆಚ್ಚಿನ ಬಡ್ಡಿ ತೆರುವುದನ್ನು ತಪ್ಪಿಸಲು ಕಿಸಾನ್ ಕ್ರೆಡಿಟ್ ಯೋಜನೆಯನ್ನು ಜಾರಿಗೆ ತಂದಿದೆ. ಜಿಲ್ಲಾ ಬ್ಯಾಂಕು ೨೦೦೨ರ ಮಾರ್ಚ್ ಅಂತ್ಯಕ್ಕೆ ೪೮,೦೦೦

ಕಿಸಾನ್ ಕಾರ್ಡುಗಳನ್ನು ವಿತರಿಸಿದ್ದು, ಅದರಡಿ ಬಾಕಿ ಇರುವ ಸಾಲದ ಮೊತ್ತ ೭೬೬೭.೩೩ ಲಕ್ಷ ರೂ. ಆಗಿತ್ತು. ಜಿಲ್ಲೆಯ ಅತೀ ಕಡಿಮೆ ಆದಾಯ ವರ್ಗದ ಜನರನ್ನು ಗುರುತಿಸಿ, ಅವರು ತಮ್ಮತಮ್ಮಲ್ಲಿ ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಠೇವಣಿ ಸಂಗ್ರಹಣೆ ಮತ್ತು ಅವರದೇ ಆದ ಸಮಸ್ಯೆಗಳಿಗೆ ಧನ ಸಹಾಯ ಸೌಲಭ್ಯ ಸಿಗುವಂತಾಗಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (ನಬಾರ್ಡ್) ನಿರ್ದೇಶನದಂತೆ ಸ್ವಸಹಾಯ ಗುಂಪುಗಳನ್ನು (ಸೆಲ್ಫ್-ಹೆಲ್ಪ್ ಗ್ರೂಪ್ಸ್) ರಚಿಸುವ ಯೋಜನೆಯನ್ನು ಜಿಲ್ಲಾ ಬ್ಯಾಂಕು ಹಮ್ಮಿಕೊಂಡಿದೆ. ಈ ಯೋಜನೆ ಪ್ರಾರಂಭವಾದಂದಿನಿಂದ ೨೦೦೨ರ ಮಾರ್ಚ್ ಅಂತ್ಯದವರೆಗೆ ಜಿಲ್ಲೆಯಲ್ಲಿ ೧೭೩೦ ಸ್ವಸಹಾಯ ಗುಂಪುಗಳು ರಚನೆಗೊಂಡಿದ್ದು, ಇವು ೬೯.೧೧ ಲಕ್ಷ ರೂ. ಠೇವಣಿ ಸಂಗ್ರಹಿಸಿದ್ದವು. ಜಿಲ್ಲಾ ಸಹಕಾರ ಬ್ಯಾಂಕು ೪೬೬ ಸ್ವಸಹಾಯ ಗುಂಪುಗಳಿಗೆ ಸಾಲ-ಜೋಡಣೆ ಯೋಜನೆಯನ್ವಯ ಒಟ್ಟು ೫೦.೩೩ ಲಕ್ಷ ರೂ. ಸಾಲವನ್ನು ವಿತರಿಸಿತ್ತು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ೧೯೭೯ರಲ್ಲಿ ತನ್ನ ರಜತ ಮಹೋತ್ಸವವನ್ನು ಆಚರಿಸಿತು. ೨೦೦೧-೦೨ರಲ್ಲಿದ್ದಂತೆ ಈ ಬ್ಯಾಂಕಿನ ಪ್ರಧಾನ ಕಚೇರಿಯೂ ಸೇರಿದಂತೆ ಎಲ್ಲಾ ತಾಲ್ಲೂಕು ಶಾಖೆಗಳು (ಮಳವಳ್ಳಿ ತಾಲೂಕು ಶಾಖೆಯನ್ನು ಹೊರತುಪಡಿಸಿ) ಹಾಗೂ ಎರಡು ಗ್ರಾಮಾಂತರ ಶಾಖೆಗಳೂ ತಮ್ಮದೇ ಆದ ಸ್ವಂತ ಕಟ್ಟಡಗಳನ್ನು ಹೊಂದಿವೆ.

## ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು

ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ೧೯೨೯ರಲ್ಲಿಯೇ ಜಮೀನು ಅಡಮಾನ ಬ್ಯಾಂಕನ್ನು ಸ್ಥಾಪಿಸಿ ರೈತರಿಗೆ ದೀರ್ಘಾವಧಿ ಸಾಲವನ್ನು ಒದಗಿಸುವ ಕಾರ್ಯವನ್ನು ಸಹಕಾರಿ ರಂಗದಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಈ ಬ್ಯಾಂಕುಗಳನ್ನು ಪ್ರಾಯೋಗಿಕವಾಗಿ ಮಲೆನಾಡಿನ ಜಿಲ್ಲೆಗಳಿಗೆ ಹಾಗೂ ನಂತರ ಇತರೇ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಮಂಡ್ಯ ಜಿಲ್ಲೆಯಲ್ಲಿ ಈ ಬ್ಯಾಂಕಿನ ತಾಲೂಕು ಮಟ್ಟದ ಶಾಖೆಗಳಾದ ಜಮೀನು ಅಡಮಾನ ಸಹಕಾರ ಸಂಘಗಳನ್ನು ಮಂಡ್ಯದಲ್ಲಿ ೧೯೩೬ರಲ್ಲಿ, ಮದ್ದೂರಿನಲ್ಲಿ ೧೯೩೮ರಲ್ಲಿ, ಶ್ರೀರಂಗಪಟ್ಟಣದಲ್ಲಿ ೧೯೫೯ರಲ್ಲಿ, ನಾಗಮಂಗಲ, ಪಾಂಡವಪುರಗಳಲ್ಲಿ ೧೯೪೨ರಲ್ಲಿ, ಕೃಷ್ಣರಾಜಪೇಟೆ, ಮಳವಳ್ಳಿಗಳಲ್ಲಿ ೧೯೪೩ರಲ್ಲಿ ಸ್ಥಾಪಿಸಲಾಯಿತು. ಇವು ೧೯೬೫ರವರೆಗೆ ರೈತರಿಗೆ ಹಳೆಯ ಸಾಲ ತೀರುವಳಿಗಾಗಿ ಸಾಲ ನೀಡುತ್ತಿದ್ದು, ನಂತರದ ವರ್ಷಗಳಲ್ಲಿ ಬದಲಾದ ಪರಿಸ್ಥಿತಿಗನುಗುಣವಾಗಿ ಸಾಲ ಮಂಜೂರಾತಿಯ ಧೋರಣೆಯನ್ನು ಬದಲಾಯಿಸಿಕೊಂಡು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹೆಚ್ಚಾಗಿ ಸಾಲ ಮಂಜೂರಾತಿ ಮಾಡುತ್ತಿವೆ. ಮೊದಲು ಜಮೀನು ಅಡಮಾನ ಸಹಕಾರ ಸಂಘಗಳು ಎಂದಿದ್ದ ಹೆಸರನ್ನು ೧೯೬೫ರ ನಂತರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳೆಂದು ಮತ್ತೆ ೧೯೮೫ರ ನಂತರ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳೆಂದು ಇವನ್ನು ಹೆಸರಿಸಲಾಯಿತು. ಈ ಬ್ಯಾಂಕುಗಳು ಪ್ರಮುಖವಾಗಿ ದೀರ್ಘಾವಧಿ ಕೃಷಿ ಸಾಲದ ವಿತರಣೆ ಕೈಗೊಳ್ಳುತ್ತಿದ್ದರೂ ೧೯೮೭ರಿಂದ ಕೃಷಿಯೇತರ ಚಟುವಟಿಕೆಗಳಾದ ಗ್ರಾಮೀಣ ಕೈಗಾರಿಕೆಗಳು, ಗ್ರಾಮೀಣ ಗೃಹ ನಿರ್ಮಾಣ (೧೯೮೯ರಿಂದ) ಮುಂತಾದವುಗಳಿಗೂ ಸಾಲ ಸೌಲಭ್ಯವನ್ನು ಒದಗಿಸುತ್ತಿವೆ. ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮಂಡ್ಯದಲ್ಲಿನ ಜಿಲ್ಲಾ ಶಾಖಾ ಕಚೇರಿಯು ಜಿಲ್ಲೆಯ ವ್ಯಾಪ್ತಿಯಲ್ಲಿನ ಏಳು ಪ್ರಾಥಮಿಕ ಬ್ಯಾಂಕುಗಳಿಗೆ ವಿವಿಧ ಯೋಜನೆಗಳ ಮಿತಿಗೊಳಪಟ್ಟ ಸಾಲ ಮಂಜೂರಾತಿ ನೀಡುತ್ತದೆ. ಮುಂದಿನ ಕೋಷ್ಟಕದಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ತೋರಿಸಲಾಗಿದೆ.

**ಕೋಷ್ಟಕ ೬.೧೩ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಕಳದೆರಡು ದಶಕಗಳ ಪ್ರಗತಿ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| ಬ್ಯಾಂಕುಗಳ ಸಂಖ್ಯೆ | ೭ | ೭ | ೭ | ೭ | ೭ | ೭ |
| ಸದಸ್ಯತ್ವ | ೪೫,೮೨೧ | ೬೦,೯೮೪ | ೫೫,೮೧೪ | ೩೨,೪೫೦ | ೩೪,೮೩೧ | ೩೫,೮೬೨ |
| ಷೇರು ಬಂಡವಾಳ (ಸಾವಿರ ರೂ.) | ೫,೬೭೭ | ೮,೬೧೮ | ೧೨,೦೪೩ | ೧೮,೪೮೫ | ೨೬,೬೦೬ | ೨೬,೮೬೯ |
| ಸರ್ಕಾರದ ಪಾಲು (ಸಾವಿರ ರೂ.) | ೨೯೪ | ೪೦೭ | ೬೨೪ | ೭೨೪ | ೭೫೧ | ೭೭೭ |
| ಕಾಯ್ದಿಟ್ಟ ಮತ್ತು ಇತರೆ ನಿಧಿಗಳು (ಸಾವಿರ ರೂ.) | ೧,೮೫೦ | ೨,೧೬೭ | ೩,೬೧೦ | ೫,೮೭೨ | ೨೦,೯೯೪ | ೨೦,೬೫೩ |
| ಪಡೆದ ಎರವಲು (ಸಾವಿರ ರೂ.) | ೪೪,೯೮೪ | ೬೨,೪೫೫ | ೯೪,೪೫೬ | ೧,೫೨,೦೪೨ | ೨,೯೭,೯೧೨ | ೨,೯೭,೩೫೬ |
| ಚಾಲ್ತಿ ಬಂಡವಾಳ (ಸಾವಿರ ರೂ.) | ೬೧,೮೦೬ | ೯೫,೪೮೨ | ೧,೨೭,೭೨೫ | ೧,೫೩,೩೯೭ | ೩,೪೧,೮೩೯ | ೩,೩೬,೭೪೯ |
| ಠೇವಣಿಗಳು (ಸಾವಿರ ರೂ.) | ೧,೧೩೪ | ೧,೩೫೮ | ೧,೮೨೭ | ೨,೧೩೪ | ೬,೫೮೨ | ೬,೮೩೫ |
| **ಸಾಲ :** (ಸಾವಿರ ರೂ.) | | | | | | |
| ನೀಡಿಕೆ | ೧೮,೬೬೨ | ೨೫,೯೮೯ | ೪೭,೦೩೦ | ೬೦,೫೮೭ | ೩೧,೪೪೪ | ೨೯,೮೬೮ |
| ಬರಬೇಕಾದದ್ದು | ೬೯,೩೧೬ | ೮೫,೨೮೬ | ೧,೧೯,೨೫೮ | ೧,೯೩,೫೧೧ | ೨,೮೬,೨೫೧ | ೨,೭೬,೪೨೫ |
| ಅವಧಿ ಮೀರಿದ್ದು | ೯,೧೦೦ | ೧೮,೬೪೯ | ೪೧,೦೬೩ | ೬೯,೦೦೪ | ೯೦,೭೬೨ | ೯೨,೩೨೮ |
| ವಸೂಲಾದದ್ದು | ೧೩,೬೬೩ | ೯,೩೦೬ | ೧೧,೧೨೯ | ೩೨,೪೯೩ | ೬೭,೫೫೮ | ೫೭,೦೧೬ |
| ಲಾಭ (ಸಾವಿರ ರೂ.) | ೩೫೪ | – | ೪೭೫ | – | – | – |
| ನಷ್ಟ (ಸಾವಿರ ರೂ.) | ೩೨೨ | ೨,೮೦೦ | ೫,೩೮೧ | ೧೦,೩೨೧ | ೭೭,೮೨೪ | ೮೬,೩೦೦ |

ಆಧಾರ : ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಮಂಡ್ಯ

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

ವ್ಯವಸಾಯ ಅಭಿವೃದ್ಧಿಗೆ ಒದಗಿಸಲಾಗುವ ಸಹಕಾರಿ ಸಾಲವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುವುದು ಈ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಅವಲಂಬಿಸಿದೆ. ಈ ಪತ್ತಿನ ಸಂಘಗಳು ಸದಸ್ಯ ರೈತರಿಗೆ ಅವರ ಕೃಷಿ ಅಭಿವೃದ್ಧಿಗಾಗಿ ಅಲ್ಪಾವಧಿ (ಬೆಳೆಸಾಲ) ಮತ್ತು ಮಧ್ಯಮಾವಧಿ ಸಾಲಗಳ ಜೊತೆಗೆ ಸುಧಾರಿಸಿದ ಬೀಜ, ರಸಗೊಬ್ಬರ, ಕ್ರಿಮಿನಾಶಕ ಔಷಧಗಳನ್ನು ಒದಗಿಸುತ್ತವೆ. ಜೊತೆಗೆ ಅವರ ದಿನನಿತ್ಯದ ಬಳಕೆ ವಸ್ತುಗಳಾದ ಸಕ್ಕರೆ, ಸೀಮೆಎಣ್ಣೆ, ಬಟ್ಟೆ ಮುಂತಾದವುಗಳನ್ನು ಮಾರಾಟ ಮಾಡುತ್ತವೆ. ರೈತರ ಉತ್ಪನ್ನಗಳಿಗೆ ಧಾರಣೆ ಇಲ್ಲದಾಗ ದಾಸ್ತಾನು ಸೌಲಭ್ಯವನ್ನು ಒದಗಿಸಿ ದಾಸ್ತಾನು ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತವೆ. ಅಲ್ಲದೆ ಸಹಕಾರ ಮಾರಾಟ ಸಂಘಗಳೊಡನೆ ನೇರ ಸಂಪರ್ಕ ಬೆಳಸಿ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡುತ್ತವೆ.

ಗ್ರಾಮೀಣ ಕಸಬುದಾರರಿಗೂ ಸಾಲ ಒದಗಿಸಿ ಅವರ ಆರ್ಥಿಕ ಪ್ರಗತಿಗೆ ಪ್ರಯತ್ನಿಸುತ್ತಿವೆ. ೧೯೯೫-೯೬ ನೇ ಸಾಲಿನಿಂದ ವ್ಯಾಪಾರ ಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿ ಈ ಪತ್ತಿನ ಸಂಘಗಳನ್ನು ಬಲಪಡಿಸಿ, ಅವನ್ನು ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಸರ್ಕಾರ ಇವುಗಳಿಗೆ ಬ್ಯಾಂಕಿಂಗ್ ಕೌಂಟರ್, ಕಬ್ಬಿಣದ ತಿಜೋರಿ, ಇತ್ಯಾದಿಗಳನ್ನು ಖರೀದಿಸಲು ಆರ್ಥಿಕ ನೆರವನ್ನು ಒದಗಿಸುತ್ತಿದೆ.

**ಕೋಷ್ಟಕ ೬.೧೪ ಮಂಡ್ಯ ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳ (ಬ್ಯಾಂಕುಗಳ) ಪ್ರಗತಿ**

| ವಿವರ | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ |
|---|---|---|---|---|---|---|
| ಒಟ್ಟು ಕೃಷಿ ಪತ್ತಿನ ಸಹಕಾರ ಸಂಘಗಳು (ಬ್ಯಾಂಕುಗಳು) | ೨೨೧ | ೨೨೧ | ೨೨೧ | ೨೨೫ | ೨೨೩ | ೨೨೫ |
| ಸದಸ್ಯರ ಸಂಖ್ಯೆ : | | | | | | |
| ಪರಿಶಿಷ್ಟ ಜಾತಿ | ೩೭,೯೩೮ | ೩೭,೯೬೮ | ೪೧,೦೦೦ | ೪೭,೨೮೯ | ೧೪,೭೧೮ | ೧೫,೨೧೮ |
| ಪರಿಶಿಷ್ಟ ಪಂಗಡ | ೨,೪೭೭ | ೨,೪೯೫ | ೩,೦೦೦ | ೨,೪೦೫ | ೨,೪೩೧ | ೨,೪೪೫ |
| ಇತರೆ | ೨,೬೧,೧೧೦ | ೨,೬೧,೦೮೧ | ೨,೭೫,೦೦೦ | ೨,೬೦,೩೮೮ | ೧,೮೦,೭೧೦ | ೧,೮೨,೫೧೦ |
| ಒಟ್ಟು | ೩,೦೧,೫೨೫ | ೩,೦೧,೫೪೪ | ೩,೧೯,೦೦೦ | ೩,೧೦,೦೮೨ | ೧,೯೭,೮೫೯ | ೨,೦೦,೧೭೩ |
| ಷೇರು ಬಂಡವಾಳ (ಸಾವಿರ ರೂ.) | ೪೪,೩೮೬ | ೪೬,೫೯೦ | ೪೮,೬೦೧ | ೫೫,೬೬೫ | ೧,೫೫,೨೨೮ | ೧,೫೮,೩೨೮ |
| ಸರ್ಕಾರದ ಪಾಲು (ಸಾವಿರ ರೂ.) | ೪,೨೩೪ | ೪,೭೮೪ | ೫,೪೮೦ | ೮,೮೯೩ | ೧೪,೭೮೨ | ೧೫,೦೭೭ |
| ನೀಡಲಾದ ಸಾಲ (ಸಾವಿರ ರೂ.) | ೨೦,೫೩೬ | ೨೧,೦೫೬ | ೨೮,೪೬೫ | ೧,೨೯,೧೭೩ | ೬,೫೮,೧೬೯ | ೬,೮೪,೪೯೫ |
| ವಸೂಲು ಮಾಡಿದ ಸಾಲ (ಸಾವಿರ ರೂ.) | ೫೯,೧೩೮ | ೬೭,೪೮೨ | ೭೭,೫೬೩ | ೬೬,೭೫೨ | ೪,೬೬,೪೦೧ | ೪,೭೩,೩೯೭ |
| ಬಾಕಿ ಉಳಿದ ಸಾಲ (ಸಾವಿರ ರೂ.) | ೩೨,೧೧೫ | ೩೪,೩೨೦ | ೪೯,೦೯೮ | ೬೨,೪೨೧ | ೧,೯೧,೭೬೮ | ೨,೧೧,೧೦೦ |
| ಗಡವು ಮೀರಿದ ಸಾಲ (ಸಾವಿರ ರೂ.) | ೧೯,೨೪೮ | ೨೧,೪೨೬ | ೨೮,೯೯೨ | ೪೯,೫೯೦ | ೧೧,೦೬೬ | ೧೧,೭೭೬ |
| ಶೇಕಡ ವಸೂಲಾತಿ | ೪೮.೬೪ | ೪೯.೦೫ | ೩೭.೫೫ | ೪೫.೬೧ | ೭೦.೦೦ | ೬೯.೧೬ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

## ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು

ಮಂಡ್ಯ ಜಿಲ್ಲೆಯಲ್ಲಿ ತಾಲೂಕಿಗೊಂದರಂತೆ ಏಳು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಸದಸ್ಯರಿಗೆ ಬಿತ್ತನೆ ಬೀಜ, ಕ್ರಿಮಿನಾಶಕಗಳು ಹಾಗೂ ರಾಸಾಯನಿಕ ಗೊಬ್ಬರಗಳನ್ನು ಒದಗಿಸುವುದೇ ಈ ಮಾರಾಟ ಸಂಘಗಳ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರಕುವಂತೆ ವ್ಯವಸ್ಥೆ ಮಾಡುವುದು, ರೈತರ ಕೃಷಿ ಉತ್ಪನ್ನಗಳನ್ನು ಅಡವು ಇಟ್ಟುಕೊಂಡು ಸಾಲ ಮತ್ತು ಮಾರಾಟ ಜೋಡಣೆ ಸೌಲಭ್ಯ ಒದಗಿಸಿ ಸಾಲ ನೀಡುವುದು, ರೈತರ ಕೃಷಿ ಉತ್ಪನ್ನಗಳಿಗೆ ರೂಪಾಂತರ ವ್ಯವಸ್ಥೆ ಒದಗಿಸುವುದು, ಸರ್ಕಾರದ ಏಜೆಂಟರಾಗಿ ಸರ್ಕಾರ ವಹಿಸುವ ಕೆಲಸಗಳನ್ನು ನಿರ್ವಹಿಸುವುದು, ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ದಿನಬಳಕೆ ವಸ್ತುಗಳು, ಜವಳಿ

ಇತ್ಯಾದಿಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಒದಗಿಸುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತವೆ. ೧೯೯೫–೯೬ರಿಂದ ಈ ಮಾರಾಟ ಸಂಘಗಳನ್ನು ವ್ಯಾಪಾರ ಅಭಿವೃದ್ಧಿ ಯೋಜನೆಗೆ ಒಳಪಡಿಸಿ ಅಭಿವೃದ್ಧಿಪಡಿಸಲಾಗುತ್ತಿದೆ.

**ಕೋಷ್ಟಕ ೬.೧೫ ಜಿಲ್ಲೆಯ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಕಳೆದ ಎರಡು ದಶಕಗಳ ಪ್ರಗತಿ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಸಂಖ್ಯೆ | ೭ | ೭ | ೭ | ೭ | ೭ | ೭ |
| ಸದಸ್ಯರ ಸಂಖ್ಯೆ | ೧೦,೧೮೦ | ೧೦,೬೫೦ | ೧೧,೩೪೪ | ೨೦,೮೫೩ | ೧೫,೪೮೭ | ೧೬,೨೧೧ |
| ಷೇರು ಬಂಡವಾಳ (ಸಾವಿರ ರೂ.) | ೪,೫೬೬ | ೫,೦೩೦ | ೬,೦೬೦ | ೧೦,೪೩೩ | ೮,೨೬೫ | ೫,೫೦೨ |
| ಸರ್ಕಾರದ ಪಾಲು (ಸಾವಿರ ರೂ.) | ೨,೩೫೮ | ೨,೮೬೮ | ೩,೮೯೮ | ೬,೪೬೧ | ೫,೫೬೬ | ೫,೧೬೪ |
| ದುಡಿಯುವ ಬಂಡವಾಳ (ಸಾವಿರ ರೂ.) | ೩೮,೪೫೯ | ೪೨,೫೦೪ | ೪೮,೧೯೬ | ೬೪,೬೫೬ | ೯೦,೫೯೫ | ೭೮,೮೦೬ |
| ಕಾಯ್ದಿಟ್ಟ ಮತ್ತು ಇತರ ನಿಧಿಗಳು (ಸಾವಿರ ರೂ.) | ೨೩,೩೪೮ | ೨೫,೧೩೪ | ೨೮,೦೬೫ | ೩೨,೦೯೧ | ೪೭,೯೯೯ | ೪೨,೨೭೭ |
| ಸಾಲ ಪಡೆದುದು (ಸಾವಿರ ರೂ.) | ೧೦,೨೪೫ | ೧೧,೮೪೦ | ೧೨,೯೭೧ | ೧೯,೦೦೬ | ೫,೨೬೯ | ೩,೭೯೧ |
| ವ್ಯವಸಾಯ ಸಾಮಗ್ರಿಗಳ ಮಾರಾಟ ಮೌಲ್ಯ : | | | | | | |
| ಬೀಜಗಳು (ಸಾವಿರ ರೂ.) | ೧೧೮ | ೧೩೮ | ೧೬೧ | ೧೯೪ | ೮,೨೪೨ | ೫,೫೬೯ |
| ಗೊಬ್ಬರಗಳು (ಸಾವಿರ ರೂ.) | ೧,೦೬೬ | ೧,೧೮೪ | ೧,೩೯೯ | ೬೮,೦೦೦ | ೫೯,೪೭೧ | ೫೨,೧೧೪ |
| ಇತರ ವಸ್ತುಗಳು (ಸಾವಿರ ರೂ.) | ೬೩ | ೮೩ | ೯೨ | ೧೦೦ | ೭೨,೬೩೧ | ೯೧,೪೦೮ |
| ಮಾರುಕಟ್ಟೆಗಳು ಹೊಂದಿದ್ದ ಉಗ್ರಾಣಗಳು | ೨೨೧ | ೨೨೪ | ೨೨೭ | ೨೮೬ | ೨೮೯ | ೨೭೧ |
| ಲಾಭಗಳಿಸಿದ ಸಂಘಗಳು | ೭ | ೪ | ೨ | ೬ | ೭ | ೬ |
| ಗಳಿಸಿದ ಲಾಭ (ಸಾವಿರ ರೂ.) | ೨,೫೬೮ | ೧,೬೨೧ | ೮೦೦ | ೪,೫೦೬ | ೭,೬೧೫ | ೫,೮೮೨ |
| ನಷ್ಟ ಅನುಭವಿಸಿದ ಸಂಘಗಳು | | ೩ | ೫ | ೧ | – | ೧ |
| ಅನುಭವಿಸಿದ ನಷ್ಟ (ಸಾವಿರ ರೂ.) | – | ೩,೨೬೮ | ೬,೭೫೬ | ೧೬೫ | – | ೧೮೪ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

**ಪ್ರಾಥಮಿಕ ಹಾಲು ಪೂರೈಕೆ ಸಹಕಾರ ಸಂಘಗಳು**

ಈ ಸಹಕಾರ ಸಂಘಗಳ ಮೂಲ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಹೈನು ಉದ್ಯಮಕ್ಕೆ ಸಹಾಯಕವಾಗುವ ಮೂಲಭೂತ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುವಲ್ಲಿ ನೆರವಾಗುವುದಲ್ಲದೇ, ಸದಸ್ಯರು ಉತ್ಪಾದಿಸಿದ ಹಾಲನ್ನು ಶೇಖರಿಸಲು ಮತ್ತು ಮಾರಾಟ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡುವುದಾಗಿದೆ. ಮಂಡ್ಯ ಜಿಲ್ಲೆಯಲ್ಲಿ ೧೯೭೬ರ ನಂತರದ ವರ್ಷಗಳಲ್ಲಿ ಈ ರೀತಿಯ ಸಹಕಾರ ಸಂಘಗಳು ಬಹು ವ್ಯಾಪಕವಾಗಿ ಸ್ಥಾಪನೆಗೊಂಡವು. ಮುಂದೆ ಅಂತಹ ಸಂಘಗಳಿಗೆ ಸರ್ಕಾರದ ಉತ್ತೇಜನ ಸಹ ದೊರೆಯುವಂತಾಯಿತು. ೧೯೮೭ರಲ್ಲಿ ಮಂಡ್ಯ ಹಾಲು ಒಕ್ಕೂಟವನ್ನು ಸ್ಥಾಪಿಸಲಾಗಿ, ಹಿಂದೆ ಮೈಸೂರಿನ ಹಾಲು ಒಕ್ಕೂಟದ ಆಡಳಿತ ವ್ಯಾಪ್ತಿಯಲ್ಲಿದ್ದ ಜಿಲ್ಲೆಯ ಹಾಲು ಪೂರೈಕೆ ಸಹಕಾರ ಸಂಘಗಳನ್ನು ೧೯೮೮ರಲ್ಲಿ ಗೆಜ್ಜಲಗೆರೆಯಲ್ಲಿನ ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಗೆ ಒಳಪಡಿಸಲಾಯಿತು. ೧೯೯೮–೯೯ರಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ೬೮೩ ಹಾಲು ಪೂರೈಕೆ ಸಹಕಾರ ಸಂಘಗಳಿದ್ದವು. ಅವುಗಳಲ್ಲಿ ಸುಮಾರು ೨೦೦ ಸಹಕಾರ ಸಂಘಗಳು ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದವು. ೧೯೯೮–೯೯ನೇ ಸಾಲಿನಲ್ಲಿ ಸರಾಸರಿ ದಿನವೊಂದಕ್ಕೆ ೧.೩೯ ಲಕ್ಷ ಲೀಟರ್ ಹಾಲನ್ನು ಈ ಸಹಕಾರ ಸಂಘಗಳಿಂದ ಸಂಗ್ರಹಿಸಲಾಗಿತ್ತು.

**ಕೋಷ್ಟಕ ೬.೧೬ ಜಿಲ್ಲೆಯ ಹಾಲು ಪೂರೈಕೆ ಸಹಕಾರ ಸಂಘಗಳ ಕೆಲವು ಆಯ್ದ ವರ್ಷಗಳ ಪ್ರಗತಿ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| ಸಂಘಗಳ ಸಂಖ್ಯೆ | ೨೧೬ | ೩೪೪ | ೫೨೪ | ೫೯೫ | ೭೦೬ | ೭೨೨ |
| ಒಟ್ಟು ಸದಸ್ಯರು | ೭೨,೪೫೦ | ೧,೧೫,೩೮೪ | ೧,೫೦,೩೪೮ | ೧,೫೬,೮೯೬ | ೨,೦೨,೯೯೫ | ೨,೦೬,೧೧೪ |
| ಷೇರು ಬಂಡವಾಳ (ಸಾವಿರ ರೂ.) | ೭೨೫ | ೧,೧೫೫ | ೧,೫೦೪ | ೧,೭೪೦ | ೫,೨೫೫ | ೫,೩೪೫ |
| ಸರ್ಕಾರದ ಪಾಲು (ಸಾವಿರ ರೂ.) | – | – | ೩೨ | ೨೭೫ | – | – |
| ದುಡಿಯುವ ಬಂಡವಾಳ (ಸಾವಿರ ರೂ.) | ೮,೯೮೪ | ೧೩,೭೯೮ | ೨೨,೩೪೪ | ೩೦,೯೫೦ | ೭೪,೪೧೭ | ೭೧,೮೯೫ |
| ಕಾಯ್ದಿಟ್ಟ ಮತ್ತು ಇತರ ನಿಧಿಗಳು (ಸಾವಿರ ರೂ.) | ೭,೮೪೦ | ೧೨,೪೮೨ | ೧೯,೦೨೨ | ೨೯,೩೮೦ | ೭೧,೫೬೦ | ೬೦,೧೭೬ |
| ಖರೀದಿ (ಸಾವಿರ ರೂ.) | ೧೮,೪೨೭ | ೨೯,೩೪೮ | ೪೪,೭೦೫ | ೫೯,೧೨೦ | ೪,೮೮,೦೭೦ | ೪,೬೧,೨೭೧ |
| ಮಾರಾಟ (ಸಾವಿರ ರೂ.) | ೨೪,೩೬೧ | ೩೮,೭೯೮ | ೫೯,೧೧೦ | ೭೫,೭೫೦ | ೬,೨೧,೧೦೨ | ೫,೦೬,೬೫೭ |
| ಲಾಭ (ಸಾವಿರ ರೂ.) | ೩,೨೦೧ | ೫,೧೯೯ | ೭,೭೬೮ | ೮,೩೪೧ | ೧೭,೯೩೯ | ೨೩,೭೫೮ |
| ನಷ್ಟ (ಸಾವಿರ ರೂ.) | ೨೩ | ೫೩ | ೭೪ | ೬೪ | ೧೩೧ | ೧೧೨ |

ಆಧಾರ : ಜಿಲ್ಲಾ ಸಹಕಾರ ಇಲಾಖೆ , ಮಂಡ್ಯ

**ಕೃಷಿಯೇತರ ಸಾಲ ಕ್ಷೇತ್ರ: (ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು)**

ಕೃಷಿಯೇತರ ಸಾಲ ನೀಡಿಕೆ ಕ್ಷೇತ್ರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು ಮುಖ್ಯವಾಗಿರುತ್ತವೆ. ಪಟ್ಟಣ ಸಹಕಾರ ಬ್ಯಾಂಕುಗಳು ಠೇವಣಿಗಳನ್ನು ಆಕರ್ಷಿಸುವುದರ ಮೂಲಕ ಸದಸ್ಯರಲ್ಲಿ

ಮತ್ತು ಸದಸ್ಯೇತರರಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸುತ್ತವೆ. ಮಿಗಿಲಾಗಿ ಸಣ್ಣ ಪುಟ್ಟ ವರ್ತಕರು, ಕುಶಲಕರ್ಮಿಗಳು ಮತ್ತು ಮಧ್ಯಮ ವರ್ಗದವರಿಗೆ ಸಾಲವನ್ನು ನೀಡುತ್ತವೆ. ನೌಕರರ ಪತ್ತಿನ ಸಹಕಾರ ಸಂಘಗಳು ನೌಕರ ವರ್ಗದವರಿಗೆ ಸಾಲವನ್ನು ಒದಗಿಸುತ್ತವೆ. ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂರು ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಮಂಡ್ಯ ನಗರ ಸಹಕಾರಿ ಬ್ಯಾಂಕು ಇಂತಹ ಪ್ರಥಮ ಸಹಕಾರಿ ಬ್ಯಾಂಕಾಗಿ ೧೯೮೪ರಲ್ಲಿ ಸ್ಥಾಪನೆಯಾಯಿತು. ಜಿಲ್ಲೆಯ ಮೊದಲ ಮಹಿಳಾ ಸಹಕಾರಿ ಬ್ಯಾಂಕಾದ ಮಂಡ್ಯ ಲೋಕಪಾವನಿ ಮಹಿಳಾ ಸಹಕಾರ ಬ್ಯಾಂಕು ೧೯೯೭ರ ಮಾರ್ಚ್ ೧೭ ರಂದು ನೋಂದಣಿಯಾಯಿತು.

**ಕೋಷ್ಟಕ ೬.೧೭ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಕೆಲವು ಆಯ್ದ ವರ್ಷಗಳ ವಿವರ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦–೮೧ | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| **ಪಟ್ಟಣ ಸಹಕಾರ ಬ್ಯಾಂಕುಗಳು :** | | | | | | |
| ಸಂಖ್ಯೆ | – | ೧ | ೧ | ೧ | ೩ | ೩ |
| ಸದಸ್ಯರ ಸಂಖ್ಯೆ | – | ೧,೭೩೪ | ೨,೧೯೦ | ೩,೦೩೬ | ೮,೫೨೬ | ೮,೫೨೫ |
| ಷೇರು ಬಂಡವಾಳ (ಸಾವಿರ ರೂ.) | – | ೯೮೨ | ೧,೦೨೯ | ೧,೨೯೫ | ೧೨,೩೮೮ | ೧೧,೨೬೮ |
| ಕಾಯ್ದಿಟ್ಟ ಹಾಗೂ ಇತರ ನಿಧಿಗಳು (ಸಾವಿರ ರೂ.) | – | – | ೬೧೦ | ೧,೦೧೧ | ೩,೦೪೬ | ೪,೪೨೪ |
| ಠೇವುಗಳು (ಸಾವಿರ ರೂ.) | – | ೫,೨೩೫ | ೮,೭೫೫ | ೧೦,೦೬೪ | ೮೨,೦೩೭ | ೧,೦೪,೬೩೭ |
| ನೀಡಿದ ಸಾಲ (ಸಾವಿರ ರೂ.) | – | ೨,೭೨೪ | ೪,೪೯೦ | ೬,೭೧೫ | ೧,೩೦೮ | ೨,೫೦೦ |
| ದುಡಿಯುವ ಬಂಡವಾಳ (ಸಾವಿರ ರೂ.) | – | ೩,೮೯೯ | ೪,೫೬೧ | ೧೨,೧೭೧ | ೯೯,೬೪೫ | ೧,೨೬,೯೦೩ |
| ಲಾಭ (ಸಾವಿರ ರೂ.) | – | ೨೦೮ | ೨೮೦ | ೩೫೯ | ೯೧೪ | ೨,೫೨೫ |
| **ಕೃಷಿಯೇತರ ಪತ್ತಿನ ಸಂಘಗಳು:** | | | | | | |
| ಸಂಖ್ಯೆ | ೩೦ | ೩೨ | ೩೩ | ೩೬ | ೪೨ | ೪೩ |
| ಸದಸ್ಯರ ಸಂಖ್ಯೆ | ೧೦,೨೩೨ | ೧೧,೮೨೧ | ೧೨,೭೪೩ | ೧೬,೮೨೫ | ೧೯,೮೪೩ | ೨೦,೨೩೯ |
| ಷೇರು ಬಂಡವಾಳ (ಸಾವಿರ ರೂ.) | ೮,೨೬೮ | ೮,೭೯೪ | ೮,೯೧೬ | ೪೧,೬೮೭ | ೩೫,೮೦೩ | ೩೬,೮೭೭ |
| ದುಡಿಯುವ ಬಂಡವಾಳ (ಸಾವಿರ ರೂ.) | ೨೮,೪೮೮ | ೨೯,೫೩೪ | ೩೧,೬೩೮ | ೫೪,೯೮೧ | ೨,೫೬,೪೩೦ | ೨,೯೪,೪೬೩ |
| ಕಾಯ್ದಿಟ್ಟ ಹಾಗೂ ಇತರ ನಿಧಿಗಳು (ಸಾವಿರ ರೂ.) | ೭೨೮ | ೯೫೪ | ೧,೧೨೪ | ೨,೧೧೨ | ೧೯,೫೭೯ | ೧೯,೬೭೭ |
| ಠೇವುಗಳು (ಸಾವಿರ ರೂ.) | ೭೫೨ | ೮೨೪ | ೯೭೨ | ೮,೩೩೭ | ೨೭,೯೬೮ | ೨೦,೦೬೮ |
| ನೀಡಿದ ಸಾಲ (ಸಾವಿರ ರೂ.) | ೭,೮೨೦ | ೯,೯೭೦ | ೧೨,೫೬೦ | ೨೩,೯೯೭ | ೧,೦೮,೩೮೬ | ೧,೧೫,೦೧೩ |

(ಈ ಕೃಷಿಯೇತರ ಪತ್ತಿನ ಸಂಘಗಳು ಮುಖ್ಯವಾಗಿ ನೌಕರರ ಪತ್ತಿನ ಸಂಘಗಳು ಮತ್ತು ಉಪಾಧ್ಯಾಯರ ಪತ್ತಿನ ಸಂಘಗಳಾಗಿವೆ)

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ.

**ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು**

ಗ್ರಾಹಕರಿಗೆ ದಿನಬಳಕೆ ವಸ್ತುಗಳನ್ನು ಯೋಗ್ಯ ಬೆಲೆಗೆ ವಿತರಿಸುವ ಕಾರ್ಯದಲ್ಲಿ ಬಳಕೆದಾರರ ಸಹಕಾರ ಸಂಘಗಳ ಪಾತ್ರ ಬಹಳ ಮಹತ್ವದ್ದು. ಇವು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ತಕ್ಕಮಟ್ಟಿಗೆ ತಡೆಗಟ್ಟುವಲ್ಲಿ ತಮ್ಮ ಪಾಲಿನ ಕಾರ್ಯವನ್ನು ನಿರ್ವಹಿಸುತ್ತಿವೆ. ಆ ಪ್ರಯುಕ್ತ ಮಂಡ್ಯ ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು ಹಾಗೂ ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ಕಾರ್ಯನಿರ್ವಹಿಸುತ್ತಿವೆ. ಈ ಉದ್ದೇಶದ ಸಹಕಾರ ಸಂಘಗಳಲ್ಲಿ ೧೯೧೨ರಲ್ಲಿ ನೋಂದಣಿ ಪಡೆದ ಕೃಷ್ಣರಾಜಸಾಗರ ಗ್ರಾಹಕರ ಸಹಕಾರ ಸಂಘ ಜಿಲ್ಲೆಯ ಪ್ರಥಮ ಸಂಘವಾಗಿದೆ. ನಾಗಮಂಗಲ ಗ್ರಾಹಕರ ಸಹಕಾರ ಸಂಘ ೧೯೩೦ರಲ್ಲಿ ನೋಂದಣಿಯಾಯಿತು. ಮುಂದೆ, ಅದರಲ್ಲೂ ಎರಡನೆಯ ಜಾಗತಿಕ ಯುದ್ಧ ಕಾಲದಲ್ಲಿ ಈ ಬಗೆಯ ಹಲವಾರು ಸಹಕಾರ ಸಂಘಗಳು ಜಿಲ್ಲೆಯಲ್ಲಿ ಸ್ಥಾಪನೆಗೊಂಡವು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಹಕರ ಚಳವಳಿಗೆ ಉತ್ತೇಜನ ದೊರೆತ ಕಾರಣ, ಇಂತಹ ಸಂಘಗಳ ಸಂಘಟನೆಯ ಜೊತೆಗೆ ಅವುಗಳಿಗೆ ಅಗತ್ಯವಾದ ವಸ್ತುಗಳನ್ನು ಸಗಟಾಗಿ ಪೂರೈಸಲು ಅನುಕೂಲವಾಗುವಂತೆ ೧೯೬೪ರಲ್ಲಿ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘವನ್ನು ಮಂಡ್ಯದಲ್ಲಿ ಸ್ಥಾಪಿಸಲಾಯಿತು. ಇತ್ತೀಚಿಗೆ ಈ ಸಹಕಾರ ಸಂಘಗಳಲ್ಲೂ 'ವ್ಯಾಪಾರ ಅಭಿವೃದ್ಧಿ ಯೋಜನೆ'ಯನ್ನು ಅನುಷ್ಠಾನಗೊಳಿಸಿ ಅವನ್ನು ಲಾಭದಾಯಕ ಘಟಕಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುತ್ತಿದೆ.

**ಕೋಷ್ಟಕ ೬.೧೮ ಜಿಲ್ಲೆಯ ಬಳಕೆದಾರರ ಸಹಕಾರ ಸಂಘಗಳ ವಿವರ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ |
| ಸಂಘಗಳು | ೫೮ | ೭೦ | ೮೨ | ೮೬ | ೭೦ | ೬೯ |
| ಒಟ್ಟು ಸದಸ್ಯರು | ೧೬,೫೨೧ | ೧೮,೩೪೧ | ೨೦,೯೩೧ | ೨೨,೫೫೬ | ೩೧,೪೧೪ | ೨೯,೬೪೫ |
| ಷೇರು ಬಂಡವಾಳ (ಸಾವಿರ ರೂ.) | ೫೯೮ | ೭೫೨ | ೯೭೮ | ೩,೦೦೫ | ೩,೧೪೧ | ೨,೯೬೪ |
| ಸರ್ಕಾರದ ಪಾಲು (ಸಾವಿರ ರೂ.) | ೧೫೪ | ೧೭೬ | ೧೯೨ | ೨೦೧ | ೪೩೪ | ೩೪೪ |
| ಕಾಯ್ದಿಟ್ಟ ಹಾಗೂ ಇತರ ನಿಧಿಗಳು (ಸಾವಿರ ರೂ.) | ೨೯೦ | ೪೨೯ | ೬೪೫ | ೨,೦೧೮ | ೧,೩೫೨ | ೧,೩೧೭ |
| ದುಡಿಯುವ ಬಂಡವಾಳ (ಸಾವಿರ ರೂ.) | ೯೫೯ | ೧,೨೮೧ | ೧,೬೧೦ | ೫,೫೧೦ | ೬,೧೯೮ | ೬,೧೪೦ |
| ಖರೀದಿ (ಸಾವಿರ ರೂ.) | ೧೦,೫೨೮ | ೧೨,೮೪೧ | ೧೫,೩೧೨ | ೪೩,೧೪೬ | ೪೩,೮೩೭ | ೪೩,೯೦೮ |
| ಮಾರಾಟ (ಸಾವಿರ ರೂ.) | ೧೧,೪೭೫ | ೧೩,೯೧೦ | ೧೬,೪೨೪ | ೪೬,೫೪೦ | ೪೭,೫೫೧ | ೪೪,೯೫೮ |
| ಲಾಭ (ಸಾವಿರ ರೂ.) | ೨೩೪ | ೨೭೪ | ೩೨೬ | ೧,೨೦೧ | ೧,೩೬೪ | ೪೭೫ |
| ನಷ್ಟ (ಸಾವಿರ ರೂ.) | ೫೫ | ೮೫ | ೧೧೭ | ೧,೧೬೪ | ೧೮೫ | ೨೦೦ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

## ಗೃಹ ನಿರ್ಮಾಣ ಸಹಕಾರ ಸಂಘಗಳು

ಸದಸ್ಯರಿಗೆ ಕಡಿಮೆ ಬೆಲೆಯಲ್ಲಿ ಗೃಹ ನಿವೇಶನಗಳನ್ನು ಒದಗಿಸುವುದು, ಮನೆ ನಿರ್ಮಾಣ, ಮನೆ ದುರಸ್ತಿ ಮತ್ತು ವಿಸ್ತರಣೆಗೆ ಹಾಗೂ ಕಟ್ಟಿದ ಮನೆಗಳನ್ನು ಕೊಳ್ಳಲು ಸಾಲವನ್ನು ಒದಗಿಸುವುದೇ ಮುಂತಾದವು ಗೃಹ ನಿರ್ಮಾಣ ಸಹಕಾರ ಸಂಘಗಳ ಪ್ರಮುಖ ಉದ್ದೇಶಗಳಾಗಿವೆ. ಈ ಬಗೆಯ ಸಂಘಗಳಲ್ಲಿ ಹರಿಜನ-ಗಿರಿಜನರಿಗೆ ವಸತಿ ಸೌಲಭ್ಯ ಒದಗಿಸುವ ಪ್ರತ್ಯೇಕ ಸಹಕಾರ ಸಂಘಗಳೂ ಉಂಟು. ಸಾಮಾನ್ಯ ಗೃಹನಿರ್ಮಾಣ ಸಹಕಾರ ಸಂಘಗಳಲ್ಲಿ ೧೯೨೭ರ ಡಿಸೆಂಬರ್ ೨೦ರಂದು ನೋಂದಣಿಯಾದ ಕೆರಗೋಡು ಗೃಹ ನಿರ್ಮಾಣ ಸಹಕಾರ ಸಂಘ ಜಿಲ್ಲೆಯ ಪ್ರಥಮ ಸಂಘವಾಗಿದ್ದು, ನಂತರ ಅದೇ ತಿಂಗಳ ೨೮ ರಂದು ಮಂಡ್ಯ ಗೃಹ ನಿರ್ಮಾಣ ಸಹಕಾರ ಸಂಘ ಅಂತಹ ಎರಡನೇಯ ಸಂಘವಾಗಿ ನೋಂದಣಿಯಾಯಿತು. ಹರಿಜನ-ಗಿರಿಜನರಿಗೆ ಮೀಸಲಾದ ಸಹಕಾರ ಸಂಘಗಳಲ್ಲಿ ೧೯೪೭ರಲ್ಲಿ ನೋಂದಣಿಯಾದ ಮಳವಳ್ಳಿ ತಾಲೂಕಿನ ಪೂರಿಗಾಲಿಯ ಹರಿಜನ-ಗಿರಿಜನ ಗೃಹ ನಿರ್ಮಾಣ ಸಹಕಾರ ಸಂಘ ಮೊದಲನೇಯದಾಗಿದೆ. ೧೯೯೮-೯೯ರಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ೩೬ ಗೃಹ ನಿರ್ಮಾಣ ಸಹಕಾರ ಸಂಘಗಳಿದ್ದವು. ಜಿಲ್ಲಾ ಖಾಸಗಿ ಶಾಲಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಮಂಡ್ಯ (೧೯೮೩), ತಾಲೂಕು ಗೃಹನಿರ್ಮಾಣ ಸಹಕಾರ ಸಂಘ, ಪಾಂಡವಪುರ (೧೯೪೭), ಇವು ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಾಗಿವೆ.

**ಕೋಷ್ಟಕ ೬.೧೯ ೧೯೮೦-೮೧ ರಿಂದ ೨೦೦೧-೦೨ರವರೆಗಿನ ಕೆಲವು ವರ್ಷಗಳಿಗೆ ಜಿಲ್ಲೆಯ ಗೃಹ ನಿರ್ಮಾಣ ಸಹಕಾರ ಸಂಘಗಳ ವಿವರ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೧-೦೨ |
| ಸಂಘಗಳ ಸಂಖ್ಯೆ | ೩೦ | ೩೩ | ೩೫ | ೩೬ | ೩೭ | ೩೫ |
| ಸದಸ್ಯರ ಸಂಖ್ಯೆ | ೯,೮೩೯ | ೧೦,೬೩೨ | ೧೧,೨೧೪ | ೧೧,೮೦೯ | ೯,೫೪೫ | ೧೦,೭೪೦ |
| ಷೇರು ಬಂಡವಾಳ (ಸಾವಿರ ರೂ.) | ೨,೧೦೨ | ೨,೧೧೬ | ೨,೧೨೭ | ೨,೧೫೩ | ೧೫,೬೯೭ | ೫,೭೧೮ |
| ದುಡಿಯುವ ಬಂಡವಾಳ (ಸಾವಿರ ರೂ.) | ೧೩,೬೭೮ | ೧೩,೬೯೭ | ೧೩,೭೧೨ | ೧೩,೭೪೬ | ೯೩,೩೮೦ | ೫೦,೪೫೨ |
| ಸಾಲಗಳು (ಸಾವಿರ ರೂ.) | ೬,೧೧೦ | ೮,೩೧೫ | ೧೦,೨೪೬ | ೧೧,೬೪೮ | ೬೫,೧೦೫ | ೨೬,೬೨೨ |
| ಕೊಡಮಾಡಿದ (ಸಾವಿರ ರೂ.) | ೮೯೬ | ೧,೦೨೬ | ೧,೨೦೪ | ೧,೩೦೭ | ೪೦,೯೫೮ | ೬,೨೧೯ |
| ಬರಬೇಕಾದ (ಸಾವಿರ ರೂ.) | ೯೫೬ | ೧,೧೨೪ | ೧,೪೩೬ | ೨,೦೦೨ | ೫೪,೨೧೭ | ೨೦,೯೭೬ |
| ಅವಧಿ ಮೀರಿದ (ಸಾವಿರ ರೂ.) | ೧೩೬ | ೨೬೮ | ೭೨೪ | ೧,೫೭೮ | ೩೫,೮೩೨ | ೧೬,೬೧೭ |
| ಸದಸ್ಯರಿಗೆ ಹಂಚಿದ ನಿವೇಶನಗಳ ಸಂಖ್ಯೆ | ೧೯೯ | ೨೫೪ | ೧೫೨ | ೨೪೪ | ೩೩ | ೪೦ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

## ಕೈಗಾರಿಕಾ ಸಹಕಾರ ಸಂಘಗಳು

ಕೈಗಾರಿಕಾ ಸಹಕಾರ ಸಂಘಗಳ ಸ್ಥಾಪನೆಯ ಪ್ರಮುಖ ಉದ್ದೇಶ ಗುಡಿ ಕೈಗಾರಿಕೆ ಮತ್ತು ಗ್ರಾಮೋದ್ಯೋಗಗಳನ್ನು ಕೈಗೆತ್ತಿಕೊಂಡ ಸದಸ್ಯರಿಗೆ ಸಾಲ-ಸೌಲಭ್ಯ ಒದಗಿಸುವುದು,ಕೈಗಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಸದಸ್ಯರಿಗೆ

ಒದಗಿಸುವುದು, ಅಗತ್ಯವಾದ ತಾಂತ್ರಿಕ ಸಲಹೆಯನ್ನು ಏರ್ಪಾಡು ಮಾಡುವುದು ಮತ್ತು ಸದಸ್ಯರು ಉತ್ಪಾದಿಸಿದ ವಸ್ತುಗಳ ಮಾರಾಟ ವ್ಯವಸ್ಥೆ ಮಾಡುವುದಾಗಿದೆ. ಎಣ್ಣೆ ಗಾಣ, ಕುಂಬಾರಿಕೆ, ಚರ್ಮೋದ್ಯೋಗ, ಕೊಟ್ಟಣದ ಅಕ್ಕಿ, ಬೆಲ್ಲ ಮತ್ತು ಖಂಡಸಾರಿ, ನಾರಿನ ಕೈಗಾರಿಕೆ, ರೇಷ್ಮೆ ಮುಂತಾದ ವೃತ್ತಿಗೆ ಸಂಬಂಧಿಸಿದಂತೆ ಹಲವು ಕೈಗಾರಿಕಾ ಸಹಕಾರ ಸಂಘಗಳು ಮಂಡ್ಯ ಜಿಲ್ಲೆಯಲ್ಲಿದ್ದರೂ, ನೇಕಾರರ ಸಹಕಾರ ಸಂಘಗಳು ಮತ್ತು ಕೈಗಾರಿಕಾ ಸರಕುಗಳ ಮಾರಾಟ ಸಹಕಾರ ಸಂಘಗಳೇ ಪ್ರಮುಖವಾಗಿವೆ. ಜಿಲ್ಲೆಯ ಪ್ರಥಮ ಕೈಗಾರಿಕಾ ಸಹಕಾರ ಸಂಘ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಹತ್ತಿ ಮತ್ತು ರೇಷ್ಮೆ ನೇಯ್ಗೆ ಸಹಕಾರ ಸಂಘ ೧೯೧೪ರಲ್ಲಿ ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲಿನಲ್ಲಿ ನೋಂದಣಿಯಾಯಿತು.

**ಕೋಷ್ಟಕ ೬.೨೦ ೧೯೮೫–೮೬ರಿಂದ ೨೦೦೧–೦೨ರವರೆಗಿನ ಕೆಲವು ವರ್ಷಗಳಿಗೆ ಮಂಡ್ಯ ಜಿಲ್ಲೆಯ ಕೈಗಾರಿಕಾ ಸಹಕಾರ ಸಂಘಗಳ ವಿವರ**

| ವಿವರ | ವರ್ಷ | | | | |
|---|---|---|---|---|---|
| | ೧೯೮೫–೮೬ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೧–೦೨ |
| ಸಂಘಗಳ ಸಂಖ್ಯೆ | ೬೮ | ೮೦ | ೬೯ | ೫೬ | ೫೪ |
| ಒಟ್ಟು ಸದಸ್ಯರು | ೪,೭೨೧ | ೫,೨೭೨ | ೬,೮೦೯ | ೮,೪೮೩ | ೮,೫೬೭ |
| ಷೇರು ಬಂಡವಾಳ (ಸಾವಿರ ರೂ.) | ೧,೫೮೦ | ೧,೬೨೮ | ೨,೦೫೩ | ೨,೦೨೨ | ೨,೦೪೨ |
| ಸರ್ಕಾರದ ಪಾಲು (ಸಾವಿರ ರೂ.) | ೯೨ | ೧೩೭ | ೬೬ | ೧,೨೮೬ | ೧,೨೯೨ |
| ದುಡಿಯುವ ಬಂಡವಾಳ (ಸಾವಿರ ರೂ.) | ೫,೨೪೦ | ೫,೯೧೯ | ೯,೩೨೧ | ೫,೬೧೧ | ೬,೮೩೩ |
| ಖರೀದಿ/ಉತ್ಪಾದನೆ (ಸಾವಿರ ರೂ.) | ೪೨೧ | ೭೨೬ | – | ೫೩೭ | ೬೫೧ |
| ಮಾರಾಟ (ಸಾವಿರ ರೂ.) | ೩೮೫ | ೬೧೦ | – | ೧,೦೯೪ | ೧,೧೧೦ |
| ಲಾಭ (ಸಾವಿರ ರೂ.) | ೨೯ | ೨೬ | ೧,೬೧೬ | ೯೮ | ೧೦೬ |
| ನಷ್ಟ (ಸಾವಿರ ರೂ.) | ೫೨ | ೬೦ | ೨,೦೬೨ | ೧,೨೦೬ | ೩೦೫ |

ಆಧಾರ : ಜಿಲ್ಲಾ ಸಹಕಾರ ಇಲಾಖೆ, ಮಂಡ್ಯ

## ಮಂಡ್ಯ ಜಿಲ್ಲಾ ಸಹಕಾರಿ ಯೂನಿಯನ್, ಮಂಡ್ಯ

ಸಹಕಾರಿ ಆಂದೋಲನದ ವ್ಯಾಪಕ ಮತ್ತು ಹಿತಕರ ಬೆಳವಣಿಗೆಯಲ್ಲಿ ಸಹಕಾರಿ ಯೂನಿಯನ್‌ಗಳು ಪ್ರಾರಂಭದಿಂದಲೂ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ಮೂಲಭೂತ ಸಹಕಾರ ತತ್ವಗಳ ಪ್ರಚಾರ, ಸಂಘಗಳ ರಚನೆಗೆ ಮಾರ್ಗದರ್ಶನ, ಸದಸ್ಯರಿಗೆ ಮತ್ತು ಆಡಳಿತ ವರ್ಗದವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ, ಸಹಕಾರಿ ಧೋರಣೆಯ ನಿರೂಪಣೆ, ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ, ಇವೇ ಮುಂತಾದವು ಈ ಸಂಸ್ಥೆಗಳ ಪ್ರಮುಖ ಉದ್ದೇಶಗಳು. ರಾಜ್ಯ ಪುನರ್ರಚನೆಯ ನಂತರ ರಾಜ್ಯ ಮಟ್ಟದಲ್ಲಿ ಪುನರ್ರಚನೆಗೊಂಡ ರಾಜ್ಯ ಸಹಕಾರಿ ಯೂನಿಯನ್ (ಈಗ ಸಹಕಾರ ಮಹಾಮಂಡಳ), ಬೆಂಗಳೂರು, ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

ಮಂಡ್ಯ ಜಿಲ್ಲೆಯ ಕಾರ್ಯವ್ಯಾಪ್ತಿಯನ್ನು ಹೊಂದಿದಂತೆ ಮಂಡ್ಯದಲ್ಲಿ ೧೯೬೦ರಲ್ಲಿ ಸ್ಥಾಪನೆಯಾದ ಮಂಡ್ಯ ಜಿಲ್ಲಾ ಸಹಕಾರಿ ಯೂನಿಯನ್, ರಾಜ್ಯ ಸಹಕಾರ ಮಹಾಮಂಡಳದ ಮಾರ್ಗದರ್ಶನದ ಮೇರೆಗೆ ಸಹಕಾರಿ ತತ್ವಗಳಾದ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ಸಹಕಾರದ ಉದ್ದೇಶ ಹಾಗೂ ತತ್ವಗಳನ್ನು ಪ್ರಚಾರ ಮಾಡಿ ಸಹಕಾರ ಚಳವಳಿಯ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಅಲ್ಲದೆ ಜಿಲ್ಲೆಯಲ್ಲಿನ ಎಲ್ಲಾ ತರಹದ ಸಹಕಾರ ಸಂಘಗಳನ್ನು ಬಲಪಡಿಸುವುದು, ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಮಾರ್ಗದರ್ಶನ ನೀಡುವುದು, ಮುಂತಾದವು ಈ ಸಂಸ್ಥೆಯ ಉದ್ದೇಶಗಳಲ್ಲಿ ಸೇರಿವೆ. ೨೦೧೧-೧೨ರಲ್ಲಿದ್ದಂತೆ ೯೪ ಸಹಕಾರ ಸಂಘಗಳು ಈ ಯೂನಿಯನ್ನಿನ ಆಜೀವ ಸದಸ್ಯತ್ವವನ್ನು ಪಡೆದಿದ್ದವು. ಆಜೀವ ಸದಸ್ಯತ್ವ ಚಂದಾ, ಕಟ್ಟಡದ ಬಾಡಿಗೆ, ಸಹಕಾರ ಸಂಘಗಳ ಸಹಾಯಧನ ಮತ್ತು ವಂತಿಗೆಗಳು, ಮಹಾಮಂಡಳ ನೀಡುವ ವಿಶೇಷ ಕಾರ್ಯಕ್ರಮಗಳ ಸಹಾಯಧನ ಮತ್ತು ಸಿಬ್ಬಂದಿಗಾಗಿ ಮಹಾಮಂಡಳ ನೀಡುವ ಸಹಾಯ ಧನ, ಇವು ಜಿಲ್ಲಾ ಯೂನಿಯನ್ನಿನ ಆದಾಯದ ಮೂಲಗಳಾಗಿವೆ. ರಾಜ್ಯ ಸಹಕಾರ ಮಹಾಮಂಡಳದಿಂದ ನೇಮಕಗೊಂಡ ಒಬ್ಬ ಕ್ಷೇತ್ರ ಸಿಬ್ಬಂದಿ ಈ ಯೂನಿಯನ್ನಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದು, ಜಿಲ್ಲಾ ಯೂನಿಯನ್ನಿನಿಂದ ನೇಮಕ ಮಾಡಲ್ಪಟ್ಟ ಒಬ್ಬ ವ್ಯವಸ್ಥಾಪಕ, ಒಬ್ಬ ಸಹಾಯಕ, ಬೆರಳಚ್ಚುಗಾರ ಮತ್ತು ಒಬ್ಬ ಅಟೆಂಡರ್ ಈ ಯೂನಿಯನ್ನಿನಲ್ಲಿ ಕೆಲಸ ನಿರ್ವಹಿಸುತ್ತಿರುವರು. ಜಿಲ್ಲಾ ಯೂನಿಯನ್ ಮಂಡ್ಯ ನಗರದ ಹೃದಯ ಭಾಗದಲ್ಲಿ ೨೪ ಲಕ್ಷ ರೂ. ವೆಚ್ಚದಲ್ಲಿ ಕಟ್ಟಿರುವ ವಿಶಾಲವಾದ ಸ್ವಂತ ಕಟ್ಟಡವನ್ನು ಹೊಂದಿದೆ.

## ವ್ಯಾಪಾರ ಮತ್ತು ವಾಣಿಜ್ಯ

ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಾಗುತ್ತಿದ್ದ ವ್ಯಾಪಾರ ವಹಿವಾಟಿನ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲ. ಆಗಾಗಿನ ರಾಜಕೀಯ ಬದಲಾವಣೆಗಳು ಮುಕ್ತ ವ್ಯಾಪಾರಕ್ಕೆ ಅಡಚಣೆ ಉಂಟುಮಾಡಿದ್ದರೂ, ಪ್ರಮುಖ ಮಾರುಕಟ್ಟೆಗಳಿಗೆ ವ್ಯಾಪಾರದ ಸರಕುಗಳು ರವಾನೆಯಾಗುತ್ತಿದ್ದವು. ಹೊಯ್ಸಳರು ಮತ್ತು ನಂತರ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಉತ್ತಮ ರಸ್ತೆ-ಸಂಪರ್ಕ ವ್ಯವಸ್ಥೆಯ ಅಭಾವವಿದ್ದರೂ, ನಿಶ್ಚಿತ ಪ್ರಮಾಣದ ವ್ಯಾಪಾರ ನಡೆಯುತ್ತಿತ್ತು. ಎತ್ತಿನ ಗಾಡಿ ಮತ್ತು ಪ್ರಾಣಿಗಳು ಸಾರಿಗೆಯ ಮುಖ್ಯ ಸಾಧನಗಳಾಗಿದ್ದವು. ಸೇನಾ ಪಡೆಗಳ ಸಂಚಾರಕ್ಕಾಗಿ ನಿರ್ಮಿಸಲಾದ ಸುಧಾರಿತ ರಸ್ತೆಗಳನ್ನೇ ಪ್ರಾಣಿಗಳ ಮೇಲೆ ಸರಕುಗಳನ್ನು ಹೇರಿಕೊಂಡು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಬಳಸಲಾಗುತ್ತಿತ್ತು.

ಟಿಪ್ಪು ಸುಲ್ತಾನನ ಕಾಲದವರೆಗೆ ಯಾವುದೇ ರೀತಿಯ ವ್ಯಾಪಾರ ನಿಬಂಧನೆಗಳಿರಲಿಲ್ಲವೆಂದು ಹೇಳಲಾಗುತ್ತದೆ. ಸದಾ ಕಾಲವೂ ಯುದ್ಧದಲ್ಲೇ ನಿರತನಾಗಿರುತ್ತಿದ್ದರೂ, ಟಿಪ್ಪು ಹಲವಾರು ವಾಣಿಜ್ಯ ನಿಬಂಧನೆಗಳನ್ನು ಜಾರಿಗೆ ತಂದಿದ್ದನು. ಅದರಿಂದಾಗಿ ಈತನನ್ನು ಸಾಮ್ರಾಜ್ಯದ ಮುಖ್ಯ ವ್ಯಾಪಾರಿ ಎಂದೂ ಕರೆಯಲಾಗುತ್ತಿತ್ತು. ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡ ಕೂಡಲೆ ಇವನು ವ್ಯಾಪಾರವನ್ನು ಕ್ರಮಗೊಳಿಸುವಲ್ಲಿ ಮಹತ್ತರ ಬದಲಾವಣೆಗಳನ್ನು ಜಾರಿಗೊಳಿಸಿದ್ದನು. ವಿದೇಶಿಯರೊಂದಿಗೆ ಕೈಗೊಳ್ಳುವ ಯಾವುದೇ ವಾಣಿಜ್ಯ ವ್ಯವಹಾರ ಅಪಾಯಕರವೆಂದು ಈತನು ಭಾವಿಸಿದ್ದನು. ಪ್ರಾರಂಭದ ವರ್ಷಗಳಲ್ಲಿ ರಫ್ತು ವ್ಯಾಪಾರವನ್ನು ಪೂರ್ಣವಾಗಿ ನಿಷೇಧಿಸಿದ್ದನು. ಸ್ಥಳೀಯವಾಗಿ ಉತ್ಪಾದಿಸಲ್ಪಟ್ಟ ಎಲ್ಲಾ ಧಾನ್ಯ ಹಾಗೂ ವಸ್ತುಗಳು ರಾಜ್ಯದಲ್ಲೇ ಉಳಿಯಬೇಕೆಂದು ಆಜ್ಞಾಪಿಸಿದ್ದನು. ರಫ್ತು ವ್ಯಾಪಾರವನ್ನು ನಿಷೇಧಿಸಿ ಉತ್ಪಾದಿತ ವಸ್ತುಗಳು ಆಯಾ ಪ್ರದೇಶದಲ್ಲೇ ಗರಿಷ್ಟ ಪ್ರಮಾಣದಲ್ಲಿ ಬಳಕೆಯಾಗುವಂತೆ ಕ್ರಮ ಕೈಗೊಂಡಿದ್ದನು. ಸ್ವಾವಲಂಬನೆ ಮತ್ತು ಬೆಲೆ ಸ್ಥಿರತೆಯಂತಹ ದ್ವಂದ್ವ ಕಾರ್ಯನೀತಿಯನ್ನು ಅನುಸರಿಸಿದ್ದನು. ಈ ಕ್ರಮಗಳು ಸ್ಥಳೀಯ ತಯಾರಿಕೆ ಹಾಗೂ ಉತ್ಪಾದನೆಗೆ ಉತ್ತೇಜನ ದೊರಕಿಸಿಕೊಟ್ಟವು. ಟಿಪ್ಪು ಒಮ್ಮೆ ಶ್ರೀರಂಗಪಟ್ಟಣದ ಗಂಜಾಂನಲ್ಲಿ ತಯಾರಾದ ವಸ್ತ್ರವನ್ನು ವಿದೇಶದಲ್ಲಿ ತಯಾರಾದ ರುಮಾಲಿನ ವಸ್ತ್ರದೊಂದಿಗೆ ಪ್ರದರ್ಶಿಸಿ, ಗಂಜಾಂನ ವಸ್ತ್ರದ ಗುಣಮಟ್ಟದ ಶ್ರೇಷ್ಟತೆ ಎತ್ತಿಹಿಡಿದಿದ್ದನ್ನು ದಾಖಲಿಸಲಾಗಿದೆ.

ಟಿಪ್ಪುವಿನ ಆಡಳಿತ ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಅಭಿವೃದ್ಧಿ ಹೊಂದಿದ್ದವು. ಟಿಪ್ಪುವು ಬ್ರಿಟೀಷರ ಬದ್ಧ ವೈರಿಯಾಗಿದ್ದರೂ, ವಾಣಿಜ್ಯ ವ್ಯಾಪಾರ ಕ್ಷೇತ್ರದಲ್ಲಿ ಬ್ರಿಟೀಷರು ಹೊಂದಿದ್ದ ನೈಪುಣ್ಯತೆಯನ್ನು ತಾನೂ ತಿಳಿದುಕೊಳ್ಳುವಲ್ಲಿ ಹಿಂದೆ ಬೀಳಲಿಲ್ಲ. ಆತನು ಆಂತರಿಕ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದ ರಕ್ಷಣೆ ಮತ್ತು ಬೆಳವಣಿಗೆಗೆ ಬ್ರಿಟೀಷ್ ಮಾದರಿಯ ವ್ಯವಸ್ಥೆಯನ್ನೇ ಅನುಕರಿಸಲು ಕ್ರಮ ಕೈಗೊಂಡಿದ್ದನು. ಟಿಪ್ಪುವಿನ ಆಡಳಿತವು ಒಬ್ಬ ಬಲಿಷ್ಠ ರಾಜನ ಮತ್ತು ದೃಢ ಸಂಕಲ್ಪದ ವ್ಯಾಪಾರಿ ಬುದ್ಧಿಯ ಗುಣಗಳಿಂದ ಕೂಡಿತ್ತು. ರಾಜ್ಯದ ಆಂತರಿಕ ಮತ್ತು ಅಂತರಾಷ್ಟ್ರೀಯ ವ್ಯಾಪಾರದ ಅಭಿವೃದ್ಧಿಗಾಗಿ ಸರ್ಕಾರೀ ವಾಣಿಜ್ಯ ಇಲಾಖೆಯನ್ನು ಸ್ಥಾಪಿಸಿ, ಅದರ ಕಾರ್ಯನಿರ್ವಹಣೆಗೆ ಪೂರ್ಣ ಅಧಿಕಾರವನ್ನುಳ್ಳ ಪ್ರತಿನಿಧಿ ಮಂಡಳಿಯನ್ನು ನೇಮಿಸಿದ್ದನು. ಪ್ರಮುಖ ನಗರ ಕೇಂದ್ರಗಳಲ್ಲಿ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಅಂಗಡಿಗಳನ್ನು ತೆರೆದು ಗ್ರಾಹಕರ ಅನುಕೂಲಕ್ಕಾಗಿ ಸರಕುಗಳ ಚಿಲ್ಲರೆ ಮಾರಾಟ ವ್ಯವಸ್ಥೆಯನ್ನು ಜಾರಿಗೆ ತಂದಿದ್ದನು. ರಫ್ತು ವ್ಯಾಪಾರವು ಆಂತರಿಕ ಅರ್ಥವ್ಯವಸ್ಥೆಗೆ ತೊಂದರೆ ಉಂಟು ಮಾಡುವುದೆಂದು ಹಿಂದೆ ಭಾವಿಸಿದ್ದ ಟಿಪ್ಪು, ನಂತರದಲ್ಲಿ ರಫ್ತು ವ್ಯಾಪಾರವು ರಾಜ್ಯಕ್ಕೆ ಹೆಚ್ಚು ಆದಾಯ ಗಳಿಸಿಕೊಡುವುದೆಂದು ಗ್ರಹಿಸಿ ಪ್ರದೇಶದಲ್ಲಿನ ಅತಿರಿಕ್ತ ವಸ್ತುಗಳ ರಫ್ತಿಗೆ ಅವಕಾಶ ಮಾಡಿಕೊಟ್ಟಿದ್ದನು.

ಟಿಪ್ಪು ಪಶ್ಚಿಮ ಕರಾವಳಿ ಬಂದರುಗಳ ಮೇಲೆ ನಿಯಂತ್ರಣ ಹೊಂದಿದ್ದನು. ಧಾನ್ಯ ಮತ್ತು ಸಿದ್ದ ವಸ್ತುಗಳು ಘಟ್ಟ ಮಾರ್ಗದ ಮೂಲಕ ವೈನಾಡು ಮತ್ತು ಬಿದನೂರಿನ ಕಡೆಗೂ ರವಾನೆಯಾಗುತ್ತಿದ್ದವು. ಹೊಗೆಸೊಪ್ಪು (ತಂಬಾಕು),ಶ್ರೀಗಂಧದ ಮರ, ಮೆಣಸು ಮತ್ತು ಅಮೂಲ್ಯ ಲೋಹಗಳು ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ವಸ್ತುಗಳಾಗಿದ್ದವು. ವಾಣಿಜ್ಯೋದ್ಯಮದಿಂದ ಪ್ರಜೆಗಳಿಗೆ ಹೆಚ್ಚಿನ ಲಾಭವಾಗುವಂತೆ ವ್ಯಾಪಾರಿ ನಿಬಂಧನೆಗಳನ್ನು ಹೊರಡಿಸಿದ್ದನು. ವ್ಯಾಪಾರಿಗಳಿಗೆ ವಾಣಿಜ್ಯೋದ್ಯಮಕ್ಕೆ ಬಂಡವಾಳವನ್ನು ತೊಡಗಿಸಲು ಪ್ರೋತ್ಸಾಹಿಸಿ ಲಾಭಗಳಿಸಲು ದಾರಿ ಮಾಡಿಕೊಟ್ಟಿದ್ದನು.

**ರಹದಾರಿ ಸುಂಕ**

ವಾಣಿಜ್ಯ ವ್ಯವಸ್ಥೆ ಸರ್ಕಾರಕ್ಕೆ ಆದಾಯ ಒದಗಿಸುವ ಒಂದು ಪ್ರಮುಖ ಮೂಲವೆಂದು ಟಿಪ್ಪುವು ಮನಗಂಡಿದ್ದನು. ಶೋಷಣೆಯಿಂದ ಕೂಡಿದ ಸುಂಕವ್ಯವಸ್ಥೆ ವ್ಯಾಪಾರ ಚಟುವಟಿಕೆಗಳನ್ನು ಮುರುಟಿಹಾಕಿತ್ತು. ಟಿಪ್ಪುವಿನ ಪತನಾನಂತರ ಈ ವ್ಯವಸ್ಥೆಯನ್ನು ರದ್ದುಗೊಳಿಸಲಾಯಿತು. ಅಕ್ಕಿ ಮತ್ತು ಇತರ ಆಹಾರ ಧಾನ್ಯ, ಎಣ್ಣೆ ಬೀಜ, ರೇಷ್ಮೆ, ತಂಬಾಕು ಮತ್ತು ಶ್ರೀಗಂಧದ ಮರ, ಇವು ಈ ಭಾಗದ ರಫ್ತಿನ ಮುಖ್ಯ ಸರಕುಗಳಾಗಿದ್ದವು. ಕಬ್ಬಿಣದ ಸಾಮಾನು, ವಸ್ತ್ರ, ತುಪ್ಪ, ಹತ್ತಿ, ಗೋಧಿ ಮತ್ತು ಉಪ್ಪು ಇವು ಈ ಪ್ರದೇಶಕ್ಕೆ ಆಮದಾಗುತ್ತಿದ್ದವು. ಆಮದು ಮತ್ತು ರಫ್ತು ವ್ಯಾಪಾರ ಮುಂಗಾರು ಮತ್ತು ಹಿಂಗಾರು ಋತುಮಾನದ ಪರಿಸ್ಥಿತಿಯನ್ನು ಅವಲಂಬಿಸಿತ್ತು. ವ್ಯಾಪಾರವು ಮಂಡ್ಯ ಪ್ರದೇಶದಿಂದ ಕೊಡಗು, ಮಲಬಾರ, ನೀಲಗಿರಿ, ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡ ಹಾಗೂ ಪೂರ್ವದಲ್ಲಿ ಬೆಂಗಳೂರಿನಿಂದ ಮದರಾಸಿಗೂ (ಚೆನ್ನೈ) ಪ್ರವಹಿಸುತ್ತಿತ್ತು. ಮಂಡ್ಯಕ್ಕೆ ೨೬ ಮೈಲಿ ದೂರವಿದ್ದ ಮೈಸೂರಿನ ಶ್ರೀಮಂತ ವ್ಯಾಪಾರಿಗಳು ಮಂಡ್ಯ ಪ್ರದೇಶದ ಆಮದು-ರಫ್ತು ವ್ಯಾಪಾರವನ್ನು ಬಹುತೇಕ ನಿಯಂತ್ರಿಸುತ್ತಿದ್ದರು. ಈ ವ್ಯಾಪಾರಿಗಳು ತಮ್ಮ ಪ್ರತಿನಿಧಿಗಳ ಮೂಲಕ ಮಂಡ್ಯ ಪ್ರದೇಶದಲ್ಲಿನ ಉತ್ಪಾದಿತ ವಸ್ತುಗಳ ಮಾಹಿತಿಯನ್ನು ಪಡೆಯುತ್ತಿದ್ದರು. ಈ ವ್ಯಾಪಾರಿಗಳು ತಮ್ಮಲ್ಲಿದ್ದ ಹಣದಿಂದ ಸಾಧ್ಯವಾಗುವಷ್ಟು ಆಹಾರ ಧಾನ್ಯಗಳನ್ನು ಕೊಂಡು, ಮೈಸೂರಿಗೆ ಸಾಗಿಸಿ, ಅಲ್ಲಿಂದ ಇತರ ಪ್ರದೇಶಗಳಿಗೆ ರವಾನಿಸುತ್ತಿದ್ದರು.

ಟಿಪ್ಪುವಿನ ಪತನಾನಂತರ ದೇಶೀಯ ವ್ಯಾಪಾರ ವಾಣಿಜ್ಯ ಪರಿಸ್ಥಿತಿಗಳಲ್ಲಿ ಅಂತಹ ಮಹತ್ತರವಾದ ಪ್ರಗತಿಯುಂಟಾಗಲಿಲ್ಲ. ಶೋಷಣೆಯಿಂದ ಕೂಡಿದ ಸುಂಕದ ವ್ಯವಸ್ಥೆಯೇ ಇದಕ್ಕೆ ಪ್ರಮುಖ ಕಾರಣವಾಗಿತ್ತು.

ರಾಜ್ಯದ ಇತರೆಡೆಗಳಂತೆ ಮಂಡ್ಯ ಜಿಲ್ಲೆಯ ಪ್ರದೇಶದಲ್ಲೂ ಹಲವಾರು ಸುಂಕದ ಕಟ್ಟೆಗಳಿದ್ದವು. ಈ ಸುಂಕದ ಕಟ್ಟೆಗಳಲ್ಲಿ ವ್ಯಾಪಾರಸ್ಥರ ಮೇಲೆ ಸ್ಥಳಾದಾಯ ಸುಂಕ, ಮಾರ್ಗಾದಾಯ ಸುಂಕ ಮತ್ತು ಮಾಮೂಲಾದಾಯ ಸುಂಕ ಎಂದು ಸುಂಕಗಳನ್ನು ಹೇರಲಾಗುತ್ತಿತ್ತು. ಇಂತಹ ಸುಂಕದ ಕಟ್ಟೆಗಳನ್ನು ಸರ್ಕಾರದಿಂದ ಗುತ್ತಿಗೆ ಪಡೆದ ಗುತ್ತಿಗೆದಾರರು ನಿರ್ವಹಿಸುತ್ತಿದ್ದರು. ಕೆಲ ವಿಶೇಷ ವರ್ಗದ ಜನರಿಗೆ ಸುಂಕಗಳಿಂದ ಭಾಗಶ: ಅಥವಾ ಪೂರ್ಣ ರಿಯಾಯಿತಿಯನ್ನು ಅಂದಿನ ಸರ್ಕಾರ ನೀಡಿತ್ತು. ಸರ್ಕಾರದ ವಿಚಿತ್ರ ಸುಂಕ ಪದ್ಧತಿ ವ್ಯಾಪಾರಿಗಳ ಮನಸ್ಸಿನಲ್ಲಿ ಗೊಂದಲವನ್ನುಂಟು ಮಾಡಿತ್ತು. ಅತಿ ಹೊರೆಯಿಂದ ಕೂಡಿದ ಸುಂಕ ವ್ಯವಸ್ಥೆಯಿಂದಾಗಿ ಪ್ರದೇಶದ ಸಮಗ್ರ ವ್ಯಾಪಾರವು ಸುಂಕದ ಗುತ್ತಿಗೆದಾರರು ಅಥವಾ ಅವರ ಅಧೀನರ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ರಾಜಾಶ್ರಯದ ಆಶೀರ್ವಾದಕ್ಕೊಳಗಾದ ಪ್ರಭಾವಶಾಲಿ ಕೆಲ ವರ್ತಕರು ಹೊಂದಿದ್ದ ವ್ಯಾಪಾರದ ಏಕಸ್ವಾಮ್ಯವು ಒಂದು ರೀತಿಯಲ್ಲಿ ಹಾನಿಕರವಾಗಿತ್ತು. ಬ್ರಿಟಿಷ್ ಸರ್ಕಾರ ೧೮೩೧ರಲ್ಲಿ ಮೈಸೂರಿನ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೆ ವಾಣಿಜ್ಯ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಬದಲಾವಣೆಗಳು ಆಗಲಿಲ್ಲ. ಬ್ರಿಟಿಷರು ಅಧಿಕಾರ ವಹಿಸಿಕೊಂಡ ನಂತರ ಪ್ರದೇಶದ ವಾಣಿಜ್ಯ ವ್ಯವಸ್ಥೆಯನ್ನು ಸ್ಥಳೀಯ ಪರಿಸ್ಥಿತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ಮೇಲೆ ಸುಂಕ ವ್ಯವಸ್ಥೆಯಲ್ಲಿದ್ದ ಗೊಂದಲವನ್ನು ನಿವಾರಿಸಲು ಪ್ರಯತ್ನಿಸಿದರು. ಅದರಂತೆ ಹಂತಹಂತವಾಗಿ ಸುಂಕ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತಂದು ಅನಾವಶ್ಯಕ ಸುಂಕಗಳನ್ನು ತೆಗೆದುಹಾಕಲಾಯಿತು. ವ್ಯಾಪಾರದ ವ್ಯವಸ್ಥಿತ ಬೆಳವಣಿಗೆಗಾಗಿ ೧೮೭೯–೮೦ರಲ್ಲಿ ಹಳೆಯ ಸುಂಕ ವ್ಯವಸ್ಥೆಯನ್ನು ತೆಗೆದುಹಾಕಿ ಅದರ ಬದಲಿಗೆ ಆಕ್ಟ್ರಾಯ್ ಸುಂಕ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

## ಆಧುನಿಕ ಸಾರಿಗೆ ವ್ಯವಸ್ಥೆ

೧೮೫೦ರ ಸುಮಾರಿಗೆ ಬೆಂಗಳೂರಿನಿಂದ ಮೈಸೂರಿಗೆ ಒಳ್ಳೆಯ ರಸ್ತೆ ಸಂಪರ್ಕವನ್ನು ಕಲ್ಪಿಸಲಾಯಿತು. ನಂತರ ಬೆಂಗಳೂರಿನಿಂದ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ರಸ್ತೆ ಮಾರ್ಗವನ್ನು ನಿರ್ಮಿಸಲಾಯಿತು. ೧೮೮೨ರ ಸಮಯಕ್ಕೆ ಬೆಂಗಳೂರು–ಮೈಸೂರು ರೈಲುಮಾರ್ಗ ನಿರ್ಮಾಣವಾಯಿತು. ಮೊದಲ ಮಹಾಯುದ್ಧ ಮುಗಿಯುವ ವೇಳೆಗೆ ಹಾಸನ ಮೈಸೂರಿನ ರೈಲು ಮಾರ್ಗ ಪೂರ್ಣಗೊಂಡಿತು. ಸಂಪರ್ಕ ವ್ಯವಸ್ಥೆಯ ಸುಧಾರಣೆಯಿಂದಾಗಿ ರಾಜ್ಯದ ಒಂದೆಡೆಯಿಂದ ಮತ್ತೊಂದೆಡೆಗೆ ವ್ಯಾಪಾರವು ಸುಗಮವಾಗಿ ನಡೆಯುವಂತಾಯಿತು. (ಅಧ್ಯಾಯ ೭ನ್ನು ನೋಡಿ)

ಆಗಾಗಿನ ಜಾತ್ರೆ, ಉತ್ಸವ ಮತ್ತು ಸಂತೆಗಳು ಮೊದಲಿನಿಂದಲೂ ಪ್ರದೇಶದ ವ್ಯಾಪಾರದ ಅಭಿವೃದ್ಧಿಗೆ ಅವಕಾಶ ಒದಗಿಸುತ್ತಾ ಬಂದಿವೆ. ಇಂತಹ ಸಂದರ್ಭಗಳಲ್ಲಿ ಗ್ರಾಮೀಣರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮಗೆ ಬೇಕಿರುವ ವಸ್ತುಗಳನ್ನು ಕೊಳ್ಳುತ್ತಾರೆ. ಪ್ರತೀ ವರ್ಷ ನಡೆಯುವ ಮೇಲುಕೋಟೆ ಜಾತ್ರೆ ಹಿಂದಿನಿಂದಲೂ ಬಹು ಪ್ರಸಿದ್ಧವಾಗಿದ್ದು, ಜಾತ್ರೆಯ ಸಮಯದಲ್ಲಿ ಹೆಚ್ಚಿನ ಪ್ರಮಾಣದ ವ್ಯಾಪಾರ–ವಹಿವಾಟು ನಡೆಯುತ್ತಿತ್ತು. ಇಂತಹ ಜಾತ್ರೆಗಳಲ್ಲದೇ, ಜಿಲ್ಲೆಯ ವಾರದ ಸಂತೆಗಳು ಸಹ ವ್ಯಾಪಾರದ ಅಭಿವೃದ್ಧಿಗೆ ಕಾರಣವಾಗಿವೆ. ಸಾರಿಗೆ ವ್ಯವಸ್ಥೆಯಲ್ಲೂ ಮಹತ್ತರ ಸುಧಾರಣೆಯಾಗಿದ್ದು, ಈಗ ಜಿಲ್ಲೆಯ ಅತಿ ದೂರದ ಪ್ರದೇಶದಿಂದ ಜಿಲ್ಲಾ ಕೇಂದ್ರವಾದ ಮಂಡ್ಯಕ್ಕೆ ಸರಕಿನ ಲಾರಿಗಳು ಓಡಾಡುತ್ತಿವೆ. ಜಿಲ್ಲೆಯ ಎಲ್ಲ ಪಟ್ಟಣ ಪ್ರದೇಶಗಳಲ್ಲಿ ಅಂಗಡಿ ಮುಂಗಟ್ಟುಗಳು ಸಾಕಷ್ಟಿದ್ದು ಯಾವುದೇ ಪ್ರದೇಶದಲ್ಲಿ ವ್ಯಾಪಾರ ವಹಿವಾಟಿನ ಕೊರತೆ ಇಲ್ಲವೆಂದೇ ಹೇಳಬಹುದಾಗಿದೆ.

ಜಿಲ್ಲೆಯ ಸಮಸ್ತ ವಾಣಿಜ್ಯ–ವ್ಯಾಪಾರ ಚಟುವಟಿಕೆಗಳು ರಸ್ತೆ ಮತ್ತು ರೈಲ್ವೆ ಸಂಪರ್ಕ ವ್ಯವಸ್ಥೆಯನ್ನೇ ಅವಲಂಬಿಸಿದೆ. ಅಕಾಲಿಕ ಮಳೆಯು ಆಗಾಗ ವ್ಯಾಪಾರ ವ್ಯವಹಾರಗಳಿಗೆ ಅನಾನುಕೂಲವನ್ನುಂಟು ಮಾಡುತ್ತಿತ್ತು. ಒಮ್ಮೆ ೧೮೮೩–೮೪ ರಲ್ಲಿ ಮಳೆ ವಿಫಲಗೊಂಡಾಗ ಅಂದಿನ ದಿವಾನರಾದ ಸರ್ ಕೆ. ಶೇಷಾದ್ರಿ ಐಯ್ಯರ್ ಮಂಡ್ಯ

ಪ್ರದೇಶಕ್ಕೆ ಭೇಟಿ ನೀಡಿದ್ದರು. ಆಗ ತಾವೇ ಸ್ವತಃ ಸಂತೆಗಳ ಸಮೀಕ್ಷಾ ಕಾರ್ಯವನ್ನು ಕೈಗೊಂಡು ಸರಕುಗಳ ಬೆಲೆ ಪಟ್ಟಿಯನ್ನು ಪ್ರದರ್ಶಿಸಲು ಆಜ್ಞಾಪಿಸಿದ್ದರಂತೆ. ವಸ್ತುಗಳ ಬೆಲೆ ನಿಯಂತ್ರಣ ಸಲುವಾಗಿ ಕೈಗೊಂಡ ಆಗಿನ ಕ್ರಮ ಇದಾಗಿತ್ತು. ವಿಶ್ವೇಶ್ವರಯ್ಯ ಮುಖ್ಯ ನಾಲೆಯ ನಿರ್ಮಾಣ ಮತ್ತು ಮಂಡ್ಯ ಸಕ್ಕರೆ ಕಾರ್ಖಾನೆಯ ಸ್ಥಾಪನೆಯಿಂದಾಗಿ, ಮಂಡ್ಯದ ಪ್ರಾಮುಖ್ಯತೆ ಹೆಚ್ಚುವಂತಾಯಿತು. ಒಂದು ಕಾಲದಲ್ಲಿ ಹಿಂದುಳಿದ ಪ್ರದೇಶವಾಗಿದ್ದ ಮಂಡ್ಯ ಜಿಲ್ಲೆ ಇವುಗಳಿಂದಾಗಿ ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುವಂತಾಯಿತು.

**ಆಮದು ಮತ್ತು ರಫ್ತು**

ಒಂದು ಪ್ರದೇಶದ ಆಮದು–ರಫ್ತು ಸರ್ವಕಾಲಕ್ಕೂ ಒಂದೇ ರೀತಿಯದಾಗಿರುವುದಿಲ್ಲ. ಅವು ಸ್ಥಳೀಯ ಜನರ ಬದಲಾಗುತ್ತಿರುವ ಬೇಡಿಕೆ, ಸ್ಥಳೀಯ ಉತ್ಪಾದನೆಗಳು, ಮಾರುಕಟ್ಟೆಯ ಸೌಲಭ್ಯ, ಔದ್ಯಮೀಕರಣ, ಜನಸಂಖ್ಯೆ ಹೆಚ್ಚಳ, ನಗರೀಕರಣ ಮುಂತಾದ ಹತ್ತು ಹಲವಾರು ಅಂಶಗಳನ್ನು ಅವಲಂಬಿಸಿರುತ್ತವೆ. ಮಂಡ್ಯ, ಮದ್ದೂರು, ಪಾಂಡವಪುರ, ಶ್ರೀರಂಗಪಟ್ಟಣ, ಮಳವಳ್ಳಿ, ಕೃಷ್ಣರಾಜಪೇಟೆ, ನಾಗಮಂಗಲ, ಮುಂತಾದ ಪಟ್ಟಣ ಪ್ರದೇಶಗಳಲ್ಲೇ ವ್ಯಾಪಾರ ವಹಿವಾಟು ಹೆಚ್ಚಾಗಿ ನಡೆಯುತ್ತದೆ. ಇವುಗಳಲ್ಲಿ ಮೊದಲ ನಾಲ್ಕು ಸ್ಥಳಗಳಿಗೆ ರೈಲಿನ ಸಂಪರ್ಕ ವ್ಯವಸ್ಥೆಯೂ ಇದೆ.

ಮಂಡ್ಯ ಜಿಲ್ಲೆ ಮೊದಲಿನಿಂದಲೂ ಹತ್ತಿಬಟ್ಟೆ, ಕಂಬಳಿ, ಹಿತ್ತಾಳೆಪಾತ್ರೆ ಮತ್ತು ಬೆಲ್ಲಕ್ಕೆ ಹೆಸರಾಗಿತ್ತು. ಟಿಪ್ಪುವಿನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಬಂದೂಕು, ಫಿರಂಗಿ, ಬಾಕು, ಕತ್ತರಿ ಮತ್ತು ಗಡಿಯಾರಗಳನ್ನು ತಯಾರಿಸಲಾಗುತ್ತಿತ್ತು. ಶ್ರೀರಂಗಪಟ್ಟಣದ ಕಬ್ಬಿಣದ ಕಾರ್ಖಾನೆ ದೇಶದಾದ್ಯಂತ ಪ್ರಸಿದ್ಧವಾಗಿತ್ತೆಂದು ಟಿಪ್ಪುವಿನ ಆಸ್ಥಾನದಲ್ಲಿದ್ದ ಇತಿಹಾಸಕಾರ ಕಿರ್ಮಾನಿ ಬರೆದಿದ್ದಾನೆ. ಆಗ ರಾಜ್ಯದಲ್ಲಿ ತಯಾರಾಗುತ್ತಿದ್ದ ವಸ್ತುಗಳು ಯೂರೋಪಿನಲ್ಲಿ ತಯಾರಾಗುತ್ತಿದ್ದ ವಸ್ತುಗಳೊಂದಿಗೆ ಹೋಲಿಕೆಗೆ ನಿಲ್ಲುತ್ತಿದ್ದುವೆಂದು ಹೇಳಲಾಗುತ್ತದೆ. ಶ್ರೀರಂಗಪಟ್ಟಣ ತಾಲೂಕಿನ ಪಾಲನಹಳ್ಳಿಯಲ್ಲಿ ೧೮೪೭ರಲ್ಲಿ ಅಷ್ಟಗ್ರಾಮ ಶುಗರ್ ವರ್ಕ್ಸ್ ಸ್ಥಾಪಿತವಾಗಿತ್ತು. ಈ ಕಾರ್ಖಾನೆಯ ಹರಳು ಸಕ್ಕರೆಯ ಉತ್ಪಾದನೆ ಬಹು ಉತ್ತಮವೆಂದು ೧೮೫೧ ಮತ್ತು ೧೮೬೧ರ ಲಂಡನ್ ವಸ್ತು ಪ್ರದರ್ಶನಗಳಲ್ಲಿ ಬಹುಮಾನ ಮತ್ತು ಪದಕಗಳನ್ನು ಗಳಿಸಿತ್ತು. ೧೮೬೭ರಲ್ಲಿ ಪ್ಯಾರಿಸಿನ ವಿಶ್ವಮೇಳದಲ್ಲೂ ಉತ್ತಮವೆಂದು ಪರಿಗಣಿಸಲ್ಪಟ್ಟು, ಗೌರವಸ್ಥಾನ ಪಡೆದಿತ್ತು. ಈ ಉದ್ಯಮದ ಉಪಾಂಗವಾಗಿ ಮದ್ಯಸಾರ ತಯಾರಿಸುತ್ತಿದ್ದರು. ಇಷ್ಟಾದರೂ ಈ ಕಾರ್ಖಾನೆ ೧೮೯೪ರಲ್ಲಿ ನಿಂತುಹೋಯಿತು. ನಾಗಮಂಗಲದ ಹಿತ್ತಾಳೆ ವಿಗ್ರಹ, ಪಾತ್ರೆ, ದೀಪಸ್ತಂಭ, ಮುಂತಾದವು ಬಹು ಪ್ರಸಿದ್ಧಿ ಪಡೆದಿದ್ದವು. ಕಿಕ್ಕೇರಿ, ಹೊಸಹೊಳಲು, ಮೇಲುಕೋಟೆ, ತಳಗವಾಡಿ, ಕೊಡಿಯಾಲ, ಶ್ರೀರಂಗಪಟ್ಟಣ, ಸಿಂಧಘಟ್ಟ ಮತ್ತು ಗಂಜಾಂ ಉತ್ತಮ ದರ್ಜೆಯ ಕೈಮಗ್ಗದ ರೇಷ್ಮೆ ಮತ್ತು ಹತ್ತಿ ಬಟ್ಟೆಗಳಿಗೆ ಪ್ರಾಮುಖ್ಯತೆಯನ್ನು ಗಳಿಸಿದ್ದವು. ಮಳವಳ್ಳಿ ಮಂಡ್ಯಗಳಲ್ಲಿ ಉತ್ತಮ ಒರುಟು ಕಂಬಳಿಗಳು ತಯಾರಾಗುತ್ತಿದ್ದವು. ಸಿಂಧಘಟ್ಟ ಚಾಪೆಗಳ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಮಳವಳ್ಳಿ ಮತ್ತು ಹಲಗೂರುಗಳಲ್ಲಿ ಚರ್ಮ ಹದ ಮಾಡುವ ಮತ್ತು ಪಾದರಕ್ಷೆಗಳ ತಯಾರಿಕೆಯ ಕೈಗಾರಿಕೆಗಳಿದ್ದವು. ಸುವಾಸಿತ ಕುಸ್ ಕುಸ್ ಹುಲ್ಲಿನ ಬೇರಿನಿಂದ ತಯಾರಿಸಿದ ಅಲಂಕಾರಿಕ ಬೀಸಣಿಗೆಗಳಿಗೆ ಮೇಲುಕೋಟೆ ಹೆಸರು ಮಾಡಿತ್ತು. ಗಂಜಾಂ ಗಾಡಿಗಳ ತಯಾರಿಕೆಗೆ ಪ್ರಸಿದ್ಧಿ ಪಡೆದಿತ್ತು. ಬೆಳಗೊಳದಲ್ಲಿ ಕಾಗದವನ್ನು ತಯಾರಿಸುತ್ತಿದ್ದರು. ಕೊಡಿಯಾಲದ ಕೆಂಪು ಮತ್ತು ಬಿಳಿ ಕಲ್ಲುಸಕ್ಕರೆ ದಕ್ಷಿಣ ಭಾರತದಲ್ಲಿ ಹೆಸರು ಗಳಿಸಿತ್ತು.

೧೯೬೦ರ ದಶಕದಲ್ಲಿ ಅಕ್ಕಿ, ಬೆಲ್ಲ, ಬೇಳೆಕಾಳು, ಸಕ್ಕರೆ, ಕಚ್ಚಾರೇಷ್ಮೆ, ಕೈಮಗ್ಗದ ರೇಷ್ಮೆ ಬಟ್ಟೆ, ಉಣ್ಣೆ, ಹದಮಾಡಿದ ಚರ್ಮ, ಎತ್ತಿನ ಗಾಡಿ, ಹಿತ್ತಾಳೆ ಹಾಗೂ ಕಂಚಿನ ಪಾತ್ರೆಗಳು–ಇವು ಜಿಲ್ಲೆಯಿಂದ ರಫ್ತಾಗುತ್ತಿದ್ದ ಪ್ರಮುಖ ಸರಕುಗಳಾಗಿದ್ದವು. ಬೆಂಗಳೂರು, ಚಿತ್ರದುರ್ಗ ಮತ್ತು ನೀಲಗಿರಿ ಈ ಸ್ಥಳಗಳಿಗೆ ಸಾಮಾನ್ಯವಾಗಿ ಅಕ್ಕಿಯನ್ನು,

ಕೊಡಗಿಗೆ ಬೇಳೆಕಾಳುಗಳನ್ನು, ಬೆಂಗಳೂರು ಮತ್ತು ಮುಂಬೈಗಳಿಗೆ ಹದ ಮಾಡಿದ ಚರ್ಮವನ್ನು (ತೊಗಲು) ರವಾನಿಸಲಾಗುತ್ತಿತ್ತು. ಮಂಡ್ಯ ಜಿಲ್ಲೆಯಲ್ಲಿ ತಯಾರಾಗುತ್ತಿದ್ದ ಬೆಲ್ಲ, ಗಂಜಾಮಿನ ಎತ್ತಿನ ಗಾಡಿ ಮತ್ತು ನಾಗಮಂಗಲದ ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳು ಆಸುಪಾಸಿನ ಜಿಲ್ಲೆಗಳಲ್ಲಿ ಹೆಸರು ಗಳಿಸಿದ್ದವು. ಮಂಡ್ಯ ಪ್ರದೇಶದ ಬೆಣ್ಣೆಗೆ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಜಿಲ್ಲೆಗೆ ಆಮದಾಗುತ್ತಿದ್ದ ಸರಕುಗಳೆಂದರೆ ಧಾರವಾಡದಿಂದ ಗೋಧಿ, ಬೆಂಗಳೂರಿನಿಂದ ಧನಿಯ, ಕುಸುಬಲಕ್ಕಿ, ಈರುಳ್ಳಿ ಮತ್ತು ಎಳ್ಳು, ತಿಪಟೂರು ಮತ್ತು ಬೀರೂರಿನಿಂದ ಅಡಿಕೆ, ತಿಪಟೂರಿನಿಂದ ತೆಂಗಿನಕಾಯಿ ಮತ್ತು ಕೊಬ್ಬರಿ, ತುಮಕೂರಿನಿಂದ ರಾಗಿ, ಕೊಡಗು, ಕೊಯಮತ್ತೂರು ಮತ್ತು ನೀಲಗಿರಿ ಈ ಸ್ಥಳಗಳಿಂದ ಕಾಫೀ ಬೀಜ, ಶಿವಮೊಗ್ಗದಿಂದ ಕಾಳು ಮೆಣಸು, ಕೊಡಗು ಪ್ರದೇಶದಿಂದ ಏಲಕ್ಕಿ, ಕಿತ್ತಳೆಹಣ್ಣು, ಜೇನುತುಪ್ಪ, ಮೇಣ ಮತ್ತು ಮರಮುಟ್ಟು, ಬೆಂಗಳೂರು ಮತ್ತು ಮೈಸೂರಿನಿಂದ ಬಟ್ಟೆ ಸೇರಿದಂತೆ ಇತರೇ ವಸ್ತುಗಳು.

**ಕೋಷ್ಟಕ ೬.೨೧ ೧೯೮೯–೯೦ರಲ್ಲಿ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳ ಮೂರು ಪ್ರಮುಖ ಉತ್ಪನ್ನಗಳು, ಆಮದು ಮತ್ತು ರಫ್ತು ವಸ್ತುಗಳ ವಿವರ**

| ಸ್ಥಳ | ಮೂರು ಮುಖ್ಯ ಉತ್ಪನ್ನಗಳು | ಆಮದಾಗುವ ಮೂರು ಮುಖ್ಯ ಉತ್ಪನ್ನಗಳು | ರಫ್ತು ಆಗುವ ಮೂರು ಮುಖ್ಯ ಉತ್ಪನ್ನಗಳು |
|---|---|---|---|
| ಮಂಡ್ಯ | ಸಕ್ಕರೆ, ಮದ್ಯ, ಬೆಲ್ಲ | ಕಬ್ಬು, ರಾಸಾಯನಿಕ ಗೊಬ್ಬರ, ಗೋದಿ | ಸಕ್ಕರೆ, ಬೆಲ್ಲ, ಮದ್ಯ |
| ಮದ್ದೂರು | ಶೇಂಗಾ ಎಣ್ಣೆ, ಅಕ್ಕಿ, ಬಿದಿರಿನ ತಟ್ಟೆ ಮತ್ತು ಚಂದ್ರಿಕೆಗಳು | ಕಡಲೆಕಾಯಿ, ಆಹಾರ ಧಾನ್ಯಗಳು, ಕಟ್ಟಡ ನಿರ್ಮಾಣ ಸಾಮಗ್ರಿಗಳು | ಶೇಂಗಾ ಎಣ್ಣೆ, ಬಿದಿರಿನ ತಟ್ಟೆ ಮತ್ತು ಚಂದ್ರಿಕೆಗಳು, ಅಕ್ಕಿ |
| ಮಳವಳ್ಳಿ | ಕಾಗದ, ಬೀಡಿ, ಪಾದರಕ್ಷೆ | ರಾಸಾಯನಿಕ ಗೊಬ್ಬರ, ಹೊಗೆಸೊಪ್ಪು, ತೊಗಲು | ಬೀಡಿ, ಕಾಗದ, ಪಾದರಕ್ಷೆ |
| ಶ್ರೀರಂಗಪಟ್ಟಣ | ಮರದ ಪಟ್ಟಿ, ಹಲಗೆ ಮುಂತಾದವು, ಅಗರುಬತ್ತಿ, ಬೀಡಿ, | ಹೊಗೆಸೊಪ್ಪು, ರಾಸಾಯನಿಕ ಗೊಬ್ಬರ, ಬತ್ತ | ಅಕ್ಕಿ, ಶೇಂಗಾ ಎಣ್ಣೆ, ಬೀಡಿ |
| ಪಾಂಡವಪುರ | ಸಕ್ಕರೆ, ಅವಲಕ್ಕಿ, ಸಾಬೂನು | ಖಾದ್ಯ ತೈಲ, ಕಬ್ಬು, ಆಹಾರ ಧಾನ್ಯಗಳು | ಕುರಿ ಮತ್ತು ಮೇಕೆ ಚರ್ಮ, ಅಕ್ಕಿ ಮತ್ತು ಅವಲಕ್ಕಿ, ಸಕ್ಕರೆ |
| ಕೃಷ್ಣರಾಜಪೇಟೆ | ರೇಷ್ಮೆ ಸೀರೆ, ಮರದ ಪಟ್ಟಿ, ಹಲಗೆ ಮುಂತಾದವು, ಸೀಗೆಪುಡಿ | ಆಹಾರ ಧಾನ್ಯಗಳು, ವಸ್ತ್ರ, ರಾಸಾಯನಿಕ ಗೊಬ್ಬರ | ರೇಷ್ಮೆ ಸೀರೆ, ಅಕ್ಕಿ, ಮರದ ಪಟ್ಟಿ, ಹಲಗೆ ಮುಂತಾದವು. |
| ನಾಗಮಂಗಲ | ನಾರಿನ ಉತ್ಪನ್ನಗಳು, ಮರದ ಪಟ್ಟಿ, ಹಲಗೆ ಮುಂತಾದವು, ಹಿತ್ತಾಳೆ ಮತ್ತು ಪಂಚಲೋಹದ ಸಾಮಾನುಗಳು | ಬತ್ತ, ವಸ್ತ್ರ, ಔಷಧಿಗಳು | ನಾರಿನ ಉತ್ಪನ್ನಗಳು, ಹಿತ್ತಾಳೆ ಮತ್ತು ಪಂಚಲೋಹದ ಸಾಮಾನುಗಳು, ಬೆಣ್ಣೆ |
| ಮೇಲುಕೋಟೆ | ರೇಷ್ಮೆ ಸೀರೆ, ಪಂಚೆ | ಔಷಧಿಗಳು, ಆಹಾರ ಧಾನ್ಯಗಳು, ರೇಷ್ಮೆನೂಲು | ಹತ್ತಿ, ರೇಷ್ಮೆ ಸೀರೆ |
| ಬೆಳಕವಾಡಿ | ಅಗರುಬತ್ತಿ, ಬೀಡಿ, ರೇಷ್ಮೆ ನೂಲು | ಆಹಾರ ಧಾನ್ಯಗಳು, ಹೊಗೆಸೊಪ್ಪು, ಅಗರುಬತ್ತಿಯ ಕಚ್ಚಾ ಸಾಮಗ್ರಿ | ರೇಷ್ಮೆ ಗೂಡು, ಅಗರುಬತ್ತಿ, ಬೀಡಿ |
| ಬೆಳ್ಳೂರು | ಶೇಂಗಾ ಎಣ್ಣೆ | ಔಷಧಗಳು, ಹೊಗೆಸೊಪ್ಪಿನ ಉತ್ಪನ್ನಗಳು, ಆಹಾರ ಧಾನ್ಯಗಳು | ತೆಂಗಿನಕಾಯಿ, ಹುಣಸೆಹಣ್ಣು, ಶೇಂಗಾಎಣ್ಣೆ |
| ಕೃಷ್ಣರಾಜಸಾಗರ | | ಆಹಾರ ಧಾನ್ಯಗಳು, ದಿನಸಿ, ವಸ್ತ್ರ | – |

ಆಧಾರ : ಮಂಡ್ಯ ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ೧೯೯೧

## ನಿಯಂತ್ರಿತ ಮಾರುಕಟ್ಟೆಗಳು

ವ್ಯವಸಾಯದ ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಸುವ್ಯವಸ್ಥಿತ ಮಾರಾಟ ವ್ಯವಸ್ಥೆ ಸಹ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕೃಷಿ ಉತ್ಪನ್ನಗಳ ನಿಯಂತ್ರಿತ ಮಾರುಕಟ್ಟೆ ಯೋಜನೆ ಕಾರ್ಯರೂಪಕ್ಕೆ ಬರುವ ಪೂರ್ವದಲ್ಲಿ, ಕೃಷಿ ಉತ್ಪನ್ನಗಳು ಖಾಸಗಿ ವರ್ತಕರ ಮೂಲಕ ಬೇಡಿಕೆ ಮತ್ತು ಪೂರೈಕೆ ಆಧಾರದ ಮೇಲೆ ಮಾರಾಟವಾಗುತ್ತಿತ್ತು. ರೈತರಿಗೆ ಹಣದ ಅವಶ್ಯಕತೆ ಹೆಚ್ಚಾಗಿದ್ದುದರಿಂದ ಸುಗ್ಗಿಯ ಕಾಲದಲ್ಲೇ ಧಾನ್ಯಗಳನ್ನು ಮಾರಾಟಕ್ಕಾಗಿ ಮಾರುಕಟ್ಟೆಗೆ ತರುತ್ತಿದ್ದರು. ಸುಗ್ಗಿಯ ಕಾಲದಲ್ಲಿ ಪೂರೈಕೆ ಹೆಚ್ಚಾಗಿ ಬೇಡಿಕೆ ಕಡಿಮೆ ಇರುತ್ತಿತ್ತು. ವರ್ತಕರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ರೈತರನ್ನು ಶೋಷಿಸುತ್ತಿದ್ದರು. ವರ್ತಕರು ಸೂಚಿಸಿದ ಬೆಲೆಗೆ ರೈತರು ಧಾನ್ಯವನ್ನು ಮಾರಾಟ ಮಾಡಬೇಕಾಗಿತ್ತು. ಇದರಿಂದ ರೈತರಿಗಾಗಲೀ, ಗ್ರಾಹಕರಿಗಾಗಲಿ ಯಾವ ರೀತಿಯ ಲಾಭವೂ ಆಗುತ್ತಿರಲಿಲ್ಲ.

ರಾಜ್ಯ ಪುನರ್ರಚನೆಗೆ (೧೯೫೬) ಮೊದಲು ಮಂಡ್ಯ ಜಿಲ್ಲೆಯನ್ನು ಒಳಗೊಂಡಿದ್ದ ಹಿಂದಿನ ಮೈಸೂರು ರಾಜ್ಯದಲ್ಲಿ ಸರ್ಕಾರವು ೧೯೩೯ರಲ್ಲಿ ಮೈಸೂರು ಮಾರುಕಟ್ಟೆಗಳ ಕಾನೂನನ್ನು ಜಾರಿಗೊಳಿಸಿ ಕೃಷಿಕರ ವ್ಯವಸಾಯೋತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಮಾರಾಟದ ಅನುಕೂಲತೆಗಳನ್ನು ಒದಗಿಸಿತ್ತು. ೧೯೪೭ರಲ್ಲಿ ಮೈಸೂರು ವ್ಯವಸಾಯೋತ್ಪನ್ನ ಮಾರುಕಟ್ಟೆ ನಿಯಮಗಳು ರಚಿಸಲ್ಪಟ್ಟು, ಇವು ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟವು. ಅದರಂತೆ ೧೯೫೯ರ ಡಿಸೆಂಬರ್‌ನಲ್ಲಿ ಜಿಲ್ಲೆಯ ಕಾರ್ಯವ್ಯಾಪ್ತಿ ಹೊಂದಿದಂತೆ ಮಂಡ್ಯದಲ್ಲಿ ಜಿಲ್ಲೆಯ ಮೊದಲ ಮಾರುಕಟ್ಟೆ ಸಮಿತಿಯನ್ನು ರಚಿಸಲಾಯಿತು.

ಐದು ವಿಭಿನ್ನ ಮಾರುಕಟ್ಟೆ ಶಾಸನಗಳ ಆಡಳಿತಕ್ಕೆ ಒಳಪಟ್ಟು ನಡೆಯುತ್ತಿದ್ದ ಮಾರುಕಟ್ಟೆಗಳನ್ನು ಏಕರೂಪದ ಕಾನೂನಿನಡಿ ತರಲು ಸರ್ಕಾರ ೧೯೬೬ರಲ್ಲಿ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾನೂನನ್ನು ರಚಿಸಿತು. ಆದರೆ ೧೯೬೮ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟದ (ನಿಯಂತ್ರಣ) ನಿಯಮಾವಳಿಗಳನ್ನು ರಚಿಸಿದ ನಂತರ ಮೇ ೧೯೬೮ರಿಂದ ಈ ಕಾನೂನನ್ನು ಕರ್ನಾಟಕದಾದ್ಯಂತ ಜಾರಿಗೆ ತರಲಾಯಿತು. ನಂತರ ಜಿಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯವಹಾರ ನೋಡಿಕೊಳ್ಳಲು ಕೃಷಿ ಮಾರಾಟ ಸಹಾಯಕ ನಿರ್ದೇಶಕರ ಕಚೇರಿಯನ್ನು ಆಯಾ ಜಿಲ್ಲೆಗಳಲ್ಲಿ ತೆರೆಯಲಾಯಿತು. ಮಂಡ್ಯದಲ್ಲೂ ಇಂತಹ ಒಂದು ಕಚೇರಿಯನ್ನು ತೆರೆಯಲಾಯಿತು. ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ೧೯೬೬ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ, ೧೯೬೧ರ ಕರ್ನಾಟಕ ದಾಸ್ತಾನು ಮಳಿಗೆ ಕಾಯ್ದೆ ಮತ್ತು ೧೯೩೭ರ ಕೇಂದ್ರ ಸರ್ಕಾರದ ವ್ಯವಸಾಯೋತ್ಪನ್ನಗಳ (ವರ್ಗೀಕರಣ ಮತ್ತು ಮಾರಾಟ) ಕಾಯ್ದೆ, ಇವುಗಳನ್ನು ಜಿಲ್ಲೆಯಲ್ಲಿ ಕಾರ್ಯಾಚರಣೆಗೆ ತರಲು ಜವಾಬ್ದಾರರಾಗಿರುತ್ತಾರೆ. ನಿಯಂತ್ರಿತ ಮಾರುಕಟ್ಟೆಯ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಲು ರೈತರ, ಖರೀದಿದಾರರ, ಸಹಕಾರಿ ಮಾರಾಟ ಸಂಘದ, ಸಹಕಾರಿ ಸಂಸ್ಕರಣ ಸಂಘದ ಮತ್ತು ಸರ್ಕಾರದ (ಮಾರಾಟ ಇಲಾಖೆಯ) ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ಪ್ರತಿ ಮಾರುಕಟ್ಟೆಯಲ್ಲಿಯೂ ರಚಿಸುವಂತೆ ೧೯೬೬ರ ಕಾನೂನು ಅವಕಾಶ ಕಲ್ಪಿಸಿದೆ. ಮಾರುಕಟ್ಟೆ ಸಮಿತಿ ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಮಾರಾಟ ವ್ಯವಸ್ಥೆಯನ್ನು ನಿಯಂತ್ರಿಸುವುದಲ್ಲದೇ ಮಾರುಕಟ್ಟೆ ಪ್ರಾಂಗಣದಲ್ಲಿ ರಸ್ತೆ, ನೀರು, ದೀಪ, ಹರಾಜುಕಟ್ಟೆ, ಉಪಹಾರ ಗೃಹ, ವಿಶ್ರಾಂತಿ ಗೃಹ, ನೆರಳಿನ ವೃಕ್ಷ ಮುಂತಾದ ಸೌಕರ್ಯಗಳು ಹಾಗೂ ಕೃಷಿ ಉತ್ಪನ್ನಗಳ ವರ್ಗೀಕರಣ ಸೌಲಭ್ಯವನ್ನು (ಆಯ್ದ ಮಾರುಕಟ್ಟೆಗಳಲ್ಲಿ) ಒದಗಿಸುವ ಜವಾಬ್ದಾರಿಯನ್ನು ಹೊಂದಿದೆ.

ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲಗಳು ಮಾರುಕಟ್ಟೆ ಶುಲ್ಕ ಮತ್ತು ಪರವಾನಿಗಿ ಶುಲ್ಕಗಳು. ಮಾರುಕಟ್ಟೆ ಸಮಿತಿಯ ಎಲ್ಲಾ ವೆಚ್ಚಗಳನ್ನೂ ಈ ಆದಾಯದಿಂದ ಭರಿಸಲಾಗುತ್ತದೆ. ಮಾರುಕಟ್ಟೆಯ ನಿರ್ವಾಹಕರ ಮೇಲೆ ವಿಧಿಸಬಹುದಾದ ಪರಮಾವಧಿ ಪರವಾನಿಗಿ ಶುಲ್ಕವು ನಿಯಮಾವಳಿಗಳಲ್ಲಿ ನಮೂದಿಸಲ್ಪಟ್ಟಿದೆ. ಆದರೆ ಮಾರಾಟವಾದ ನಿಯಂತ್ರಿತ ಕೃಷಿ ಹುಟ್ಟುವಳಿಗಳ ಮೌಲ್ಯದ ಮೇಲೆ ಶೇ.ಒಂದರಂತೆ ಹಾಗೂ ಜಾನುವಾರುಗಳಿಗೆ ತಲಾ ಎರಡು ರೂ. ಮತ್ತು ಕುರಿ ಅಥವಾ ಮೇಕೆಗೆ ತಲಾ ಒಂದಕ್ಕೆ ೨೫ ಪೈಸೆಯಂತೆ ಮಾರುಕಟ್ಟೆ ಶುಲ್ಕವನ್ನು ಖರೀದಿದಾರರಿಂದ ವಸೂಲಿ ಮಾಡಲಾಗುತ್ತದೆ.

## ಜಿಲ್ಲೆಯ ಮಾರುಕಟ್ಟೆ ಪ್ರಾಂಗಣಗಳು

ಮಂಡ್ಯ ಜಿಲ್ಲೆಯಲ್ಲಿ ೨೦೦೧–೦೨ರಲ್ಲಿ ನಾಲ್ಕು ಮುಖ್ಯ ಮಾರುಕಟ್ಟೆ ಹಾಗೂ ಎಂಟು ಉಪಮಾರುಕಟ್ಟೆಗಳು ಇದ್ದವು. ವಿವರವನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೨ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಿವರ**

| ಮುಖ್ಯ ಮಾರುಕಟ್ಟೆ ಸಮಿತಿ ಹೆಸರು ಮತ್ತು ಸ್ಥಾಪನೆಯ ವರ್ಷ | ಮಾರುಕಟ್ಟೆ ಸಮಿತಿಯ ಕಾರ್ಯವ್ಯಾಪ್ತಿ | ಮುಖ್ಯ ಮಾರುಕಟ್ಟೆ ಸಮಿತಿಯ ಅಧೀನಕ್ಕೊಳಪಟ್ಟ ಉಪಮಾರುಕಟ್ಟೆಗಳು |
|---|---|---|
| ಮಂಡ್ಯ – ೧೯೫೯ | ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲೂಕುಗಳು | |
| ಮದ್ದೂರು – ೧೯೯೨ | ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳು | ೧. ಮಳವಳ್ಳಿ |
| | | ೨. ಕಿರುಗಾವಲು |
| | | ೩. ನಿಡಘಟ್ಟ |
| ಕೃಷ್ಣರಾಜಪೇಟೆ–೧೯೯೨ | ಕೃಷ್ಣರಾಜಪೇಟೆ ತಾಲ್ಲೂಕು | ೧. ಕಿಕ್ಕೇರಿ |
| | | ೨. ಸಂತೇಬಾಚಹಳ್ಳಿ |
| ನಾಗಮಂಗಲ – ೧೯೯೬ | ನಾಗಮಂಗಲ ಮತ್ತು ಪಾಂಡವಪುರ ತಾಲೂಕುಗಳು | ೧. ಪಾಂಡವಪುರ |
| | | ೨. ಕದಬಳ್ಳಿ |
| | | ೩. ಬಿಂಡಿಗನವಿಲೆ |
| | | ೪. ಬೆಳ್ಳೂರು |

ಮಂಡ್ಯ ಮುಖ್ಯ ಮಾರುಕಟ್ಟೆಯಡಿಯಲ್ಲಿದ್ದ ಮದ್ದೂರು ಮತ್ತು ಕೃಷ್ಣರಾಜಪೇಟೆ ಉಪಮಾರುಕಟ್ಟೆ ಸಮಿತಿಗಳನ್ನು ೧೯೯೨ರಲ್ಲಿ ಪ್ರತ್ಯೇಕಿಸಿ ಮುಖ್ಯ ಮಾರುಕಟ್ಟೆ ಸಮಿತಿಗಳನ್ನಾಗಿ ಪರಿವರ್ತಿಸಲಾಯಿತು. ಕೃಷ್ಣರಾಜಪೇಟೆ ಮುಖ್ಯ ಮಾರುಕಟ್ಟೆ ವ್ಯಾಪ್ತಿಯಲ್ಲಿನ ನಾಗಮಂಗಲ ಉಪಮಾರುಕಟ್ಟೆಯನ್ನು ೧೯೯೬ರಲ್ಲಿ ಪ್ರತ್ಯೇಕಿಸಿ ಅದನ್ನೂ ಸಹ ಮುಖ್ಯ ಮಾರುಕಟ್ಟೆಯ ದರ್ಜೆಗೆ ಏರಿಸಲಾಯಿತು.

## ನಿಯಂತ್ರಿತ ಸರಕುಗಳು

ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿಯ ವ್ಯವಸಾಯೋತ್ಪನ್ನಗಳ ಬಗ್ಗೆ ಸಮೀಕ್ಷೆ ನಡೆಸಿ, ವ್ಯವಸಾಯ ಉತ್ಪನ್ನವು ಆ ಕ್ಷೇತ್ರದಲ್ಲೇ ಬೆಳೆದಿದ್ದಲ್ಲಿ ಅಥವಾ ಸಂಗ್ರಹವಾದಲ್ಲಿ ಅಂತಹ ಉತ್ಪನ್ನಗಳು ನಿಯಂತ್ರಿಸಲ್ಪಡುತ್ತವೆ. ಅದರಂತೆ ಮಂಡ್ಯ ಜಿಲ್ಲೆಯ ಮುಖ್ಯ ಮತ್ತು ಉಪಮಾರುಕಟ್ಟೆಗಳಲ್ಲಿ ನಿಯಂತ್ರಣಕ್ಕೆ ಒಳಪಡಿಸಿದ ಕೃಷಿ ಉತ್ಪನ್ನಗಳೆಂದರೆ,

ಬತ್ತ, ಅಕ್ಕಿ, ರಾಗಿ, ಜೋಳ, ಮೆಕ್ಕೆ ಜೋಳ, ಹುರುಳಿ, ಅವರೆ, ಶೇಂಗಾ, ಎಳ್ಳು, ಹುಚ್ಚೆಳ್ಳು, ಬೆಲ್ಲ, ತೆಂಗಿನಕಾಯಿ, ಕೊಬ್ಬರಿ, ಒಣಮೆಣಸಿನಕಾಯಿ, ಹುಣಸೇಹಣ್ಣು, ಈರುಳ್ಳಿ, ಹಸಿಮೆಣಸಿನಕಾಯಿ, ಬಟಾಣಿ, ಬೀಟ್‌ರೂಟ್, ಹಾಗಲಕಾಯಿ, ಬದನೆ, ಬೂದಕುಂಬಳ, ಸಿಹಿಕುಂಬಳ, ಹುರುಳಿಕಾಯಿ, ಪಡವಲಕಾಯಿ, ಬೆಂಡೆಕಾಯಿ, ಸೋರೆಕಾಯಿ, ಹೂಕೋಸು, ಎಲೆಕೋಸು, ಗಡ್ಡೆಕೋಸು, ಮೂಲಂಗಿ,ಟೊಮೇಟೋ, ಸೀಮೆಬದನೆ, ಕ್ಯಾರೇಟ್, ಜಾನುವಾರುಗಳು –ಕುರಿ ಮತ್ತು ಮೇಕೆ. ಮದ್ದೂರಿನ ಮಾರುಕಟ್ಟೆಯಲ್ಲಿ ಈ ಮೇಲಿನ ಉತ್ಪನ್ನಗಳಲ್ಲದೇ ಕಬ್ಬು, ಎಳನೀರು, ಹೀರೆಕಾಯಿ ಮತ್ತು ನಾಗಮಂಗಲದ ಮಾರುಕಟ್ಟೆಯಲ್ಲಿ ಕಬ್ಬು ಮತ್ತು ಎಲ್ಲಾ ತರಹದ ಹೂಗಳನ್ನು ನಿಯಂತ್ರಿತ ಸರಕುಗಳೆಂದು ಘೋಷಿಸಲಾಗಿದೆ.

ಮದ್ದೂರು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಒಂದು ವಿಶಿಷ್ಟ ಎಳನೀರು ಮಾರುಕಟ್ಟೆಯು ಅಸ್ತಿತ್ವಕ್ಕೆ ಬಂದಿದ್ದು, ಇದು ದೇಶದಲ್ಲೇ ಅತ್ಯಂತ ದೊಡ್ಡ ಎಳನೀರು ಮಾರುಕಟ್ಟೆ ಎಂದು ಪ್ರಸಿದ್ಧಿ ಪಡೆದಿದೆ. ಇಲ್ಲಿ ಪ್ರತಿನಿತ್ಯ ಸುಮಾರು ೨.೭೫ ಲಕ್ಷ ಎಳನೀರಿನ ವಹಿವಾಟು ನಡೆಯುತ್ತಿದ್ದು, ದೆಹಲಿ, ಮುಂಬೈ, ಪುಣೆ, ಹೈದರಾಬಾದ್, ಬೆಂಗಳೂರು ಮುಂತಾದ ನಗರಗಳಲ್ಲೂ ತನ್ನ ಗ್ರಾಹಕರನ್ನು ಹೊಂದಿದೆ. ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಅಧಿಕ ಪ್ರಮಾಣದ ಬೆಲ್ಲದ ವ್ಯಾಪಾರ–ವಹಿವಾಟು ನಡೆಯುತ್ತಿದ್ದು, ಇದು ಸಹ ದಕ್ಷಿಣ ಕರ್ನಾಟಕದ ಪ್ರಸಿದ್ಧ ಬೆಲ್ಲದ ಮಾರುಕಟ್ಟೆಯಾಗಿದೆ.

**ಕೋಷ್ಟಕ ೬.೨೩ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ೧೯೯೦–೯೧ ರಿಂದ ೨೦೦೧–೦೨ರವರೆಗಿನ ಆದಾಯ ಮತ್ತು ಖರ್ಚು**

| ವರ್ಷ | ಆದಾಯ (ಲಕ್ಷ ರೂ.) | | | | ಖರ್ಚು (ಲಕ್ಷ ರೂ.) | | | |
|---|---|---|---|---|---|---|---|---|
| | ಮಂಡ್ಯ | ಮದ್ದೂರು | ಕೃಷ್ಣರಾಜಪೇಟೆ | ನಾಗಮಂಗಲ | ಮಂಡ್ಯ | ಮದ್ದೂರು | ಕೃಷ್ಣರಾಜಪೇಟೆ | ನಾಗಮಂಗಲ |
| ೧೯೯೦–೯೧ | ೫೯.೨೫ | – | – | – | ೨೯.೪೪ | – | – | – |
| ೧೯೯೧–೯೨ | ೫೪.೩೫ | – | – | – | ೨೭.೬೮ | – | – | – |
| ೧೯೯೨–೯೩ | ೪೫.೨೩ | ೫.೯೧ | ೪.೩೨ | – | ೧೪.೪೨ | ೧.೫೫ | ೧.೫೮ | – |
| ೧೯೯೩–೯೪ | ೮೩.೫೮ | ೧೪.೩೦ | ೧೧.೧೬ | – | ೩೯.೦೧ | ೭.೮೩ | ೬.೬೭ | – |
| ೧೯೯೪–೯೫ | ೮೧.೩೬ | ೨೧.೯೦ | ೧೩.೦೮ | – | ೩೮.೭೩ | ೯.೮೯ | ೬.೭೬ | – |
| ೧೯೯೫–೯೬ | ೧೦೦.೨೨ | ೨೧.೧೦ | ೧೫.೬೦ | – | ೪೧.೮೬ | ೯.೫೬ | ೯.೬೨ | – |
| ೧೯೯೬–೯೭ | ೧೨೨.೨೫ | ೨೦.೮೧ | ೧೯.೮೭ | – | ೭೮.೦೧ | ೪೫.೨೮ | ೫೫.೬೩ | – |
| ೧೯೯೭–೯೮ | ೬೨.೦೪ | ೧೯.೬೪ | ೧೫.೨೭ | ೩.೩೯ | ೪೩.೪೫ | ೩೯.೦೮ | ೧೭.೪೫ | ೧.೩೮ |
| ೧೯೯೮–೯೯ | ೧೧೯.೬೬ | ೩೧.೭೯ | ೨೦.೧೮ | ೧೩.೨೦ | ೪೬.೮೪ | ೨೧.೧೩ | ೧೩.೪೬ | ೪.೮೮ |
| ೧೯೯೯–೨೦೦೦ | ೧೩೭.೧೫ | ೩೯.೧೪ | ೨೭.೦೦ | ೧೯.೭೮ | ೪೧.೦೦ | ೨೨.೦೬ | ೧೯.೩೦ | ೧೧.೩೯ |
| ೨೦೦೦–೦೧ | ೧೨೦.೦೮ | ೪೧.೬೨ | ೧೭.೮೧ | ೨೦.೪೭ | ೧೧೮.೪೫ | ೧೯.೦೫ | ೯.೯೮ | ೧೨.೩೦ |
| ೨೦೦೧–೦೨ | ೨೧೦.೫೯ | ೬೧.೭೪ | ೧೯.೧೩ | ೩೨.೨೮ | ೮೧.೬೮ | ೨೪.೬೫ | ೮.೨೮ | ೧೨.೩೪ |

**ಕೋಷ್ಟಕ ೬.೨೪ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪರವಾನಿಗಿ ಪಡೆದ ಮಾರುಕಟ್ಟೆ ಕಾರ್ಯಕರ್ತರ ವಿವರ**

| ಮಾರುಕಟ್ಟೆ ಕಾರ್ಯಕರ್ತರು | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ | | | | | | | | | | | |
|---|---|---|---|---|---|---|---|---|---|---|---|---|
| | ಮಂಡ್ಯ | | | ಮದ್ದೂರು | | | ಕೃಷ್ಣರಾಜಪೇಟೆ | | | ನಾಗಮಂಗಲ | | |
| | ೧೯೯೫-೯೬ | ೨೦೦೦-೦೧ | ೨೦೦೧-೦೨ | ೧೯೯೫-೯೬ | ೨೦೦೦-೦೧ | ೨೦೦೧-೦೨ | ೧೯೯೫-೯೬ | ೨೦೦೦-೦೧ | ೨೦೦೧-೦೨ | ೧೯೯೫-೯೬ | ೨೦೦೦-೦೧ | ೨೦೦೧-೦೨ |
| ವರ್ತಕರು/ ಖರೀದಿದಾರರು | ೧೬೮ | ೧೫೬ | ೧೫೮ | ೮೧ | ೧೨೬ | ೧೨೮ | ೬೯ | ೪೫ | ೪೭ | ೨೩ | ೩೦ | ೪೬ |
| ಚಿಲ್ಲರೆ ವರ್ತಕರು | ೧೦೦ | ೯ | ೧೦ | ೧೧೫ | ೯೯ | ೯೮ | ೯೭ | ೨೬ | ೦೨ | ೬೧ | ೫೩ | ೬೭ |
| ದಲ್ಲಾಳರು | ೧೦೩ | ೮೮ | ೧೦೭ | – | – | – | – | – | – | ೮ | ೧೩ | ೧೫ |
| ಹಂಗಾಮಿ ವರ್ತಕರು | – | – | – | – | – | – | ೫೯ | ೪೨೮ | ೪೫೦ | ೧೯೮ | – | – |
| ಆಮದುದಾರರು | ೯೫ | ೫೮ | ೭೩ | ೪೨ | ೭೫ | ೭೮ | ೧೫ | – | ೬ | – | ೧ | ೪ |
| ರಫ್ತುದಾರರು | ೧೫೧ | ೯೦ | ೧೪೯ | ೬೦ | ೧೦೫ | ೧೦೨ | ೧೫ | ೩೫ | ೩೯ | ೧೩ | ೨೦ | ೩೧ |
| ಸಂಸ್ಕರಣದಾರರು (ಪ್ರೊಸೆಸರ್ಸ್) | ೯೨ | ೫೮ | ೬೫ | ೫೫ | ೬೨ | ೬೩ | ೧೫ | ೯ | ೭ | ೧೬ | ೧೯ | ೨೬ |
| ದಾಸ್ತಾನುದಾರರು | ೭೦ | ೧೦೮ | ೬೯ | ೪೦ | ೫೬ | ೬೧ | ೧೩ | ೦೯ | ೦೯ | ೨೧ | ೨೯ | ೩೪ |
| ಹಮಾಲರು | ೧೩೯ | ೧೧೧ | ೧೩೪ | ೩೧ | ೯೬ | ೯೫ | – | – | | | | – |
| ಉಗ್ರಾಣದವರು | ೧ | – | – | ೧ | ೧ | ೧ | ೧ | ೧ | ೧ | ೧ | – | – |
| ಸಾರಿಗೆಯವರು | – | – | – | ೧ | – | – | ೧೨ | ೨೯ | ೩೩ | – | ೧ | ೭ |

## ಆಹಾರ ಮತ್ತು ನಾಗರಿಕ ಸರಬರಾಜು

ಜೀವನಾವಶ್ಯಕ ವಸ್ತುಗಳ ಬೇಡಿಕೆ ಮತ್ತು ಪೂರೈಕೆಗೆ ಇರುವ ಅಂತರವನ್ನು ಗಮನಿಸಿ ಸರ್ಕಾರ ಜೀವನಾವಶ್ಯಕ ವಸ್ತುಗಳ ಸರಬರಾಜು ಮತ್ತು ಹಂಚಿಕೆಯನ್ನು ನಿಯಂತ್ರಿಸುತ್ತಾ ಬಂದಿದೆ. ವಿಶೇಷವಾಗಿ ಆಹಾರ ಧಾನ್ಯಗಳ ನಿಯಂತ್ರಣವನ್ನು ಎರಡನೆಯ ಮಹಾಯುದ್ದದ ನಂತರ ಜಾರಿಗೊಳಿಸಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಿಲ್ಲಾ ಮಟ್ಟದಲ್ಲಿ ಜೀವನಾವಶ್ಯಕ ವಸ್ತುಗಳ ಕಾಯ್ದೆ ೧೯೫೫ರನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂಪಿಸಲ್ಪಟ್ಟ ೨೮ ವಿವಿಧ ಆಜ್ಞೆಗಳ ಮೂಲಕ ನಿರ್ವಹಿಸುತ್ತದೆ. ಜೀವನಾವಶ್ಯಕ ವಸ್ತುಗಳ ನ್ಯಾಯ ಸಮ್ಮತ ಹಂಚಿಕೆ ಮತ್ತು ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ರಚಿಸಲಾದ ವಿವಿಧ ನಿಯಂತ್ರಣ ಕಾಯ್ದೆಗಳ ಅನುಷ್ಠಾನ ಮತ್ತು ಅನೌಪಚಾರಿಕ ಪಡಿತರ ಪದ್ಧತಿಯ ಕಾರ್ಯಾಚರಣೆ ಮುಂತಾದವು ಇಲಾಖೆಯ ಪ್ರಮುಖ ಕಾರ್ಯಗಳು.

**ಲೆವಿ ಎತ್ತುವಳಿ**

ಬತ್ತ, ಅಕ್ಕಿ, ಜೋಳ, ಇತ್ಯಾದಿ ಆಹಾರ ಧಾನ್ಯಗಳ ಸಂಗ್ರಹಣೆಯು ೧೯೬೬ರ ಕರ್ನಾಟಕ ಲೆವಿ ಆಜ್ಞೆಯ ಪ್ರಕಾರ ಸರ್ಕಾರದಿಂದ ನಡೆಯುತ್ತದೆ. ಭಾರತೀಯ ಆಹಾರ ನಿಗಮದ ಮೂಲಕ ಲೆವಿ ಧಾನ್ಯ ಸಂಗ್ರಹಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಗಿರಣಿ ಮಾಲೀಕರು ಮತ್ತು ವ್ಯಾಪಾರಿಗಳು ಉತ್ಪಾದಿಸಿದ ಉತ್ಪಾದನೆಯ ೩೩ ೧/೩ರಷ್ಟು ಅಕ್ಕಿಯನ್ನು ಲೆವಿ ರೂಪದಲ್ಲಿ ಸಂಗ್ರಹಿಸಲಾಗುತ್ತಿದೆ. ಅದರಂತೆ ಇತ್ತೀಚಿನ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೈಗೊಳ್ಳಲಾದ ಲೆವಿ ಸಂಗ್ರಹಣೆ ವಿವರವನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೬.೨೫ ಲೆವಿ ಸಂಗ್ರಹಣೆಯ ವಿವರ**

| ವರ್ಷ | ಲೆವಿ ಗುರಿ (ಮೆ.ಟನ್ ಗಳಲ್ಲಿ) | ಸಂಗ್ರಹಣೆ (ಮೆ.ಟನ್ ಗಳಲ್ಲಿ) | ಸಾಧನೆ (ಶೇ) |
|---|---|---|---|
| ೧೯೯೭-೯೮ | ೧೦,೦೦೦ | ೭,೬೭೭..೧೫೦ | ೭೬ |
| ೧೯೯೮-೯೯ | ೧೬,೦೦೦ | ೭,೪೬೧.೦೯೧ | ೪೭ |
| ೧೯೯೯-೨೦೦೦ | ೧೧,೪೦೦ | ೮,೧೯೯.೯೦೫ | ೭೧.೯೨ |

**ಕೋಷ್ಟಕ ೬.೨೬ ಜಿಲ್ಲೆಯಲ್ಲಿ ಇತ್ತೀಚಿನ ಮೂರು ವರ್ಷಗಳಲ್ಲಿ ಲೆವಿ ಅಕ್ಕಿಯ ಸಂಗ್ರಹಣೆಯ ವಿವರ**

| ಲೆವಿ ಧಾನ್ಯ | ದರ್ಜೆ | ಸಂಗ್ರಹಣೆ ಬೆಲೆ (ಕ್ವಿಂಟಾಲ್‌ಗೆ) ರೂ.ಗಳಲ್ಲಿ | | |
|---|---|---|---|---|
| | | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ |
| ಅಕ್ಕಿ | ಸಾಮಾನ್ಯ | ೬೭೯.೪೦ | ೭೨೪.೩೦ | ೮೦೧.೪೦ |
| ಅಕ್ಕಿ | ಎ ದರ್ಜೆ | ೭೨೪.೬೦ | ೭೬೯.೬೦ | ೮೪೬.೭೦ |
| ಅಕ್ಕಿ(ಪಾರ್ ಬಾಯಿಲ್ಡ್) | ಸಾಮಾನ್ಯ | ೬೮೩.೮೦ | ೭೨೮.೧೦ | ೮೦೪.೦೦ |
| ಅಕ್ಕಿ(ಪಾರ್ ಬಾಯಿಲ್ಡ್) | ಎ ದರ್ಜೆ | ೭೨೮.೩೦ | ೭೭೨.೬೦ | ೮೪೮.೬೦ |

**ಸಾರ್ವಜನಿಕ ವಿತರಣಾ ವ್ಯವಸ್ಥೆ**

ಕರ್ನಾಟಕದಲ್ಲಿ ಜೀವನಾವಶ್ಯಕ ಆಹಾರ ಧಾನ್ಯ ಮತ್ತು ಇತರೆ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಸಾರ್ವಜನಿಕರಿಗೆ ಹಂಚುವ ವ್ಯವಸ್ಥೆಯು ೧೯೪೪ರಲ್ಲಿ ಮೊದಲಿಗೆ ಕೆಲವು ಆಯ್ದ ನಗರಗಳಲ್ಲಿ ಪ್ರಾರಂಭವಾಯಿತು. ಮಂಡ್ಯ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆಯನ್ನು ೧೯೬೬ರಲ್ಲಿ ಜಾರಿಗೆ ತರಲಾಯಿತು. ಮಂಡ್ಯ ನಗರ ಮಾತ್ರ ಅನೌಪಚಾರಿಕ ಪಡಿತರ ವ್ಯವಸ್ಥೆಗೆ ಒಳಪಟ್ಟಿರುತ್ತದೆ.

ಅವಶ್ಯಕ ವಸ್ತುಗಳು ಅಂದರೆ ಅಕ್ಕಿ, ಗೋದಿ, ಸಕ್ಕರೆ, ಸೀಮೆಎಣ್ಣೆ ಹಾಗೂ ಪಾಮೋಲಿನ್ ಎಣ್ಣೆಯನ್ನು ಪಡಿತರ ಚೀಟಿ ವ್ಯವಸ್ಥೆಯನ್ವಯ ನ್ಯಾಯಬೆಲೆ ಅಂಗಡಿಗಳ ಮೂಲಕ ಗ್ರಾಮಾಂತರ ಮತ್ತು ನಗರ ಪ್ರದೇಶಗಳೆರಡರಲ್ಲೂ ಸಾರ್ವಜನಿಕ ವಿತರಣಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ೬,೪೦೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಗ್ರಾಮೀಣ ಬಡಜನರಿಗೆ ಮತ್ತು ೧೧೮೫೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ನಗರ/ಪಟ್ಟಣ ಪ್ರದೇಶದ

ನಿವಾಸಿಗಳಿಗೆ ಹಸಿರು ಪಡಿತರ ಚೀಟಿಗಳ ಮೂಲಕ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ೬,೪೦೦ ರೂ.ಗಳಿಗಿಂತ ಹೆಚ್ಚಿನ ವಾರ್ಷಿಕ ಆದಾಯವುಳ್ಳ ಗ್ರಾಮಾಂತರ ಪ್ರದೇಶದ ಜನರಿಗೆ ಕೇಸರಿ ಪಡಿತರ ಚೀಟಿಗಳನ್ನು ನೀಡಲಾಗಿತ್ತು. ವಾರ್ಷಿಕ ಆದಾಯವು ೧೧,೮೫೦ ರೂ.ಗಳಿಗಿಂತ ಹೆಚ್ಚಿಗೆ ಇರುವ ನಗರ ಪ್ರದೇಶದ ಕುಟುಂಬಗಳಿಗೆ ಭಾವಚಿತ್ರವಿರುವ (ಫೋಟೋ) ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ.

**ಕೋಷ್ಟಕ ೬.೨೭ ಜಿಲ್ಲೆಯಲ್ಲಿ ೧೯೯೦-೯೧ ಮತ್ತು ೧೯೯೫-೯೬ ರಲ್ಲಿದ್ದ ನ್ಯಾಯಬೆಲೆ ಅಂಗಡಿಗಳು ಮತ್ತು ಪಡಿತರ ಚೀಟಿಗಳ ವಿವರ**

| ತಾಲ್ಲೂಕು | ನ್ಯಾಯಬೆಲೆ ಅಂಗಡಿಗಳ ಸಂಖ್ಯೆ | | | | ಪಡಿತರ ಚೀಟಿಗಳ ಸಂಖ್ಯೆ | | | | | |
|---|---|---|---|---|---|---|---|---|---|---|
| | ಗ್ರಾಮಾಂತರ | | ನಗರ / ಪಟ್ಟಣ | | ಹಸಿರು ಪಡಿತರ ಚೀಟಿಗಳು | | ಕೇಸರಿ ಪಡಿತರ ಚೀಟಿಗಳು | | ಫೋಟೋ ಪಡಿತರ ಚೀಟಿಗಳು | |
| | ೧೯೯೦-೯೧ | ೧೯೯೫-೯೬ | ೧೯೯೦-೯೧ | ೧೯೯೫-೯೬ | ೧೯೯೦-೯೧ | ೧೯೯೫-೯೬ | ೧೯೯೦-೯೧ | ೧೯೯೫-೯೬ | ೧೯೯೦-೯೧ | ೧೯೯೫-೯೬* |
| ಮಂಡ್ಯ | ೯೪ | ೧೦೩ | ೪೮ | ೫೦ | ೨೪,೭೯೧ | ೩೯,೬೭೬ | ೨೩,೮೬೯ | ೨೪,೫೫೮ | ೨೧,೭೬೯ | ೨೨,೭೪೨ |
| ಮದ್ದೂರು | ೧೦೯ | ೧೨೧ | ೮ | ೮ | ೨೪,೯೬೩ | ೩೨,೯೬೩ | ೨೪,೧೮೨ | ೨೩,೩೯೨ | ೩,೮೬೩ | ೩,೬೯೮ |
| ಮಳವಳ್ಳಿ | ೭೭ | ೯೪ | ೧೨ | ೧೧ | ೨೬,೯೨೦ | ೨೧,೭೬೧ | ೧೩,೨೫೦ | ೧೬,೬೩೩ | ೪,೭೦೭ | ೪,೯೮೮ |
| ಪಾಂಡವಪುರ | ೫೩ | ೫೪ | ೪ | ೬ | ೧೬,೩೨೭ | ೩೦,೮೮೫ | ೧೦,೯೫೪ | ೧೦,೯೫೪ | ೩,೧೯೫ | ೩,೦೦೫ |
| ಶ್ರೀರಂಗಪಟ್ಟಣ | ೪೧ | ೪೧ | ೭ | ೮ | ೧೮,೨೪೮ | ೨೬,೬೭೦ | ೮,೪೯೦ | ೮,೮೦೦ | ೪,೫೭೫ | ೫,೫೫೨ |
| ಕೃಷ್ಣರಾಜಪೇಟೆ | ೮೬ | ೭೦ | – | – | ೨೦,೬೨೭ | ೩೨,೧೨೩ | ೧೯,೫೪೩ | ೧೫,೮೮೫ | – | ೬೦ |
| ನಾಗಮಂಗಲ | ೯೫ | ೯೮ | – | – | ೨೦,೫೦೦ | ೩೬,೨೫೦ | ೧೩,೪೯೧ | ೧೬,೯೮೦ | – | ೯೨ |

· ಪೋಲೀಸ್ ಪಡಿತರ ಚೀಟಿಗಳು ಸೇರಿದಂತೆ

ಕಡುಬಡಕುಟುಂಬಗಳಿಗೆ ಆಹಾರ ಒದಗಿಸಬೇಕೆಂಬ ಉದ್ದೇಶದಿಂದ ಅಂತ್ಯೋದಯ ಅನ್ನ ಯೋಜನೆಯನ್ನು ಕೇಂದ್ರ ಸರ್ಕಾರ ಆರಂಭಿಸಿದ್ದು,ಅದನ್ನು ರಾಜ್ಯ ಸರ್ಕಾರ ೨೦೦೧-೦೨ರಿಂದ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯನ್ವಯ ಪ್ರತಿ ಬಡಕುಟುಂಬಗಳಿಗೆ ಅತಿ ಕಡಿಮೆ ದರದಲ್ಲಿ (ಪ್ರಸ್ತುತ ಅಕ್ಕಿ ಕೆ.ಜಿ.ಗೆ ಮೂರು ರೂ.ಹಾಗೂ ಗೋಧಿ ಕೆ.ಜಿ.ಗೆ ಎರಡು ರೂ.) ತಿಂಗಳಿಗೆ ಒಟ್ಟು ೨೫ ಕೆ.ಜಿ. ಆಹಾರ ಧಾನ್ಯವನ್ನು ವಿತರಿಸಲಾಗುತ್ತಿದೆ.

**ಕೋಷ್ಟಕ ೬.೨೮ ಜಿಲ್ಲೆಯಲ್ಲಿ ೨೦೦೧-೦೨ರಲ್ಲಿದ್ದಂತೆ ನ್ಯಾಯಬೆಲೆ ಅಂಗಡಿಗಳು ಮತ್ತು ವಿವಿಧ ಬಗೆಯ ಪಡಿತರ ಚೀಟಿಗಳ ವಿವರ**

| ತಾಲ್ಲೂಕು | ನ್ಯಾಯಬೆಲೆ ಅಂಗಡಿಗಳ ಸಂಖ್ಯೆ | | ಪಡಿತರ ಚೀಟಿಗಳು | | | | | | | |
|---|---|---|---|---|---|---|---|---|---|---|
| | ಗ್ರಾಮಾಂತರ | ನಗರ/ ಪಟ್ಟಣ | ಅಂತ್ಯೋದಯ ಕಾರ್ಡುಗಳು | | ಹಸಿರು ಕಾರ್ಡುಗಳು | | ಕೇಸರಿ ಕಾರ್ಡುಗಳು | ಪೋಲಿಸ್ ಕಾರ್ಡುಗಳು | | ಫೋಟೋ ಕಾರ್ಡುಗಳು |
| | | | ಗ್ರಾಮಾಂತರ | ನಗರ | ಗ್ರಾಮಾಂತರ | ನಗರ | ಗ್ರಾಮಾಂತರ | ಗ್ರಾಮಾಂತರ | ನಗರ | ನಗರ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| ಮಂಡ್ಯ | ೧೧೨ | ೫೫ | ೨,೪೫೪ | ೧,೦೧೫ | ೩೮,೬೮೮ | ೫,೭೫೦ | ೨೭,೧೪೦ | – | ೮೪೦ | ೨೬,೬೯೪ |
| ಮದ್ದೂರು | ೧೨೪ | ೯ | ೨,೨೪೯ | ೪೫೫ | ೩೬,೯೯೬ | ೨,೫೭೧ | ೨೬,೧೦೮ | – | ೧೪೨ | ೪,೪೬೯ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
|---|---|---|---|---|---|---|---|---|---|---|
| ಮಳವಳ್ಳಿ | ೯೬ | ೧೧ | ೨,೫೮೫ | ೧೭೭ | ೪೩,೦೮೯ | ೧,೦೦೩ | ೧೯,೦೭೦ | – | ೧೪೩ | ೭,೦೭೦ |
| ಪಾಂಡವಪುರ | ೬೦ | ೪ | ೧,೪೯೫ | ೩೯೯ | ೩೫,೫೮೧ | ೨,೨೬೧ | ೬,೭೧೧ | – | ೪೧ | ೩,೩೯೩ |
| ಶ್ರೀರಂಗಪಟ್ಟಣ | ೪೧ | ೯ | ೧,೨೧೬ | ೨೮೫ | ೨೪,೮೫೬ | ೧,೬೪೧ | ೧೦,೯೯೭ | – | ೧೪೮ | ೬,೦೦೪ |
| ಕೃಷ್ಣರಾಜಪೇಟೆ | ೯೬ | – | ೧,೬೦೪ | – | ೩೫,೩೯೨ | – | ೧೭,೧೭೯ | ೭೫ | – | – |
| ನಾಗಮಂಗಲ | ೯೮ | – | ೧,೨೫೫ | – | ೩೪,೮೭೮ | – | ೮,೭೦೧ | ೯೪ | – | – |

## ಸಂತೆಗಳು

ಸಾಮಾನ್ಯವಾಗಿ ವಾರಕ್ಕೆ ಒಂದು ದಿವಸ ಸ್ಥಳೀಯ ಉತ್ಪಾದಕರು ಹಾಗೂ ವ್ಯಾಪಾರಿಗಳು ಉಪಯುಕ್ತವಾದ ವಸ್ತುಗಳನ್ನು ಊರಿನ ನಿರ್ದಿಷ್ಟ ಸ್ಥಳದಲ್ಲಿ ಸ್ಥಳೀಯ ಗ್ರಾಹಕರೊಂದಿಗೆ ವಿನಿಮಯ ಮಾಡುವ ವಿಧಾನ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಇದನ್ನು ಸಂತೆ ಎಂದು ಕರೆಯುತ್ತಾರೆ. ಸ್ಥಳೀಯವಾಗಿ ಹತ್ತಾರು ಕಿಲೋಮೀಟರ್ ಸುತ್ತಳತೆಯ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ತಮ್ಮ ವಾರದ ಅವಶ್ಯಕತೆಯ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಸಂತೆಯು ಅನುಕೂಲವಾದ ಮಾರುಕಟ್ಟೆ. ರೈತರು ಉತ್ಪಾದಿಸಿದ ಕಾಳುಗಳು, ಹಣ್ಣು, ತರಕಾರಿ, ತೆಂಗಿನಕಾಯಿ, ಕೊಬ್ಬರಿ, ಬೆಲ್ಲ, ವೀಳ್ಯದೆಲೆ, ಅಡಕೆ ಮುಂತಾದ ನೂರಾರು ವಸ್ತುಗಳು ಮಾರಾಟಕ್ಕಾಗಿ ಬರುತ್ತವೆ. ರೈತರು ಈ ವಸ್ತುಗಳನ್ನು ಮಾರಾಟ ಮಾಡಿ, ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುತ್ತಾರೆ. ಸಂತೆಯ ಮಾರಾಟವನ್ನೇ ಕಸುಬಾಗಿ ಮಾಡಿಕೊಂಡಿರುವ ಕೆಲವು ವ್ಯಾಪಾರಿಗಳೂ ಇದ್ದಾರೆ. ಇವರು ಸಂತೆಗಳಿಗೆ ಬಂದು ಕಿರಾಣಿ ಅಂಗಡಿಯನ್ನೇ ತೆಗೆಯುತ್ತಾರೆ.

ಸಂತೆಯ ವಿಷಯವನ್ನು ತಿಳಿಸುವ ವಿವರಗಳು ಆರ್ಥಿಕ ಇತಿಹಾಸದಲ್ಲಿ ದೊರೆಯುತ್ತವೆ. ಅನೇಕ ಶಾಸನಗಳಲ್ಲೂ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ವಾರದ ವಿವಿಧ ದಿನಗಳಲ್ಲಿ ವಿವಿಧ ಕಡೆಗಳಲ್ಲಿ ಸಂತೆಗಳು ಸೇರುತ್ತವೆ. ಸಂತೆಗಳನ್ನು ನಡೆಸುವುದಕ್ಕೆ ಸಂತೇಮಾಳ ಎಂಬ ವಿಶಾಲವಾದ ಸ್ಥಳವಿರುತ್ತದೆ. ಸಂತೇಮಾಳದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ನಿರ್ದಿಷ್ಟ ವಸ್ತುಗಳನ್ನು ಮಾರಬೇಕೆಂಬ ವ್ಯವಸ್ಥೆ ಇರುತ್ತದೆ. ಸ್ಥಳೀಯ ಸಂಸ್ಥೆಗಳು ಈ ಸಂತೆಗಳ ಮೇಲ್ವಿಚಾರಣೆಯನ್ನು ಮಾಡುತ್ತವೆ. ವ್ಯಾಪಾರಕ್ಕೆ ಬರುವವರು ವಸ್ತುಗಳ ಮೌಲ್ಯದ ಆಧಾರದ ಮೇಲೆ ಶುಲ್ಕವನ್ನು ನೀಡಬೇಕಾಗುತ್ತದೆ. ಅಲ್ಲದೆ ಸ್ಥಳಕ್ಕೂ ಶುಲ್ಕವಿರುತ್ತದೆ.

ಆಯಾಯ ಗ್ರಾಮದೇವತೆಯ ವಾರದ ದಿವಸವನ್ನು ಸಂತೆಯ ದಿನವೆಂದು ಕರೆಯುವ ಸಂಪ್ರದಾಯವೂ ಇದೆ. ಗ್ರಾಮೀಣ ಪ್ರದೇಶದಲ್ಲಿ ಉತ್ಪಾದನೆಯಾದ ಕೃಷಿ ವಸ್ತುಗಳೇ ಅಲ್ಲದೆ ಗೃಹ ಕೈಗಾರಿಕಾ ಉತ್ಪನ್ನಗಳಿಗೂ ಸಂತೆಗಳು ಮಾರುಕಟ್ಟೆಯನ್ನು ಒದಗಿಸುತ್ತವೆ. ಸಂತೆಗಳಲ್ಲಿ ದೊಡ್ಡ ವರ್ತಕರು ಅವರ ಪ್ರತಿನಿಧಿಗಳ ಮುಖಾಂತರ ಮಾರಾಟಕ್ಕೆ ಬಂದ ಕಚ್ಚಾ ಸಾಮಗ್ರಿಗಳನ್ನೂ, ಬೆಲ್ಲ ಮುಂತಾದ ಸಿದ್ಧ ವಸ್ತುಗಳನ್ನೂ ಕೊಳ್ಳುವುದುಂಟು. ವಾರದ ಸಂತೆಗಳಲ್ಲಿ ಚಿಲ್ಲರೆ ವರ್ತಕರು ಸಿದ್ಧಪಡಿಸಿದ ಗ್ರಾಹಕ ವಸ್ತುಗಳನ್ನು ಅಂದರೆ ಹೊಲಿಗೆ ಬಟ್ಟೆ, ಅಡಿಗೆ ಪಾತ್ರೆ, ಗಾಜಿನ ಲೋಟ, ತಟ್ಟೆ, ಸಾಬೂನು ಮತ್ತು ದಿನನಿತ್ಯದ ಬಳಕೆಯ ವಸ್ತು, ಮುಂತಾದವುಗಳನ್ನು ಪೇಟೆಯ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದರಿಂದ ಗ್ರಾಮಸ್ಥರಿಗೆ ಅನುಕೂಲವೇ ಆಗುತ್ತದೆ. ಸಂತೆಗಳಲ್ಲದೆ ವರ್ಷಕ್ಕೆ ಒಂದು ಬಾರಿ ಗ್ರಾಮದೇವತೆಯ ರಥೋತ್ಸವ ಕಾಲದಲ್ಲಿ ಜಾತ್ರೆಗಳು ಸೇರುವುದೂ ಉಂಟು. ಜಾತ್ರೆಗಳಲ್ಲಿ ಮಾರಾಟವಾಗುವ ವಸ್ತುಗಳು ಸಂತೆಗಳಲ್ಲಿ ಮಾರಾಟವಾಗುವ ವಸ್ತುಗಳಿಗಿಂತ ಭಿನ್ನವಾಗಿರುತ್ತವೆ. ಸಂತೆಗಳಲ್ಲಿ ನಿತ್ಯ ಬಳಕೆಯ ವಸ್ತುಗಳು ಮಾರಾಟವಾದರೆ, ಜಾತ್ರೆಗಳಲ್ಲಿ ಬಹುಕಾಲ ಬಾಳುವ ವಸ್ತುಗಳಾದ ಹಿತ್ತಾಳೆ, ಸ್ಟೀಲ್ ಮತ್ತು ಅಲ್ಯುಮಿನಿಯಂ ಪಾತ್ರೆ, ಉಡುಪು, ಪಾದರಕ್ಷೆ, ಛತ್ರಿಗಳು, ಸ್ತ್ರೀಯರ ಅಲಂಕಾರ ವಸ್ತು, ಗಾಜಿನ ಬಳೆ, ಆಟಿಕೆ ವಸ್ತು, ಪೂಜಾ

ಸಾಮಗ್ರಿಗಳು, ತಿಂಡಿತಿನಿಸು ಇತ್ಯಾದಿ ವಸ್ತುಗಳು ಮಾರಾಟಕ್ಕಾಗಿ ಬರುತ್ತವೆ. ಜಿಲ್ಲೆಯ ಮಂಡ್ಯ, ನಿಡಘಟ್ಟ, ಮಳವಳ್ಳಿ, ನಾಗಮಂಗಲ, ಬೆಳ್ಳೂರು, ಕೃಷ್ಣರಾಜಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಈ ಸ್ಥಳಗಳಲ್ಲಿ ಸೇರುವ ಸಂತೆಗಳು ಅತ್ಯಂತ ಪ್ರಮುಖವಾದವು.

**ಕೋಷ್ಟಕ ೬.೨೯ ಜಿಲ್ಲೆಯ ವಿವಿಧ ಸ್ಥಳಗಳಲ್ಲಿನ ಸಂತೆಗಳ ವಿವರ**

| ತಾಲ್ಲೂಕು | ಸಂತೆ ನಡೆಯುವ ಸ್ಥಳ | ಸಂತೆ ನಡೆಯುವ ದಿನ | ಸಗಟು ವ್ಯಾಪಾರ | ಚಿಲ್ಲರೆ ವ್ಯಾಪಾರ | ಜಾನುವಾರು |
|---|---|---|---|---|---|
| ೧ | ೨ | ೩ | ೪ | ೫ | ೬ |
| ಮಂಡ್ಯ | ಮಂಡ್ಯ | ಗುರುವಾರ | – | ತೆಂಗಿನಕಾಯಿ, ಬೆಲ್ಲ, ಅಕ್ಕಿ, ಇತ್ಯಾದಿ | – |
| | ಬಸರಾಳು | ಶನಿವಾರ | – | ರಾಗಿ, ಬೆಲ್ಲ, ತೆಂಗಿನಕಾಯಿ, ಇತ್ಯಾದಿ | ಎಮ್ಮೆ, ಕುರಿ, ಮೇಕೆ |
| | ಹಲ್ಲೆಗೆರೆ | ಬುಧವಾರ | – | ರಾಗಿ, ಬೆಲ್ಲ, ತೆಂಗಿನಕಾಯಿ, ಇತ್ಯಾದಿ | – |
| ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ | ಶನಿವಾರ | – | ರಾಗಿ, ಬೆಲ್ಲ, ತೆಂಗಿನಕಾಯಿ, ಇತ್ಯಾದಿ | – |
| | ಕೃಷ್ಣರಾಜಸಾಗರ | ಭಾನುವಾರ | – | ರಾಗಿ, ಬೆಲ್ಲ, ತೆಂಗಿನಕಾಯಿ, ಇತ್ಯಾದಿ | – |
| ಮದ್ದೂರು | ನಿಡಘಟ್ಟ | ಬುಧವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಕೊಪ್ಪ | ಭಾನುವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| ಮಳವಳ್ಳಿ | ಮಳವಳ್ಳಿ | ಶನಿವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | ಕುರಿ, ಮೇಕೆ |
| | ಹಲಗೂರು | ಭಾನುವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಕಿರುಗಾವಲು | ಶನಿವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | ಕುರಿ, ಮೇಕೆ |
| ಕೃಷ್ಣರಾಜಪೇಟೆ | ತೆಂಡೆಗೆರೆ | ಸೋಮವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | ಕುರಿ, ಮೇಕೆ |
| | ಅಕ್ಕಿಹೆಬ್ಬಾಳು | ಸೋಮವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಹೊಸಹೊಳಲು | ಭಾನುವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಕಿಕ್ಕೇರಿ | ಶುಕ್ರವಾರ | ತೆಂಗಿನಕಾಯಿ | – | – |
| | ಸಂತೇಬಾಚಹಳ್ಳಿ | ಗುರುವಾರ | ತೆಂಗಿನಕಾಯಿ | – | – |
| | ಬೂಕಿನಕೆರೆ | ಶನಿವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಹರಿಹರಪುರ | ಗುರುವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಸೋಮನಹಳ್ಳಿ | ಬುಧವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಮಂದಗೆರೆ | ಬುಧವಾರ | | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಅನಗೋಲ | ಬುಧವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| ನಾಗಮಂಗಲ | ನಾಗಮಂಗಲ | ಶುಕ್ರವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಬಿಂಡಿಗನವಿಲೆ | ಸೋಮವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಕದಬಳ್ಳಿ | ಶನಿವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | ಕುರಿ, ಮೇಕೆ, ದನ |

| ೧ | ೨ | ೩ | ೪ | ೫ | ೬ |
|---|---|---|---|---|---|
| | ಬೋಗಾದಿ | ಶನಿವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಬೆಳ್ಳೂರು | ಸೋಮವಾರ | ತೆಂಗಿನಕಾಯಿ, ಕೊಬ್ಬರಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ದೇವಲಾಪುರ | ಸೋಮವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಹೊನ್ನಾವರ | ಬುಧವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| ಪಾಂಡವಪುರ | ಪಾಂಡವಪುರ | ಗುರುವಾರ | ತೆಂಗಿನಕಾಯಿ | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಜಕ್ಕನಹಳ್ಳಿ | ಸೋಮವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಮೇಲುಕೋಟೆ | ಮಂಗಳವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಕ್ಯಾತನಹಳ್ಳಿ | ಮಂಗಳವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |
| | ಚಿನಕುರುಳಿ | ಶನಿವಾರ | – | ಬೆಲ್ಲ, ರಾಗಿ, ತರಕಾರಿ, ಇತ್ಯಾದಿ | – |

**ಜಾನುವಾರು ಸಂತೆಗಳು/ದನಗಳ ಜಾತ್ರೆ :** ವ್ಯವಸಾಯ ಉತ್ಪನ್ನಗಳು ಮಾರಾಟ ನಿಯಂತ್ರಣಕ್ಕೆ ಒಳಪಟ್ಟಂತೆ ಈಗ ಜಾನುವಾರುಗಳ ಮಾರಾಟವೂ ನಿಯಂತ್ರಿತ ಮಾರುಕಟ್ಟೆಗಳ ಸುಪರ್ದಿಯಲ್ಲಿ ನಡೆಯುತ್ತದೆ. ವಾರದ ಸಂತೆ ನಡೆಯುವ ಕೆಲವು ಸ್ಥಳಗಳಲ್ಲಿ ಜಾನುವಾರುಗಳ ಮಾರಾಟ ವ್ಯವಸ್ಥೆಯನ್ನು ನಿಯಂತ್ರಿತ ಮಾರುಕಟ್ಟೆ ಸಮಿತಿ ಮಾಡುತ್ತದೆ. ಇದಲ್ಲದೇ ಹಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ಜಾತ್ರೆ, ಉತ್ಸವ, ದನಗಳ ಪ್ರದರ್ಶನ ಮುಂತಾದ ಸಂದರ್ಭಗಳಲ್ಲಿ ಜಾನುವಾರುಗಳ ವಿಶೇಷ ಮಾರಾಟ ನಡೆಯುವುದು. ಈ ಸಂದರ್ಭಗಳಲ್ಲಿ ಜಾನುವಾರು ಸಂತೆಯು ಒಂದೆರಡು ವಾರಗಳ ಕಾಲ ನಡೆಯುತ್ತದೆ. ಸಾಮಾನ್ಯವಾಗಿ ದನಗಳ ಜಾತ್ರೆಯನ್ನು ಸುಗ್ಗಿಯ ನಂತರ ಮತ್ತು ಮಳೆಗಾಲ ಪ್ರಾರಂಭವಾಗುವ ಮೊದಲು ನಡೆಸಲಾಗುವುದು. ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್.ಪೇಟೆ ತಾಲೂಕಿನ ಹೇಮಗಿರಿ ದನಗಳ ಜಾತ್ರೆ, ಮದ್ದೂರು ತಾಲೂಕಿನ ಬಸವನಗುಡಿ ದನಗಳ ಜಾತ್ರೆ, ಮದ್ದೂರಿನ ಮದ್ದೂರಮ್ಮನ ಜಾತ್ರೆ, ಹನುಮಂತನಗರದ ಆತ್ಮಲಿಂಗೇಶ್ವರ ಜಾತ್ರೆ, ಇವು ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವ ಜಾತ್ರೆಗಳಾಗಿವೆ. ಈ ಜಾತ್ರೆಗಳಲ್ಲಿ ದನಗಳ ವ್ಯಾಪಾರ ವಹಿವಾಟು ಅಧಿಕವಾಗಿ ನಡೆಯುತ್ತದೆ. ಬೇಬಿ, ಕರಿಘಟ್ಟ, ಬಿಂಡಿಗನವಿಲೆ, ಕೋಟೆಬೆಟ್ಟ, ಆದಿಚುಂಚನಗಿರಿ, ಚಿಕ್ಕನಾಕನಹಳ್ಳಿ, ಮೇಲುಕೋಟೆ, ಬೆಳ್ಳುಂಡಗೆರೆ, ಸುಂಡಹಳ್ಳಿ, ಹುಲಿಕೆರೆ ಈ ಸ್ಥಳಗಳಲ್ಲಿ ನಡೆಯುವ ದನಗಳ ಜಾತ್ರೆಗಳೂ ಪ್ರಾಮುಖ್ಯತೆಯನ್ನು ಪಡೆದಿವೆ.

## ತೂಕ ಮತ್ತು ಅಳತೆಗಳು

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಆಚರಣೆಗೆ ತರುವುದಕ್ಕಿಂತ ಪೂರ್ವದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಂದು ಮಣಕ್ಕೆ ೪೦ ಸೇರು, ಒಂದು ಸೇರಿಗೆ ೨೪ ತೊಲೆ, ಐದು ಸೇರು ಎಂದರೆ ಪಂಚೇರು ಅಥವಾ ವೀಸೆ, ಈ ಮಾನಗಳು ಬಳಕೆಯಲ್ಲಿದ್ದವು. ಸ್ಥಳೀಯವಾಗಿ ರೂಢಿಯಲ್ಲಿದ್ದ ತೂಕ, ಮಾಪನಗಳನ್ನು ಬಳಸಿ ದ್ರವ್ಯ ಪದಾರ್ಥಗಳನ್ನು ಅಳೆಯಲಾಗುತ್ತಿತ್ತು. ಬೆಣ್ಣೆ, ತುಪ್ಪವನ್ನು ತೂಗಲು ವೀಸೆಯನ್ನು ಮತ್ತು ಎಣ್ಣೆ ಪದಾರ್ಥಗಳನ್ನು ಸೇರಿನಲ್ಲಿ ಅಳೆಯುವ ಪದ್ಧತಿ ಜಾರಿಯಲ್ಲಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟಕ್ಕೆ ಗ್ಯಾಲನ್ ಎಂಬ ಅಳತೆಯ ಮಾನವನ್ನು ಉಪಯೋಗಿಸುತ್ತಿದ್ದರು.

ತೂಕಗಳ ಹಾಗೂ ಅಳತೆಗಳ ಮೆಟ್ರಿಕ್ ಪದ್ಧತಿಯನ್ನೇ ಏಕರೂಪವಾಗಿ ದೇಶದಾದ್ಯಂತ ಅನುಸರಿಸಬೇಕೆಂಬ ಭಾರತ ಸರ್ಕಾರದ ತೀರ್ಮಾನಕ್ಕನುಸಾರವಾಗಿ ಕರ್ನಾಟಕ ಸರ್ಕಾರ ಕರ್ನಾಟಕದಾದ್ಯಂತ ಬಳಸಲಾಗುವ ತೂಕಗಳಿಗೆ ಹಾಗೂ ಅಳತೆಗಳಿಗೆ ಸಂಬಂದಪಟ್ಟ ೧೯೫೮ರ ಕರ್ನಾಟಕ ತೂಕ ಮತ್ತು ಆಳತೆ (ನಿಬಂಧನೆ) ಅಧಿನಿಯಮವನ್ನು ಇಡೀ ರಾಜ್ಯದಲ್ಲಿ ೧೯೬೦ರ ಜೂನ್ ಒಂದರಿಂದ ಜಾರಿಗೆ ತಂದಿತು. ಆರಂಭಕ್ಕೆ ಮೆಟ್ರಿಕ್ ತೂಕಗಳ ಉಪಯೋಗವನ್ನು ರಾಜ್ಯದಲ್ಲಿ ಬೆಂಗಳೂರು, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಮತ್ತು ರಾಜ್ಯದ ಎಲ್ಲಾ ನಿಯಂತ್ರಿತ ಮಾರುಕಟ್ಟೆ ಪ್ರದೇಶಗಳು, ಔದ್ಯೋಗಿಕ ಸಂಸ್ಥೆಗಳು ಹಾಗೂ ಕಾರ್ಖಾನೆಗಳಲ್ಲಿ ೧೯೫೮ರ ಅಕ್ಟೋಬರ್ ಒಂದರಿಂದ ಜಾರಿಗೆ ತರಲಾಯಿತು. ಅನಂತರ ಇದನ್ನು ೧೯೬೦ರ ಏಪ್ರಿಲ್ ಒಂದರಿಂದ ರಾಜ್ಯದ ಎಲ್ಲಾ ಪ್ರದೇಶಗಳಿಗೂ ವಿಸ್ತರಿಸಲಾಯಿತು. ಈ ಹೊಸ ತೂಕಗಳ ಬಳಕೆಯನ್ನು ಇಡಿ ರಾಜ್ಯದಲ್ಲಿ ೧೯೬೨ರ ಏಪ್ರಿಲ್ ಒಂದರಿಂದ ಕಡ್ಡಾಯವಾಗಿ ಜಾರಿಗೆ ತರಲಾಗಿದೆ.

ಮಾರುಕಟ್ಟೆ ಇಲಾಖೆಯ ಅವಿಭಾಜ್ಯ ಅಂಗವಾಗಿದ್ದ ತೂಕ ಮತ್ತು ಅಳತೆ ಇಲಾಖೆಯನ್ನು ೧೯೭೬ರಲ್ಲಿ ಪ್ರತ್ಯೇಕಿಸಿ ಸ್ವತಂತ್ರ ಇಲಾಖೆಯಾದ 'ತೂಕ ಮತ್ತು ಅಳತೆ ಇಲಾಖೆ'ಯನ್ನು ಸ್ಥಾಪಿಸಲಾಯಿತು. ೧೯೯೦ರಿಂದ ಈ ಇಲಾಖೆಯ ಹೆಸರನ್ನು ಕಾನೂನು ಮಾಪನ ಶಾಸ್ತ್ರ (ಲೀಗಲ್ ಮೆಟ್ರಾಲಜಿ) ಇಲಾಖೆಯೆಂದು ಬದಲಾಯಿಸಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಈ ಇಲಾಖೆಯ ಆಡಳಿತ ನಿರ್ವಹಿಸಲು ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಚೇರಿಯನ್ನು ೧೯೬೨ರಲ್ಲಿ ತೆರೆಯಲಾಯಿತು. ಈ ಕಚೇರಿಯ ಅಧೀನಕ್ಕೆ ಒಳಪಟ್ಟಂತೆ ಉಪ-ವಿಭಾಗ ಮಟ್ಟದ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರ ಕಚೇರಿಗಳನ್ನು ಪಾಂಡವಪುರ ಮತ್ತು ಮದ್ದೂರುಗಳಲ್ಲಿ ೧೯೮೩ರಲ್ಲಿ ಸ್ಥಾಪಿಸಲಾಯಿತು.

ಕಾನೂನು ಮಾಪನ ಶಾಸ್ತ್ರ ಇಲಾಖೆಯವರು ತೂಕಗಳು ಮತ್ತು ಅಳತೆಗಳಿಗೆ ಸಂಬಂಧಪಟ್ಟ ಅಧಿನಿಯಮವನ್ನೂ ಸಹ ಕಾರ್ಯಗತಗೊಳಿಸುವುದರ ಜೊತೆಗೆ ಉಪಯೋಗದಲ್ಲಿದ್ದಂತ ತೂಕ ಮತ್ತು ಅಳತೆಗಳ ಪರೀಕ್ಷೆ, ಅವುಗಳಿಗೆ ಮುದ್ರೆ ಹಾಕುವುದು ಮತ್ತು ಅವುಗಳನ್ನು ಪರಿಶೀಲಿಸುವುದೇ ಮೊದಲಾದ ಕೆಲಸಗಳಲ್ಲದೇ, ಅಧಿನಿಯಮ ಹಾಗೂ ನಿಬಂಧನೆಗಳನ್ನು ಉಲ್ಲಂಘಿಸುವಂತಹ ವ್ಯಾಪಾರಿಗಳ ವಿರುದ್ದ ಕಾನೂನು ಕ್ರಮ ಸಹ ಕೈಗೊಳ್ಳುವರು. ಈ ಇಲಾಖೆ ತೂಕ ಮತ್ತು ಅಳತೆ ಪ್ರಮಾಣಗಳ ಅಧಿನಿಯಮ (ಪ್ಯಾಕ್ ಮಾಡಿದ ವಸ್ತುಗಳ) ೧೯೭೭ನ್ನು ಕಾನೂನು ಬದ್ಧವಾಗಿ ಜಾರಿಗೆ ತರುತ್ತಿದೆ. ಇದಕ್ಕನುಗುಣವಾಗಿ ಪ್ರತಿಯೊಬ್ಬ ತಯಾರಕನು ಮತ್ತು ಭಾಂಗಿ (ಪೊಟ್ಟಣ) ಕಟ್ಟುವವನು, ಭಾಂಗಿಯ ಮೇಲೆ ತಯಾರಕನ ಹೆಸರು, ಪ್ಯಾಕ್ ಮಾಡುವವನ ಹೆಸರು, ವಸ್ತು ತಯಾರಾದ ಮತ್ತು ಪ್ಯಾಕ್ ಮಾಡಿದ ದಿನಾಂಕ, ವಸ್ತುವಿನ ನಿವ್ವಳ ತೂಕ ಮತ್ತು ನಿವ್ವಳ ಬೆಲೆ, ಇವುಗಳನ್ನು ಸೂಚಿಸುವುದನ್ನು ಶಾಸನರೀತ್ಯಾ ಕಡ್ಡಾಯ ಮಾಡಲಾಗಿದೆ.

ಮಂಡ್ಯದ ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು ನೀಡಿರುವ ಮಾಹಿತಿಯ ಪ್ರಕಾರ ೧೯೯೯-೨೦೦೦ ದಲ್ಲಿದ್ದಂತೆ ಮಂಡ್ಯ ಜಿಲ್ಲೆಯಲ್ಲಿ ೨೧೭ ಕೈಗಾರಿಕಾ ಸಂಸ್ಥೆಗಳು, ೨೧೧ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳು, ೨೮ ಇಂಧನ ಪಂಪುಗಳು, ೧೦೧೭೪ ವರ್ತಕರು ಮತ್ತು ೧೦೩೬ ಆಟೋ ಮತ್ತು ಟ್ಯಾಕ್ಸಿ ಮೀಟರ್‌ಗಳು ತೂಕ ಮತ್ತು ಅಳತೆ ಪರಿವೀಕ್ಷಣೆಯ ವ್ಯಾಪ್ತಿಗೆ ಸೇರಿದ್ದವು. ೨೦೦೨ರ ಮಾರ್ಚ್ ಕೊನೆಯಲ್ಲಿದ್ದಂತೆ ಒಟ್ಟು ೧೦,೨೯೦ ಅಂಗಡಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳು, ಇಂಧನ ಪಂಪುಗಳು, ವರ್ತಕರು ಮತ್ತು ೬೦ ಆಟೋ ಮತ್ತು ಟ್ಯಾಕ್ಸಿ ಮೀಟರ್‌ಗಳು ತೂಕ ಮತ್ತು ಅಳತೆಯ ಪರಿವೀಕ್ಷಣೆಯ ವ್ಯಾಪ್ತಿಗೆ ಸೇರಿದ್ದವು.

**ಕೋಷ್ಟಕ ೬.೩೦ ಇತ್ತೀಚಿನ ಕೆಲವು ವರ್ಷಗಳಲ್ಲಿ ಇಲಾಖೆಯ ಪರಿವೀಕ್ಷಣೆಗೆ ಒಳಪಟ್ಟ ತೂಕಗಳು, ಅಳತೆಗಳು, ತೂಕದ ಸಾಧನಗಳು ಮತ್ತು ಅಳತೆ ಸಾಧನಗಳ ವಿವರ**

| ವಿವರ | ವರ್ಷ | | | | | |
|---|---|---|---|---|---|---|
| | ೧೯೯೫-೯೬ | ೧೯೯೬-೯೭ | ೧೯೯೭-೯೮ | ೧೯೯೮-೯೯ | ೧೯೯೯-೦೦ | ೨೦೦೧-೦೨ |
| ತೂಕಗಳು | ೫೪,೩೮೫ | ೬೧,೦೯೩ | ೫೮,೩೫೨ | ೬೦,೮೦೭ | ೬೬,೦೪೧ | ೭೬,೩೨೯ |
| ಅಳತೆಗಳು | ೧೭,೬೨೬ | ೧೯,೫೩೧ | ೧೮,೪೯೦ | ೧೭,೮೧೧ | ೧೯,೪೦೫ | ೧೮,೯೦೪ |
| ತೂಕದ ಸಾಧನಗಳು | ೧೨,೯೮೬ | ೧೪,೨೨೪ | ೧೪,೦೫೩ | ೧೪,೨೬೯ | ೧೫,೧೫೧ | ೧೬,೫೨೧ |
| ಅಳತೆ ಸಾಧನಗಳು | ೧೫೬ | ೨೯೫ | ೨೩೧ | ೪೯೯ | ೨೫೭ | ೨೩೯ |

**ಕೋಷ್ಟಕ ೬.೩೧ ಇತ್ತೀಚಿನ ವರ್ಷಗಳಲ್ಲಿ ಇಲಾಖೆಯು ಜಿಲ್ಲೆಯಲ್ಲಿ ಸಾಧಿಸಿರುವ ಪ್ರಗತಿಯ ವಿವರ**

| ವಿವರ | ವರ್ಷ | | | |
|---|---|---|---|---|
| | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೧-೦೨ |
| ಸತ್ಯಾಪನಾ (ವೆರಿಫಿಕೇಶನ್) ಶುಲ್ಕ (ರೂ.) | ೫,೬೬,೦೯೧ | ೬,೪೭,೪೭೧ | ೭,೨೨,೨೩೧ | ೮,೭೭,೪೦೨ |
| ನಿಯಮ ಉಲ್ಲಂಘನೆ ಸಂಬಂಧ ಹೂಡಲಾದ ಮೊಕದ್ದಮೆಗಳು : | | | | |
| ಅ. ತೂಕ ಅಳತೆ | ೭೧೮ | ೬೭೬ | ೭೦೨ | ೭೯೪ |
| ಆ. ಪೊಟ್ಟಣ ಸಾಮಗ್ರಿ | ೧೮ | ೩೦ | ೩೪ | ೪೪ |
| ಅಭಿಸಂಧಾನವಾದ ಮೊಕದ್ದಮೆಗಳು : | | | | |
| ಅ. ತೂಕ ಅಳತೆ | ೬೬೪ | ೬೧೫ | ೬೯೭ | ೭೩೪ |
| ಆ. ಪೊಟ್ಟಣ ಸಾಮಗ್ರಿ | ೧೩ | ೧೮ | ೩೪ | ೩೩ |
| ವಸೂಲಾದ ದಂಡ (ರೂ.) : | | | | |
| ಅ. ತೂಕ ಅಳತೆ | ೯೨,೫೨೫ | ೯೩,೩೮೫ | ೧,೧೧,೭೪೦ | ೧,೪೪,೮೭೦ |
| ಆ. ಪೊಟ್ಟಣ ಸಾಮಗ್ರಿ | ೫,೭೦೦ | ೫,೫೫೦ | ೧೧,೫೦೦ | ೧೭,೦೦೦ |
| ನ್ಯಾಯಾಲಯದಲ್ಲಿ ಇತ್ಯರ್ಥವಾದ ಮೊಕದ್ದಮೆಗಳು : | | | | |
| ಅ. ತೂಕ ಅಳತೆ | ೧೫ | ೨೨ | ೩೪ | ೨೭ |
| ಆ. ಪೊಟ್ಟಣ ಸಾಮಗ್ರಿ | ೩ | ೪ | ೫ | ೨ |
| ನ್ಯಾಯಾಲಯದಲ್ಲಿ ವಿಧಿಸಿರುವ ಜುಲ್ಮಾನೆ (ರೂ.) : | | | | |
| ಅ. ತೂಕ ಅಳತೆ | ೪,೦೦೦ | ೬,೧೮೦ | ೯,೪೫೦ | ೧,೦೫೦ |
| ಆ. ಪೊಟ್ಟಣ ಸಾಮಗ್ರಿ | ೮೫೦ | ೧೦೫೦ | ೭೦೦ | – |

## ಉಗ್ರಾಣ ವ್ಯವಸ್ಥೆ

ಸುಗ್ಗಿಯ ಕಾಲದಲ್ಲಿ ವ್ಯವಸಾಯ ಉತ್ಪನ್ನಗಳು ರಾಶಿಯಾದ ಮೇಲೆ, ಅವುಗಳನ್ನು ವರ್ಷವಿಡೀ ಉಪಯೋಗಿಸುವುದಕ್ಕಾಗಿ ರೈತರು ತಮ್ಮ ಮನೆಗಳಲ್ಲೇ ಕಣಜ, ಹಗೇವು ಮುಂತಾದ ಉಗ್ರಾಣಗಳಲ್ಲಿ ಶೇಖರಿಸಿಡುತ್ತಾರೆ. ಈ ರೀತಿಯ ಸಾಂಪ್ರದಾಯಿಕ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವುದರಿಂದ ಧಾನ್ಯಗಳು ಹಾಳಾಗುವುದೂ ಉಂಟು. ಭೂಮಿಯೊಳಗೆ ಮಾಡುವ ಕಣಜಗಳು ದೋಷಪೂರಿತವಾಗಿರುತ್ತವೆ. ಈ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಉತ್ತಮಪಡಿಸಲು ಸರ್ಕಾರ ಉಗ್ರಾಣಗಳ ನಿರ್ಮಾಣಕ್ಕೆ ಒಂದು ಯೋಜನೆಯನ್ನು ರೂಪಿಸಿತು. ರೈತರಿಗೆ ನೂತನ ಉಗ್ರಾಣಗಳ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುವುದು ಒಂದು ಅಂಶವಾದರೆ, ಸರ್ಕಾರವೇ ಉಗ್ರಾಣಗಳನ್ನು ಕಟ್ಟಿಸಿ, ರೈತರು ಉತ್ಪಾದಿಸಿದ ವಸ್ತುಗಳನ್ನು ರಕ್ಷಿಸುವುದು ಮತ್ತೊಂದು ಅಂಶ. ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಗ್ರಾಣ ಯೋಜನೆಯನ್ನು ಅಂಗೀಕರಿಸಿದವು. ರಾಷ್ಟ್ರಮಟ್ಟದಲ್ಲಿ ಕೇಂದ್ರೀಯ ಉಗ್ರಾಣ ನಿಗಮವನ್ನು ಕೇಂದ್ರ ಸರ್ಕಾರವೂ ರಾಜ್ಯಗಳ ಮಟ್ಟದಲ್ಲಿ ರಾಜ್ಯ ಉಗ್ರಾಣ ನಿಗಮಗಳನ್ನು ರಾಜ್ಯ ಸರ್ಕಾರಗಳು ಸ್ಥಾಪಿಸಿದವು. ಕೇಂದ್ರಿಯ ಉಗ್ರಾಣ ನಿಗಮ ಮಂಡ್ಯದ ಅಸಿಟೇಟ್ ಟೌನ್‌ನಲ್ಲಿ ೪,೮೬೪ ಮೆಟ್ರಿಕ್ ಟನ್ ಸಾಮರ್ಥ್ಯದ ಒಂದು ಉಗ್ರಾಣವನ್ನು ಫೆಬ್ರವರಿ ೧೯೯೯ರಲ್ಲಿ ಸ್ಥಾಪಿಸಿ ದಾಸ್ತಾನು ಸೌಕರ್ಯವನ್ನು ಕಲ್ಪಿಸಿದೆ. ಈ ಉಗ್ರಾಣದ ಮಳಿಗೆ ೧೯೯೯–೨೦೦೦ ವರ್ಷದಲ್ಲಿ ಒಟ್ಟು ೯,೮೨೮ ಮೆ.ಟನ್‌ಗಳ ವಿವಿಧ ಸರಕುಗಳ ವಹಿವಾಟನ್ನು ನಿರ್ವಹಿಸಿತ್ತು. ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮಂಡ್ಯದಲ್ಲಿ ೧೯೬೯ರಲ್ಲಿ, ಮದ್ದೂರಿನಲ್ಲಿ ೧೯೭೯ರಲ್ಲಿ, ಕೃಷ್ಣರಾಜಪೇಟೆಯಲ್ಲಿ ೧೯೮೬ರಲ್ಲಿ, ಪಾಂಡವಪುರದಲ್ಲಿ ೧೯೯೬ರಲ್ಲಿ ಮತ್ತು ಶ್ರೀರಂಗಪಟ್ಟಣದಲ್ಲಿ ೧೯೯೯ರಲ್ಲಿ ಸ್ವಂತ ಉಗ್ರಾಣ ಮಳಿಗೆಗಳನ್ನು ಸ್ಥಾಪಿಸಿತು. ರಾಜ್ಯ ಉಗ್ರಾಣ ನಿಗಮ ಮಳವಳ್ಳಿ ಮತ್ತು ಮೇಲಿನ ಕೆಲವು ಸ್ಥಳಗಳಲ್ಲಿ ಬಾಡಿಗೆ ಉಗ್ರಾಣ ಮಳಿಗೆಗಳನ್ನು ನಿರ್ವಹಿಸುತ್ತಿದೆ. ೨೦೦೦–೦೧ನೇ ಸಾಲಿನಲ್ಲಿದ್ದಂತೆ ಪ್ರತೀ ಸ್ಥಳದಲ್ಲಿನ ಸ್ವಂತ ಮತ್ತು ಬಾಡಿಗೆ ಉಗ್ರಾಣಗಳ ಸರಾಸರಿ ದಾಸ್ತಾನು ಸಾಮರ್ಥ್ಯ ಮತ್ತು ಸ್ಥಳಾವೃತ್ತಿ (ಮೆಟ್ರಿಕ್ ಟನ್ ಗಳಲ್ಲಿ) ಈ ಮುಂದಿನಂತಿತ್ತು. ಮಂಡ್ಯ ೨೦,೩೯೦ (೧೯,೨೧೦), ಮದ್ದೂರು ೬,೭೨೯ (೯,೪೭೦), ಕೃಷ್ಣರಾಜಪೇಟೆ ೮೧೧ (೬೫೮), ಶ್ರೀರಂಗಪಟ್ಟಣ ೧,೪೨೬(೧,೪೩೦) ಮತ್ತು ಮಳವಳ್ಳಿ ೧,೯೫೫ (೨,೭೦೧). ಆವರಣದಲ್ಲಿನ ಸಂಖ್ಯೆ ಸ್ಥಳಾವೃತ್ತಿಯನ್ನು ಸೂಚಿಸುತ್ತದೆ. ಉಗ್ರಾಣ ನಿಗಮ ದಾಸ್ತಾನುಗಾರರಿಗೆ ಸಂಗ್ರಹಣೆ ಸೌಲಭ್ಯವನ್ನು ಒದಗಿಸುವುದಲ್ಲದೆ ದಾಸ್ತಾನು ಮಾಡಲ್ಪಟ್ಟ ಸರಕುಗಳಿಗೆ ಧೂಮೋಪಚಾರ ಮತ್ತು ಔಷಧಿ ಸಿಂಪರಣೆ ಸೌಲಭ್ಯವನ್ನೂ ಒದಗಿಸುತ್ತದೆ. ದಾಸ್ತಾನುಗಾರರು ಉಗ್ರಾಣ ರಶೀದಿಯ ಆಧಾರದ ಮೇಲೆ ಬ್ಯಾಂಕುಗಳಲ್ಲಿ ಸಾಲವನ್ನೂ ಪಡೆಯಬಹುದಾಗಿದೆ.

## ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ

ಇಂದಿನ ಸಂಕೀರ್ಣಮಯ ಮತ್ತು ಶೋಷಣೆಯಿಂದ ಕೂಡಿದ ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನನ್ನೇ 'ಅಗ್ರಮಾನ್ಯ', 'ಸರ್ವಸ್ವ' ಎಂದು ಹಾಡಿಹೊಗಳಿದರೂ, ಗ್ರಾಹಕನು ಎಷ್ಟೇ ಜಾಗ್ರತನಾಗಿದ್ದರೂ, ಹಲವಾರು ವಿಧದಲ್ಲಿ ವರ್ತಕರಿಂದ, ವಿತರಕರಿಂದ, ಮಧ್ಯವರ್ತಿಗಳಿಂದ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ, ಒಂದಲ್ಲಾ ಒಂದು ಬಗೆಯ ಶೋಷಣೆಗೆ ಒಳಗಾಗುತ್ತಾನೆ. ಈ ನಿರಂತರ ಶೋಷಣೆಯನ್ನು ಕೆಲಮಟ್ಟಿಗೆ ತಪ್ಪಿಸಲು ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಮತ್ತು ವಾಣಿಜ್ಯಕ ಮೌಲ್ಯಗಳನ್ನು, ಸೇವೆಗಳನ್ನು ಸುಧಾರಿಸಲು ಸಹಾಯಕವಾಗುವಂತೆ

ಕೇಂದ್ರ ಸರ್ಕಾರವು ೧೯೮೬ರಲ್ಲಿ 'ಗ್ರಾಹಕ ಸಂರಕ್ಷಣಾ ಕಾಯ್ದೆ'ಯನ್ನು ರೂಪಿಸಿತು. ಅದರ ಅನ್ವಯ ಗ್ರಾಹಕರ ಕುಂದುಕೊರತೆಗಳನ್ನು ನಿವಾರಿಸಲು ಕರ್ನಾಟಕ ಸರ್ಕಾರವು ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳ ಕೇಂದ್ರಸ್ಥಾನಗಳಲ್ಲಿ ಗ್ರಾಹಕರ ವೇದಿಕೆಗಳನ್ನು ಸ್ಥಾಪಿಸಿದೆ. ಈ ಕಾಯ್ದೆಯಡಿಯಲ್ಲಿ ದೂರುದಾರನ ವಸ್ತುಗಳ/ಸೇವೆಯ ಮೌಲ್ಯ ರೂ. ೫ ಲಕ್ಷಕ್ಕಿಂತ ಕಡಿಮೆ ಇದ್ದಾಗ ಜಿಲ್ಲಾ ವೇದಿಕೆಗಳಲ್ಲೂ, ಮೌಲ್ಯ ರೂ. ೫ ಲಕ್ಷದಿಂದ ೨೦ ಲಕ್ಷಗಳಾಗಿದ್ದಾಗ ರಾಜ್ಯ ಮಟ್ಟದ ವೇದಿಕೆಗೂ ಹಾಗೂ ಮೌಲ್ಯವು ರೂ. ೨೦ ಲಕ್ಷ ಮೇಲ್ಪಟ್ಟಲ್ಲಿ ರಾಷ್ಟ್ರಮಟ್ಟದ ವೇದಿಕೆ, ಹೊಸ ದೆಹಲಿಗೆ ದೂರು ಸಲ್ಲಿಸಬಹುದಾಗಿರುತ್ತದೆ. (೨೦೦೨ರ ಡಿಸೆಂಬರ್‌ನಲ್ಲಿ ಈ ಕಾಯ್ದೆಗೆ ತಿದ್ದುಪಡಿ ಮಾಡಿದ್ದು ಅದರಂತೆ ವಸ್ತುಗಳ / ಸೇವೆಯ ಮೌಲ್ಯ ಐದರಿಂದ ೨೦ ಲಕ್ಷ ರೂ.ಗಳವರೆಗೆ ಇದ್ದಾಗ ಜಿಲ್ಲಾ ವೇದಿಕೆಗಳಲ್ಲೂ, ಮೌಲ್ಯ ೨೦ ಲಕ್ಷ ರೂ.ಗಳಿಂದ ಒಂದು ಕೋಟಿ ರೂ.ಗಳಾಗಿದ್ದಾಗ ರಾಜ್ಯ ಮಟ್ಟದ ವೇದಿಕೆಗೂ ಹಾಗೂ ೨೦ ಲಕ್ಷ ರೂ.ಗಳಿಂದ ಒಂದು ಕೋಟಿ ರೂ.ಗೂ ಮೇಲ್ಪಟ್ಟಲ್ಲಿ ರಾಷ್ಟ್ರ ಮಟ್ಟದ ವೇದಿಕೆ, ಹೊಸದೆಹಲಿಗೂ ದೂರು ಸಲ್ಲಿಸಬಹುದಾಗಿರುತ್ತದೆ.)

ಮೇಲಿನ ಕಾನೂನಿನನ್ವಯ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದಂತೆ 'ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ'ಯು ಮಂಡ್ಯದಲ್ಲಿ ೧೯೯೧ರಲ್ಲಿ ಸ್ಥಾಪನೆಯಾಯಿತು. ೧೯೯೧ ರಿಂದ ೨೦೦೨ರ ಮಾರ್ಚ್ ಅಂತ್ಯದವರೆಗೆ ಈ ಗ್ರಾಹಕರ ವೇದಿಕೆಯಲ್ಲಿ ದಾಖಲಾದ ವಿವಿಧ ಬಗೆಯ ದೂರುಗಳ ಸಂಖ್ಯೆ ೧೧೧೮ ಆಗಿದ್ದಿತು. ಈ ಅವಧಿಯಲ್ಲಿ ಗ್ರಾಹಕರ ಪರವಾಗಿ ನಿರ್ಣಯಿಸಲ್ಪಟ್ಟ ವ್ಯಾಜ್ಯಗಳ ಸಂಖ್ಯೆ ೫೪೭ ಆಗಿದ್ದಿತು. ಈ ಅರೆ ನ್ಯಾಯಾಲಯಕ್ಕೆ ಸಲ್ಲಿಸಲಾದ ದೂರಗಳಲ್ಲಿ ಹೆಚ್ಚಾಗಿ ಜೀವವಿಮಾ ನಿಗಮ ಹಾಗೂ ಇತರೆ ವಿಮಾ ಕಂಪನಿಗಳು, ಬೀಜ ಕಂಪನಿ, ದೂರವಾಣಿ ಇಲಾಖೆ, ಅಂಚೆ ಇಲಾಖೆ, ಸಹಕಾರ ಸಂಘ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸೇವೆ ಮತ್ತು ಸರಕಿನ ದೋಷ ಇತ್ಯಾದಿಗಳಿಗೆ ಅನ್ವಯಿಸಿದ್ದವು.